## ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ

ಸ್ಕೂಲ್ ಲೀಡರ್‌ಶಿಪ್ ಅಕಾಡೆಮಿ (SLA-SISLEP), ಧಾರವಾಡ

(ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL-NIEPA), ನವದೆಹಲಿ ಇವರ ಸಹಯೋಗದಲ್ಲಿ)

## ತರಬೇತಿ ಸಾಹಿತ್ಯ ಕೈಪಿಡಿ

# ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯಲ್ಲಿ ಶೈಕ್ಷಣಿಕ ನಾಯಕರ ಪಾತ್ರ




ಸಹಕಾರ

ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ವಿಜಯಪುರ

# ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಹಾಗೂ ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ.

**ಸ್ಕೂಲ್ ಲೀಡರ್‌ಶಿಪ್ ಅಕಾಡೆಮಿ (SLA-SISLEP), ಧಾರವಾಡ.**

**ನ್ಯಾಶನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL-NIEPA), ನವದೆಹಲಿ**

**ಇವರ ಸಹಯೋಗದಲ್ಲಿ**

## ತರಬೇತಿ ಸಾಹಿತ್ಯ ಕೈಪಿಡಿ

# "ಸುಸ್ಥಿರ ಅಭಿವೃದ್ಧಿ ಗುರಿ ಸಾಧನೆಯಲ್ಲಿ ಶೈಕ್ಷಣಿಕ ನಾಯಕರ ಪಾತ್ರ"

**ಸಹಕಾರ**

**ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ವಿಜಯಪುರ**

**2023–24**

## ಸಾಹಿತ್ಯ ರಚನಾ ತಂಡ

## ಪರಿಕಲ್ಪನೆ

**ಡಾ. ಬಿ.ಕೆ.ಎಸ್.ವರ್ಧನ್**
**ನಿರ್ದೇಶಕರು,**
ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ
(ಸಿಸ್ಲೆಪ್) ಕರ್ನಾಟಕ, ಧಾರವಾಡ.

## ಮಾರ್ಗದರ್ಶನ

ಶ್ರೀಮತಿ ಉಮಾದೇವಿ ಸೊನ್ನದ, ಪ್ರಾಚಾರ್ಯರು, ಡಯಟ್, ವಿಜಯಪುರ

## ತರಬೇತಿ ಸಾಹಿತ್ಯ ರಚನಾ ಸಂಪನ್ಮೂಲ ತಂಡ:

1. ಶ್ರೀ ನಾಗೇಂದ್ರ ಸಿನ್ನೂರ
   ಉಪನ್ಯಾಸಕರು, ಡಯಟ್ ವಿಜಯಪುರ
2. ಶ್ರೀ ಸಂಗಮೇಶ ಪೂಜಾರಿ
   ಮುಖ್ಯೋಪಾಧ್ಯಾಯರು, ಸರಕಾರಿ ಪ್ರೌಢಶಾಲೆ, ತಳೇವಾಡ
   ತಾ : ಬಸವನ ಬಾಗೇವಾಡಿ
3. ಶ್ರೀ ನಾರಾಯಣ ಬಾಬಾನಗರ
   ಮುಖ್ಯೋಪಾಧ್ಯಾಯರು, ಸರಕಾರಿ ಪ್ರೌಢಶಾಲೆ, ಚಿಮ್ಮಲಗಿ
   ತಾ: ಬಸವನ ಬಾಗೇವಾಡಿ.
4. ಶ್ರೀ ಮಡಿವಾಳಯ್ಯ ಸ್ಥಾವರಮಠ
   ಮುಖ್ಯೋಪಾಧ್ಯಾಯರು, ಸರಕಾರಿಉರ್ದು ಪ್ರೌಢಶಾಲೆ, ಕೋರವಾರ
   ತಾ: ದೇವರ ಹಿಪ್ಪರಗಿ.
5. ಶ್ರೀ ಪ್ರಮೋದ ಮೆಂಚ್
   ಉಪ ಪ್ರಾಚಾರ್ಯರು, ಕೆ.ಪಿ.ಎಸ್., ನಾಗಠಾಣ
   ತಾ: ವಿಜಯಪುರ ಗ್ರಾಮೀಣ.
6. ಜಿಲ್ಲಾ ಸಂಯೋಜಕರು, ಹಾಗೂ ಸದಸ್ಯರು ಅಜೀಂ ಪ್ರೇಮ್‌ಜೀ
   ಫೌಂಡೇಷನ್, ವಿಜಯಪುರ.

### ಎಸ್.ಎಲ್.ಎ – ಸಿಸ್ಲೆಪ್ ತಂಡ

- ಶ್ರೀಮತಿ ಎ.ಎನ್ ಶೀಲಾ, ಹಿರಿಯ ಸಹಾಯಕ ನಿರ್ದೇಶಕರು
- ಶ್ರೀಮತಿ ಸ್ವರೂಪಶೀಲಾ ಹೆಚ್ ವಿ, ಉಪನ್ಯಾಸಕರು
- ಶ್ರೀ ಮಹಾವೀರ ಹಂಚಿನಾಳ, ಸಹಾಯಕ ನಿರ್ದೇಶಕರು
- ಡಾ. ಪೂರ್ಣಿಮಾ ಮುಕ್ಕುಂದಿ, ಉಪನ್ಯಾಸಕರು
- ಡಾ. ಎನ್ ಹೆಚ್ ಪೂಜಾರ, ಉಪನ್ಯಾಸಕರು
- ಶ್ರೀಮತಿ ದೇವಿರಮ್ಮ ಎಸ್, ಉಪನ್ಯಾಸಕರು

# ನಿರ್ದೇಶಕರ ಆಶಯ ನುಡಿಗಳು



**ಡಾ.ಬಿ.ಕೆ.ಎಸ್.ವರ್ಧನ್**
**ನಿರ್ದೇಶಕರು**
**ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು**
**ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ.**

ಮಕ್ಕಳ ಶಿಕ್ಷಣ ಹಕ್ಕು ಕಾಯ್ದೆ–2009 ರ ಪ್ರಕಾರ ದೇಶದ ಪ್ರತಿಯೊಂದು ಅರ್ಹ ಮಗುವಿಗೂ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಖಚಿತಪಡಿಸುವುದು ಸಾಂವಿಧಾನಿಕ ಹೊಣೆಗಾರಿಕೆಯಾಗಿದೆ. ಅರ್ಹ ವಯೋಮಾನದ 6 ರಿಂದ 14 ವರ್ಷದ ಎಲ್ಲ ಮಕ್ಕಳಿಗೆ ಎಂಟು ವರ್ಷಗಳ ಗುಣಾತ್ಮಕ ಶಿಕ್ಷಣವನ್ನು ನಮ್ಮ ಶಾಲೆಗಳಲ್ಲಿ ಖಾತರಿಪಡಿಸುವುದು ಶಾಲಾ ಶಿಕ್ಷಣ ವ್ಯವಸ್ಥೆಯ ಹೊಣೆಗಾರಿಕೆಯಾಗಿದೆ. ಈ ಹಿನ್ನಲೆಯಲ್ಲಿ ಕರ್ನಾಟಕ ಸರಕಾರವು ಅನೇಕ ಉಪಕ್ರಮಗಳನ್ನು ಜಾರಿಗೆ ತಂದಿದೆ. ಶಿಕ್ಷಕರಿಗೆ ಬೆಂಬಲ ವ್ಯವಸ್ಥೆಯಾಗಿ ಕಾರ್ಯ ನಿರ್ವಹಿಸುವ ಶೈಕ್ಷಣಿಕ ಆಡಳಿತಗಾರರ ಮಾರ್ಗದರ್ಶನ, ಹಿಮ್ಮಾಹಿತಿ ಹಾಗೂ ಅನುಪಾಲನೆಯು ಕಾರ್ಯಕ್ಷೇತ್ರದಲ್ಲಿ ಅಗತ್ಯವಾಗಿದೆ. ಇರುವುದನ್ನು ಸರಿಯಾಗಿ ಅನುಷ್ಠಾನವಾಗುವಂತೆ ಮಾಡಬೇಕಾದರೆ ಇಲಾಖಾ ಕಾರ್ಯಕ್ರಮಗಳ ಕುರಿತಂತೆ ನಮ್ಮ ಅರ್ಥೈಸಿಕೊಳ್ಳುವಿಕೆ ಹೇಗಿರಬೇಕು ಎಂದು ಅರಿಯುವುದು ಮುಖ್ಯವಾಗಿದೆ. ಈ ಪ್ರಯುಕ್ತ ಶೈಕ್ಷಣಿಕ ಆಡಳಿತಗಾರರು ಇಲಾಖಾ ಕಾರ್ಯಕ್ರಮಗಳ ಮೂಲ ಆಶಯ ಹಾಗೂ ಕಾಳಜಿಯನ್ನು ಅರ್ಥೈಸಿಕೊಂಡು ಶಿಕ್ಷಣದ ಗುಣಾತ್ಮಕತೆಯ ನೆಲೆಯನ್ನು ವಿಸ್ತರಿಸುವ ನಿಟ್ಟಿನಲ್ಲಿ ಶಿಕ್ಷಣದ ಗುರಿಗಳನ್ನು ಶಾಲೆಗಳಲ್ಲಿ ಸಾಕಾರಗೊಳಿಸುವ ಮೂಲಕ ನ್ಯಾಯಯುತ, ಸಮಾನತೆಯ, ಮಾನವೀಯ ಮತ್ತು ಸುಸ್ಥಿರ ಸಮಾಜ ನಿರ್ಮಾಣ ಮಾಡಬೇಕಾಗಿದೆ.

ಶೈಕ್ಷಣಿಕ ಆಡಳಿತಗಾರರಿಗೆ ನಾಯಕತ್ವ ತರಬೇತಿ ನೀಡುವ ಜವಾಬ್ದಾರಿಯನ್ನು ಸರ್ಕಾರವು ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (ಸಿಸ್ಲೆಪ್), ಕರ್ನಾಟಕ, ಧಾರವಾಡ, ಈ ಸಂಸ್ಥೆಗೆ ನೀಡಿದೆ. ಈ ಹಿನ್ನೆಲೆಯಲ್ಲಿ ಶೈಕ್ಷಣಿಕ ಆಡಳಿತಗಾರರಿಗೆ ಜ್ಞಾನ, ಕೌಶಲ, ಶೈಕ್ಷಣಿಕ ದೃಷ್ಟಿಕೋನ ಹಾಗೂ ಮನೋಭಾವದ ಅಂಶಗಳನ್ನು ಒಳಗೊಂಡಂತೆ ಹಲವಾರು ಆಯಾಮಗಳುಳ್ಳ ಆಡಳಿತಾತ್ಮಕ ಹಾಗೂ ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿಯ ಒಟ್ಟು ಹನ್ನೆರೆಡು ತರಬೇತಿ ಸಾಹಿತ್ಯಗಳನ್ನು ಪ್ರಸಕ್ತ ಸಾಲಿನಲ್ಲಿ ಸಿದ್ಧಪಡಿಸಲಾಗಿದೆ. ಶೈಕ್ಷಣಿಕ ಆಡಳಿತಗಾರರು ತಮ್ಮ ಕಾರ್ಯಕ್ಷಮತೆ, ದಕ್ಷತೆಯೊಂದಿಗೆ ಎಲ್ಲರಿಗೂ ಮಾರ್ಗದರ್ಶನ ಮಾಡುವ ಸಾಮರ್ಥ್ಯ ಹೊಂದಿರಬೇಕಾದುದು ಅಗತ್ಯವಾಗಿದೆ. ಗುಣಾತ್ಮಕ ಕಲಿಕೆಯ ಮೂಲಕ ವಿದ್ಯಾರ್ಥಿಗಳ ಉಜ್ವಲ ಭವಿಷ್ಯ ರೂಪಗೊಳ್ಳುವಂತೆ ಮಾಡಲು ಶಾಲಾ ಶಿಕ್ಷಣ ಇಲಾಖೆಯ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ಸಹಾಯಕವಾಗಿವೆ.

2023–24 ನೇ ಸಾಲಿನಲ್ಲಿ ನ್ಯಾಷನಲ್ ಸೆಂಟರ್ ಫಾರ್ ಸ್ಕೂಲ್ ಲೀಡರ್‌ಶಿಪ್ (NCSL), ದೆಹಲಿ ಇವರು ಮಾಡ್ಯೂಲ್‌ಗಳ ರಚನೆಗಾಗಿ ರೂ. 65000/– ಗಳನ್ನು ಬಿಡುಗಡೆ ಮಾಡಿದ್ದು, ಈ ಅನುದಾನದಲ್ಲಿ

ಶಾಲಾ ಶಿಕ್ಷಣ ಇಲಾಖೆಯ ವಿವಿಧ ಸ್ತರದ ಅಧಿಕಾರಿಗಳಿಗೆ ನಾಯಕತ್ವ ಹಾಗೂ ಶೈಕ್ಷಣಿಕ ಕ್ಷೇತ್ರಗಳಿಗೆ ಅವಶ್ಯವಿರುವ ಹನ್ನೆರೆಡು ವಿಷಯಗಳ ಮಾಡ್ಯೂಲ್‌ಗಳನ್ನು ರಚಿಸಲು ನಿರ್ಧರಿಸಲಾಯಿತು.ಈ ಮಾಡ್ಯೂಲ್‌ಗಳ ರಚನೆಗಾಗಿ ಧಾರವಾಡ, ಬೆಳಗಾವಿ, ಹಾವೇರಿ, ಗದಗ, ಇಳಕಲ್, ವಿಜಯಪುರ, ತುಮಕೂರು, ಚಿಕ್ಕಮಗಳೂರು, ಬೆಂಗಳೂರು ಗ್ರಾಮೀಣ, ಮೈಸೂರು, ಕೋಲಾರ ಡಯಟ್‌ಗಳನ್ನು ಆಯ್ಕೆ ಮಾಡಿಕೊಂಡು ಪ್ರತಿಯೊಂದು ಡಯಟ್‌ಗೆ ತಲಾ ರೂ.5000/– ಗಳನ್ನು ಬಿಡುಗಡೆ ಮಾಡಿ, ಒಂದೊಂದು ವಿಷಯದ ತರಬೇತಿ ಸಾಹಿತ್ಯ ರಚನೆಯ ಜವಾಬ್ದಾರಿಯನ್ನು ನೀಡಲಾಯಿತು. ಅವರಿಂದ ಸಿದ್ಧಪಡಿಸಲಾದ ಮಾಡ್ಯೂಲ್‌ಗಳನ್ನು ಸಿಸ್ಲೆಪ್‌ನ ಅಧಿಕಾರಿವೃಂದ, ವಿಷಯ ಪರಿಣಿತರು ಹಾಗೂ ಸಂಬಂಧಿಸಿದ ಡಯಟ್‌ನ ಸಿಬ್ಬಂದಿಗಳೊಂದಿಗೆ ಚರ್ಚಿಸಿ ಪುನರ್ ಪರಿಶೀಲಿಸುವ ಮೂಲಕ ಇನ್ನಷ್ಟು ಉತ್ತಮೀಕರಿಸಿ ಅಂತಿಮಗೊಳಿಸಲಾಯಿತು.

ಪ್ರಸ್ತುತ ತರಬೇತಿ ಸಾಹಿತ್ಯಗಳು ಅಂತಿಮ ರೂಪವನ್ನು ಪಡೆಯಲು ಕಾರಣೀಭೂತರಾದ ಶಾಲಾ ಶಿಕ್ಷಣ ಇಲಾಖೆಯ ಎಲ್ಲಾ ಅಧಿಕಾರಿಗಳ, ಸಂಪನ್ಮೂಲ ವ್ಯಕ್ತಿಗಳ, ಶಿಕ್ಷಕರ ಹಾಗೂ ಬೋಧಕೇತರ ವೃಂದದವರ ಸಹಕಾರ ಹಾಗೂ ಪ್ರಯತ್ನವು ಅಭಿನಂದನಾರ್ಹವಾಗಿದೆ. ಎಲ್ಲ ಅರ್ಹ ಮಕ್ಕಳಿಗೂ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು, ಶಿಕ್ಷಣದ ದೂರಗಾಮಿ ಗುರಿಗಳನ್ನು ಸಾಕಾರಗೊಳಿಸಲು, ಸುಸ್ಥಿರ ಹಾಗೂ ಸಮಾನತೆಯ ಸಮಾಜ ನಿರ್ಮಾಣ ಮಾಡಲು, ಹೊಸ ಸಾಧ್ಯತೆಗಳನ್ನು ಸೃಷ್ಟಿಸಲು ನಮ್ಮ ಮೇಲ್ವಿಚಾರಕ ಅಧಿಕಾರಿಗಳಿಗೆ ಈ ತರಬೇತಿ ಸಾಹಿತ್ಯಗಳು ನೆರವಾಗುತ್ತವೆಂದು ಆಶಿಸುತ್ತೇನೆ.

**25, ಮಾರ್ಚ್, 2025** (ಡಾ.ಬಿ.ಕೆ.ಎಸ್.ವರ್ಧನ್)

## ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆಯ ಪರಿಚಯ

ಕರ್ನಾಟಕ ಸರಕಾರವು ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ಜಾರಿಗೆ ತರಲು ಶಿಕ್ಷಣಾಧಿಕಾರಿಗಳ ಹಾಗೂ ಶಾಲಾ ಮುಖ್ಯಸ್ಥರ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರುವ ಉದ್ದೇಶದಿಂದ ಶಾಲಾ ಮಟ್ಟದಿಂದ ರಾಜ್ಯ ಮಟ್ಟದವರೆಗಿನ ಅಧಿಕಾರಿಗಳಿಗೆ ಅಗತ್ಯವಾದ ಸಾಮರ್ಥ್ಯಾಭಿವೃದ್ಧಿಯನ್ನು ಮಾಡುವ ಸಲುವಾಗಿ 1986 ರಾಷ್ಟ್ರೀಯ ಶಿಕ್ಷಣ ನೀತಿ ಹಾಗೂ 1992ರ ಕಾರ್ಯಾನುಸರಣ ಯೋಜನೆ (Programme of action -POA) ಗಳ ಶಿಫಾರಸ್ಸುಗಳನ್ವಯ 2010ರಲ್ಲಿ **'ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ' (State** Institute of School Leadership Educational Planning and Management ) ಯನ್ನು ಸ್ಥಾಪಿಸಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯನ್ನು ನೋಂದಾಯಿಸಲಾಗಿದ್ದು, 'ಕನ್ನಡದ ದೀಪ' ಎಂದು ಹೆಸರಾಗಿರುವ ಡೆಪ್ಯೂಟಿ ಚನ್ನಬಸಪ್ಪನವರು ಕಟ್ಟಿ ಬೆಳೆಸಿದ ಧಾರವಾಡದ ಜಿಲ್ಲಾ ಶಿಕ್ಷಕರ ತರಬೇತಿ ಸಂಸ್ಥೆ, ಡಯಟ್ ಆವರಣದಲ್ಲಿ ಪ್ರಸ್ತುತ ಈ ಸಂಸ್ಥೆಯು ಸ್ವಂತ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದೆ.



### ಸಂಸ್ಥೆಯ ದೂರದರ್ಶಿತ್ವ:

**" ಶಾಲಾ ನಾಯಕತ್ವದಲ್ಲಿ ಮಾರ್ಗದರ್ಶಿ ಅಧಿಕಾರಿಗಳ ಬಲವರ್ಧನೆ "**

ನಮ್ಮ ದೇಶದ ಶಾಲಾ ಶಿಕ್ಷಣ ಕ್ಷೇತ್ರವು ಇಡೀ ಜಗತ್ತಿನಲ್ಲಿಯೇ ವಿಸ್ತೃತವಾದುದಾಗಿದೆ. ಶಾಲಾ ಹಂತದಿಂದ ರಾಜ್ಯ ಮಟ್ಟದವರೆಗೆ ಶಿಕ್ಷಕರು, ವಿವಿಧ ಸ್ತರದ ಇಲಾಖಾ ಮೇಲ್ವಿಚಾರಕರು ಮತ್ತು ಅಧಿಕಾರಿಗಳು ಸಮುದಾಯದ ಸಹಭಾಗಿತ್ವದ ಮೂಲಕ ಶಾಲಾ ಶಿಕ್ಷಣದ ಗುರಿಯನ್ನು ತಲುಪುವಲ್ಲಿ ಶ್ರಮಿಸುತ್ತಿದ್ದಾರೆ. ಕರ್ನಾಟಕ ರಾಜ್ಯವೊಂದರಲ್ಲಿಯೇ 2024–25 ನೇ ಸಾಲಿನಲ್ಲಿ ಒಂದನೇ ತರಗತಿಯಿಂದ 10ನೇ ತರಗತಿಯವರೆಗೆ ಅಂದಾಜು ಒಂದು ಕೋಟಿಗೂ ಅಧಿಕ ವಿದ್ಯಾರ್ಥಿಗಳು ವ್ಯಾಸಂಗ ಮಾಡುತ್ತಿದ್ದಾರೆ. ಈ ಬೃಹತ್ತಾದ ಶಿಕ್ಷಣ ವ್ಯವಸ್ಥೆಯು ಪರಿಣಾಕಾರಿಯಾಗಿ ಕೆಲಸ ಮಾಡುವಂತಾಗಲು, ಸ್ಥಳೀಯ ಅಗತ್ಯತೆಗಳು ಮತ್ತು ಜಾಗತಿಕ ಚಿಂತನೆಗಳಿಗೆ ಸೇತುವೆಯನ್ನು ಕಟ್ಟಲು ಸ್ವಾಯತ್ತತೆಯುಳ್ಳ, ಕ್ರಿಯಾಶೀಲವಾದ ಹಾಗೂ ಸಮರ್ಥ ಸಮುದಾಯದ ಅಗತ್ಯವಿದ್ದು,

ಇಂತಹ ಒಂದು ಸಮುದಾಯವನ್ನು ಆಡಳಿತ ವಿಕೇಂದ್ರೀಕರಣದ ಮೂಲಕ ರೂಪಿಸಬೇಕು ಎನ್ನುವುದು ಸಂವಿಧಾನದ ಆಶಯವಾಗಿದೆ.

ಜಾಗತಿಕ ಹಂತದಲ್ಲಿ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣಕ್ಕೆ ಪೂರಕವಾಗಿ ಕೆಲಸ ಮಾಡುತ್ತಿರುವ ಯುನೆಸ್ಕೊ, ಶೈಕ್ಷಣಿಕ ಯೋಜನೆಗಳನ್ನು ರೂಪಿಸಲು ಮತ್ತು ನಿರ್ವಹಣೆ ಮಾಡಲು ವಿಶಿಷ್ಟವಾದ ಹಾಗೂ ವಿಭಿನ್ನವಾದ ಸಾಮರ್ಥ್ಯಗಳ ಅಗತ್ಯವಿದೆ ಎಂಬುದನ್ನು ತಿಳಿಸುವುದಲ್ಲದೇ, 'ಇಲಾಖೆ' ಮತ್ತು 'ಸಮುದಾಯದ ಸಹಭಾಗಿತ್ವ' ದಲ್ಲಿ 'ಯೋಜನೆ ಮತ್ತು ನಿರ್ವಹಣೆ 'ಯನ್ನು ನಿಭಾಯಿಸಬೇಕು ಎನ್ನುವುದು ಇದರ ನಿಲುವಾಗಿದೆ.

ಈ ಹಿನ್ನೆಲೆಯಲ್ಲಿ 1986 ಹಾಗೂ 1992 ರ ರಾಷ್ಟ್ರೀಯ ಶಿಕ್ಷಣ ನೀತಿಗಳು ಶೈಕ್ಷಣಿಕ ಕ್ಷೇತ್ರದಲ್ಲಿ ನಿರ್ವಹಣೆಗೆ ಪ್ರಾಮುಖ್ಯತೆಯನ್ನು ನೀಡಿವೆ. ಇದರನ್ವಯ ಎಲ್ಲ ರಾಜ್ಯಗಳಲ್ಲಿ ರಾಜ್ಯ ಹಂತದಲ್ಲಿ SIEMAT (State institute for Educational Management,Administration and Training)ನ್ನು ಸ್ಥಾಪನೆ ಮಾಡಲು ಶಿಫಾರಸ್ಸು ಮಾಡಲಾಯಿತು. ಕರ್ನಾಟಕ ರಾಜ್ಯದಲ್ಲಿ 'SIEMAT' ಹೆಸರಿನ ಬದಲಾಗಿ 2010–11 ರಲ್ಲಿ ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ (SISLEP-State Institute for School Leadership Educational Planning and Management) ಎಂಬ ಹೆಸರಿನಲ್ಲಿ ಸಂಸ್ಥೆಯು ಪ್ರಾರಂಭವಾಯಿತು. 'ಸಿಸ್ಲೆಪ್' ಕರ್ನಾಟಕ ಸೊಸೈಟಿಗಳ ಕಾಯ್ದೆಯ ಅಡಿಯಲ್ಲಿ ನೋಂದಣಿಯಾಗಿರುವ ಸ್ವಾಯತ್ತ ಸಂಸ್ಥೆಯಾಗಿದ್ದು, ಇದರ ವ್ಯವಸ್ಥಾಪನೆ ಹಾಗೂ ಕಾರ್ಯಕ್ರಮಗಳ ರೂಪುರೇಷೆಗಳನ್ನು ಆಡಳಿತ ಮಂಡಳಿ ಹಾಗೂ ಕಾರ್ಯ ನಿರ್ವಾಹಕ ಮಂಡಳಿಗಳ ಮೇಲುಸ್ತುವಾರಿಯಲ್ಲಿ ನಿರ್ವಹಿಸಲಾಗುತ್ತದೆ. ಸಂಸ್ಥೆಯಲ್ಲಿ ಪ್ರಮುಖವಾಗಿ ಐದು ವಿಭಾಗಗಳಲ್ಲಿ ಕ್ರಿಯಾಯೋಜನೆಯನ್ನು ರೂಪಿಸಿ ಶಾಲಾ ನಾಯಕತ್ವ ತರಬೇತಿ, ಸಂಶೋಧನೆ ಮತ್ತು ನಾವಿನ್ಯತಾ ಉಪಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

**ತಾತ್ವಿಕ ಹಿನ್ನೆಲೆ ಹಾಗೂ ಕಾರ್ಯವ್ಯಾಪ್ತಿ:**

- ಶೈಕ್ಷಣಿಕ ಆಡಳಿತವನ್ನು ವಿಕೇಂದ್ರೀಕರಿಸುವುದು.
- ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆಯ ವ್ಯವಸ್ಥೆಯ ಆಮೂಲಾಗ್ರ ಬದಲಾವಣೆ.
- ದೇಶದ ಅಭಿವೃದ್ಧಿ ಹಾಗೂ ಅಗತ್ಯತೆಗಳಿಗನುಸಾರವಾಗಿ ಶೈಕ್ಷಣಿಕ ದೃಷ್ಟಿಕೋನವನ್ನು ರೂಪಿಸುವುದು ಮತ್ತು ದೀರ್ಘಕಾಲಿಕ ಶೈಕ್ಷಣಿಕ ಯೋಜನೆಗಳನ್ನು ಸಿದ್ಧಪಡಿಸುವುದು.
- ಶಿಕ್ಷಣಕ್ಕೆ ಸಂಬಂಧಿಸಿದಂತೆ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳ ನಡುವೆ ಸಂಪರ್ಕ ಸಾಧಿಸುವುದು.
- ಶೈಕ್ಷಣಿಕ ಸಂಸ್ಥೆಗಳ ಮುಖ್ಯಸ್ಥರು ಹಾಗೂ ಆಡಳಿತಗಾರರಲ್ಲಿ ನಾಯಕತ್ವ ಕೌಶಲ್ಯ ಮತ್ತು ನಿರ್ವಹಣಾ ಸಾಮರ್ಥ್ಯಗಳನ್ನು ಬೆಳೆಸುವುದು.

ಮೇಲ್ಕಂಡ ಕಾರ್ಯಗಳನ್ನು ನಿರ್ವಹಣೆ ಮಾಡಲು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು 'ಶೈಕ್ಷಣಿಕ ಆಡಳಿತಗಾರರ ಸಾಮರ್ಥ್ಯ ಅಭಿವೃದ್ಧಿ ಸಂಸ್ಥೆ' (SIEMAT)ಯನ್ನು ಸ್ಥಾಪಿಸಲು ತೊಂಭತ್ತರ ದಶಕದಲ್ಲಿ ನಿರ್ಧರಿಸಿತು. ಆರಂಭದಲ್ಲಿ 'ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ' (ಡಿ.ಪಿ.ಇ.ಪಿ) ಇದ್ದ ರಾಜ್ಯಗಳಿಗೆ ಮಾತ್ರ ಸೀಮಿತವಾಗಿದ್ದ SIEMAT ಗಳನ್ನು 2001–02 ರಲ್ಲಿ ಸರ್ವ ಶಿಕ್ಷಣ ಅಭಿಯಾನದ ವ್ಯಾಪ್ತಿಗೆ ತಂದು ದೇಶದ ಎಲ್ಲ ರಾಜ್ಯಗಳಲ್ಲಿ ಸ್ಥಾಪನೆ ಮಾಡಲು ನಿರ್ದೇಶಿಸಲಾಯಿತು. ಕರ್ನಾಟಕ ರಾಜ್ಯವು ತನ್ನ ಅನುಭವಗಳು,

ಕಲಿಕೆಗಳು ಹಾಗು ಅಧ್ಯಯನ ವರದಿಗಳ ಮೂಲಕ ಶೈಕ್ಷಣಿಕ ನಿರ್ವಹಣೆಯ ಅಗತ್ಯವನ್ನು ಕಂಡುಕೊಂಡಿತ್ತು. 2000ರಲ್ಲಿ ಮುಖ್ಯ ಮಂತ್ರಿಗಳ ಟಾಸ್ಕ್ ಫೋರ್ಸ್ ವರದಿ, 2000ರಲ್ಲಿ ಆಡಳಿತ ಸುಧಾರಣೆ ಆಯೋಗದ ವರದಿ, 2002ರಲ್ಲಿ ಶೈಕ್ಷಣಿಕ ದೃಷ್ಟಿಕೋನ ವರದಿಗಳು ಶೈಕ್ಷಣಿಕ ವಿಕೇಂದ್ರೀಕರಣ ಮತ್ತು ಅದಕ್ಕೆ ಬೇಕಾದ ಸಾಮರ್ಥ್ಯಾಭಿವೃದ್ಧಿಯ ಅಗತ್ಯಗಳನ್ನು ಸ್ಪಷ್ಟವಾಗಿ ಗುರುತಿಸಿದವು. ಅಷ್ಟೇ ಅಲ್ಲ ಜಾಗತಿಕ ಮಟ್ಟದಲ್ಲಿ ಪ್ರಯೋಗಗಳ ಮೂಲಕ ಪರಿಣಾಮಕಾರಿ ಎಂದು ಸಾಬೀತಾಗಿದ್ದ 'ಸ್ವಯಂ ಆಡಳಿತ ಶಾಲೆ (Autonomous Schools)' ಗಳ ಪರಿಕಲ್ಪನೆಯನ್ನು ಈ ವರದಿಗಳು ಬೆಂಬಲಿಸಿದ್ದವು.

2003ರಲ್ಲಿ ಶೈಕ್ಷಣಿಕ ಉತ್ಕೃಷ್ಟತೆ ಸಾಧಿಸಲು ನೀತಿ ನಿರೂಪಣೆಗೆ ಬೆಂಬಲ ಒದಗಿಸುವುದಕ್ಕೆ ಸಂಬಂಧಿಸಿದಂತೆ ಅಜೀಂ ಪ್ರೇಮ್‌ಜಿ ಫೌಂಡೇಶನ್‌ನೊಂದಿಗೆ ಒಡಂಬಡಿಕೆ ಮಾಡಿಕೊಂಡ ರಾಜ್ಯ ಸರಕಾರ, ಶಿಕ್ಷಣ ಇಲಾಖೆಯಲ್ಲಿ ಪಾಲಿಸಿ ಪ್ಲ್ಯಾನಿಂಗ್ ಘಟಕವನ್ನು ಸ್ಥಾಪಿಸಿತು. ಶೈಕ್ಷಣಿಕ ನಾಯಕತ್ವ ಮತ್ತು ನಿರ್ವಹಣೆ, ಅಭಿವೃದ್ಧಿ ಯೋಜನೆಗಳನ್ನು, ಶಿಕ್ಷಣ ವ್ಯವಸ್ಥೆಯಲ್ಲಿ ಸಮುದಾಯದ ಭಾಗವಹಿಸುವಿಕೆಯನ್ನು ಹೆಚ್ಚಿಸುವಂತಹ ಕಾರ್ಯಕ್ರಮಗಳನ್ನು, ಇಲಾಖಾ ಯೋಜನೆಯ ಪರಿಣಾಮಗಳನ್ನು ಕುರಿತು ಅಧ್ಯಯನಗಳನ್ನು ಹಮ್ಮಿಕೊಂಡಿತು. ಶೈಕ್ಷಣಿಕ ವಿಕೇಂದ್ರೀಕರಣಕ್ಕೆ ಪೂರಕವಾದ ಶಿಫಾರಸ್ಸುಗಳನ್ನು ಮಾಡಿತು. 2008 ರಲ್ಲಿ ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ 2010ರಲ್ಲಿ ' ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ' (**SISLEP**) ಯನ್ನು ಸ್ಥಾಪಿಸಲಾಯಿತು. 2011 ರಲ್ಲಿ ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮದಡಿಯಲ್ಲಿ ಈ ಸಂಸ್ಥೆಯು ನೋಂದಾಯಿಸಲ್ಪಟ್ಟಿದ್ದು, ತದನಂತರದಲ್ಲಿ NIEPA / NCSL ನವದೆಹಲಿಯಿಂದ 2017–18 ರಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ 'ಶಾಲಾ ನಾಯಕತ್ವ ಅಕಾಡಮಿ' (SLA) ಯನ್ನು ಸ್ಥಾಪಿಸಲಾಗಿದೆ. ಈ ಅಕಾಡಮಿಯು ಉತ್ತಮ ಶೈಕ್ಷಣಿಕ ಅಭ್ಯಾಸಗಳ ವಿಡಿಯೋ ಹಾಗೂ ಯಶೋಗಾಥೆಗಳ ದಾಖಲೀಕರಣ, ಮಾಡ್ಯೂಲ್‌ಗಳ ರಚನೆ ಮತ್ತು ಭಾಷಾಂತರ, ಶೈಕ್ಷಣಿಕ ಮೇಲ್ವಿಚಾರಕರಿಗೆ ಶಾಲಾ ನಾಯಕತ್ವದ ಕುರಿತು ವೆಬಿನಾರ್/ಕಾರ್ಯಾಗಾರಗಳ ಆಯೋಜನೆ ಮುಂತಾದ ಕಾರ್ಯಕ್ರಮಗಳನ್ನು ನಿರ್ವಹಿಸುತ್ತಿದೆ.

❖ **ಸಂಸ್ಥೆಯ ಗುರಿ ಮತ್ತು ಉದ್ದೇಶಗಳು:**

ಶಿಕ್ಷಣದ ನಿರ್ವಹಣೆಯನ್ನು ಸರ್ಕಾರದ ನಿಯಂತ್ರಣದಿಂದ ನಿಧಾನವಾಗಿ ಮತ್ತು ಸ್ಥಿರವಾಗಿ ಸಮರ್ಥ ಸಮುದಾಯಕ್ಕೆ ವರ್ಗಾಯಿಸುವುದು ಸಿಸ್ಲೆಪ್ ಸಂಸ್ಥೆಯ ಪ್ರಮುಖ ಗುರಿಯಾಗಿದೆ. ಈ ಗುರಿಯ ಸಾಧನೆಗೆ ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಿಸಿದ ಎಲ್ಲ ಭಾಗೀದಾರರ ದೃಷ್ಟಿಕೋನ ಮತ್ತು ಮನೋಭಾವದಲ್ಲಿ ಬದಲಾವಣೆ ಅತ್ಯಗತ್ಯ. ಇದಕ್ಕಾಗಿ ಶಾಲಾ ಹಂತದಿಂದ ರಾಜ್ಯ ಹಂತದವರೆಗಿನ ಮೇಲುಸ್ತುವಾರಿ ಅಧಿಕಾರಿಗಳಿಗೆ, ಸಮುದಾಯದ ನಾಯಕರುಗಳಿಗೆ ಸಾಮರ್ಥ್ಯಾಧಾರಿತ ತರಬೇತಿ ನೀಡುವುದು, NIEPA,NCSL,NCERT,DSERT ಮುಂತಾದ ರಾಷ್ಟ್ರೀಯ ಹಾಗೂ ರಾಜ್ಯ ಮಟ್ಟದ ಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸುವುದು, ಶೈಕ್ಷಣಿಕ ವಿಷಯಗಳಿಗೆ ಸಂಬಂಧಿಸಿದಂತೆ ಉತ್ತಮ ಅಭ್ಯಾಸಗಳನ್ನು ದಾಖಲೀಕರಿಸುವುದು ಸಂಸ್ಥೆಯ ಜವಾಬ್ದಾರಿಗಳಾಗಿವೆ.

- **ಶಿಕ್ಷಣ ನೀತಿ:** ಸಂಶೋಧನೆಗಳ ಫಲಿತಾಂಶವನ್ನು ಆಧರಿಸಿ ಶಿಕ್ಷಣ ನೀತಿ ರೂಪಿಸಲು ಹಾಗೂ ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣೆ ಮಾಡಲು ರಾಜ್ಯ ಸರ್ಕಾರಕ್ಕೆ ಪರಿಣಿತರ ನೆರವು ನೀಡುವುದು.

- **ಸಾಂಸ್ಥಿಕ ವಿನ್ಯಾಸ ಮತ್ತು ಶೈಕ್ಷಣಿಕ ಪ್ರಕ್ರಿಯೆ :** ಈಗಿರುವ ಶೈಕ್ಷಣಿಕ ವ್ಯವಸ್ಥೆ ಮತ್ತು ಪ್ರಕ್ರಿಯೆಗಳನ್ನು ಅಧ್ಯಯನ ಮಾಡಿ, ಶಿಕ್ಷಣದ ಉದ್ದೇಶದ ಈಡೇರಿಕೆಗೆ ಇವುಗಳಲ್ಲಿ ಅಗತ್ಯ ಬದಲಾವಣೆಗಳನ್ನು ಸೂಚಿಸುವುದು.

**ಮಾನವ ಸಂಪನ್ಮೂಲ ಅಭಿವೃದ್ಧಿ ಮತ್ತು ಪ್ರಕ್ರಿಯೆಗಳು :** ಶಾಲೆಯಿಂದ ರಾಜ್ಯ ಮಟ್ಟದವರೆಗೆ ಶಿಕ್ಷಣ ವ್ಯವಸ್ಥೆಯಲ್ಲಿರುವ ಎಲ್ಲಾ ಭಾಗೀದಾರರಿಗೂ ನಾಯಕತ್ವ, ನಿರ್ವಹಣೆ ಮತ್ತು ಆಡಳಿತಾತ್ಮಕ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಎಸ್.ಡಿ.ಎಂ.ಸಿ. ಸದಸ್ಯರು, ಗ್ರಾಮ ಪಂಚಾಯತಿ ಸದಸ್ಯರು ಮತ್ತು ಸಮುದಾಯದ ಇತರರಿಗೆ ಯೋಜನೆ, ಸಹಭಾಗಿತ್ವ ಪ್ರಕ್ರಿಯೆ, ಶಾಲಾಭಿವೃದ್ಧಿ ಯೋಜನೆ ಮೊದಲಾದ ವಿಷಯಗಳಲ್ಲಿ ಸಾಮರ್ಥ್ಯಾಭಿವೃದ್ಧಿ ಮಾಡುವುದು; ಶೈಕ್ಷಣಿಕ ನಿರ್ವಾಹಕರಲ್ಲಿ ಸೇವಾ ಮನೋಭಾವ, ಉತ್ತಮ ಆಡಳಿತ, ಪಾರದರ್ಶಕತೆ ಹಾಗೂ ಹೊಣೆಗಾರಿಕೆ ಮೂಡಿಸಲು ಸೂಕ್ತವಾದ ವಿಧಾನಗಳನ್ನು ಶಿಫಾರಸ್ಸು ಮಾಡುವುದು, ಶೈಕ್ಷಣಿಕ ಯೋಜನೆಗಳ ವೆಚ್ಚ ನಿಗದಿಪಡಿಸುವುದು, ಸಂಪನ್ಮೂಲ ಕ್ರೋಢೀಕರಣ ಮತ್ತು ಬಳಕೆಗೆ ಸಂಬಂಧಿಸಿದಂತೆ ಮಾರ್ಗದರ್ಶನ ಮಾಡುವುದು.

- **ಸಂಶೊಧನೆ ಮತ್ತು ಮೌಲ್ಯಮಾಪನ:** ಶೈಕ್ಷಣಿಕ ನಿರ್ವಹಣಾ ಕ್ಷೇತ್ರವು ನಿರಂತರ ಅಧ್ಯಯನ ಬಯಸುವುದರಿಂದ ಸಂಶೋಧನೆಯು ಸಿಸ್ಲೆಪ್‌ನ ಪ್ರಾಥಮಿಕ ಕಾರ್ಯಗಳಲ್ಲಿ ಒಂದು. ಇಲಾಖೆಯು ಅನುಷ್ಠಾನಗೊಳಿಸುತ್ತಿರುವ ವಿಭಿನ್ನ ಕಾರ್ಯಕ್ರಮಗಳೂ ಸೇರಿದಂತೆ ಇಲಾಖೆಯ ಬೇರೆ ಬೇರೆ ಕ್ಷೇತ್ರಗಳನ್ನು ಕುರಿತು ಸಂಶೋಧನೆ ಕೈಗೊಳ್ಳುವುದು ಮತ್ತು ಮೌಲ್ಯಮಾಪನ ಮಾಡುವುದು ಸಿಸ್ಲೆಪ್‌ನ ಪ್ರಮುಖ ಉದ್ದೇಶವಾಗಿದೆ.

- **ಶಿಕ್ಷಣದ ಗುಣಮಟ್ಟ:** ಶಿಕ್ಷಣ ಇಲಾಖೆಯು ತನ್ನ ಎಲ್ಲ ಕಾರ್ಯಕ್ರಮಗಳ ಮೂಲಕ ಗುಣಾತ್ಮಕ ಶಿಕ್ಷಣ ಮತ್ತು ಗುಣಾತ್ಮಕ ಆಡಳಿತ ನೀಡಲು ಗಮನಹರಿಸಬೇಕು. ಗುಣಮಟ್ಟ ಸುಧಾರಣೆಗೆ ಅಗತ್ಯವಾದ ಸಂಶೋಧನೆಗಳು ಮತ್ತು ತರಬೇತಿಗಳನ್ನು ಸಿಸ್ಲೆಪ್ ಹಮ್ಮಿಕೊಳ್ಳುತ್ತದೆ. ಶೈಕ್ಷಣಿಕ ವರದಿಗಳನ್ನು ಆಧರಿಸಿ ಪ್ರಚಲಿತ ಶೈಕ್ಷಣಿಕ ಸೂಚ್ಯಾಂಕಗಳನ್ನು ವಿಶ್ಲೇಷಿಸುವ ಕೌಶಲ್ಯ  ಹಾಗೂ ಸಾಮರ್ಥ್ಯವನ್ನು ಮೇಲ್ವಿಚಾರಕ ಅಧಿಕಾರಿಗಳಲ್ಲಿ ಅಭಿವೃದ್ಧಿಪಡಿಸುವುದು. ಗುಣಾತ್ಮಕ ಶಿಕ್ಷಣದ ಸಾಧನೆಗೆ ಕ್ಷೇತ್ರ ಮಟ್ಟದಲ್ಲಿ ಸೂಕ್ತ ಹೊಳಹುಗಳನ್ನು ಸೃಷ್ಟಿಸುವುದು ಈ  ಸಂಸ್ಥೆಯ ಪ್ರಮುಖ ಕಾರ್ಯವಾಗಿದೆ.

❖ **ಧಾರವಾಡದಲ್ಲಿ ಸಂಸ್ಥೆಯ ಸ್ಥಾಪನೆಯ ಹಿನ್ನೆಲೆ:**

ಶೈಕ್ಷಣಿಕ ವಿಕೇಂದ್ರೀಕರಣದ ಆಶಯಕ್ಕೆ ಪೂರಕವಾಗಿ ಹಾಗೂ ರಾಜ್ಯ ಮಟ್ಟದ ಸಂಸ್ಥೆಯೊಂದು ರಾಜಧಾನಿ ಕೇಂದ್ರದಿಂದ ಹೊರಗಡೆ ಬೆಳೆದು ಬರುವುದರಿಂದ ರಾಜ್ಯದ ಎಲ್ಲ ಭಾಗಗಳ ಶೈಕ್ಷಣಿಕ ಭಾಗೀದಾರರ ಪಾಲ್ಗೊಳ್ಳುವಿಕೆ ಸಾಧ್ಯವಾಗುತ್ತದೆಯೆಂಬ ಆಶಯದಿಂದ 'ಸಿಸ್ಲೆಪ್' ಸಂಸ್ಥೆಯನ್ನು ಶೈಕ್ಷಣಿಕ ಕೇಂದ್ರವಾಗಿರುವ ಧಾರವಾಡದಲ್ಲಿ ಸ್ಥಾಪಿಸಲಾಗಿದೆ. ಇದಕ್ಕಾಗಿ ಧಾರವಾಡದ ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಆವರಣದಲ್ಲಿ ನಿರ್ಮಾಣವಾದ ಸಂಸ್ಥೆಯ ಸ್ವಂತ ಕಟ್ಟಡದಲ್ಲಿ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ

**ಸಿಸ್ಲೆಪ್ ಸಂಸ್ಥೆಯ ಪ್ರಮುಖ ತರಬೇತಿ ಕಾರ್ಯಕ್ರಮಗಳು :**

ಶಾಲಾ ಮುಖ್ಯಸ್ಥರಲ್ಲಿ ನಾಯಕತ್ವದ ಗುಣಗಳನ್ನು ಅಭಿವೃದ್ಧಿ ಪಡಿಸಲು ಸಿಸ್ಲೆಪ್ ಸಂಸ್ಥೆಯಲ್ಲಿ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳ ಬಲವರ್ಧನೆಗೆ ಪೂರಕವಾದ ತರಬೇತಿಗಳನ್ನು ಹಮ್ಮಿಕೊಳ್ಳಲು 2010–11 ರಿಂದ 2022–23 ರ ವರೆಗೆ ರಾಜ್ಯದ ಉಪನಿರ್ದೇಶಕರ ಕಛೇರಿಯ ವಿಷಯ ಪರಿವೀಕ್ಷಕರಿಗೆ, ಡಯಟ್ ಉಪನ್ಯಾಸಕರಿಗೆ ಹಾಗೂ ಬಿ.ಆರ್.ಪಿ, ಶಿಕ್ಷಣ ಸಂಯೋಜಕರು, ಸಿ.ಆರ್.ಪಿ. ಗಳಿಗಾಗಿ ಶೈಕ್ಷಣಿಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿಯನ್ನು ಆಯೋಜಿಸಲಾಗುತ್ತಿದೆ. ಸರಕಾರಿ ಪ್ರೌಢಶಾಲಾ ಮುಖ್ಯಶಿಕ್ಷಕರಿಗೆ, ಬಿ.ಆರ್.ಸಿ.

ಸಮನ್ವಯಾಧಿಕಾರಿಗಳು ಹಾಗೂ ಇತರ 'ಬಿ' ವೃಂದದ ಅಧಿಕಾರಿಗಳಿಗೆ ಶೈಕ್ಷಣಿಕ ನಾಯಕತ್ವ ಅಭಿವೃದ್ಧಿ ತರಬೇತಿ, ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರಿಗೆ ಶಾಲಾ ನಾಯಕತ್ವ ಅಭಿವೃದ್ಧಿ ತರಬೇತಿ (ಎಸ್.ಎಲ್.ಡಿ.ಪಿ), ಸಹನಿರ್ದೇಶಕರು ಮತ್ತು ತತ್ಸಮಾನ ವೃಂದ ಹಾಗೂ ಉಪನಿರ್ದೇಶಕರು (ಆಡಳಿತ ಮತ್ತು ಅಭಿವೃದ್ಧಿ) ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ತರಬೇತಿ, 'ಅಧಿಕಾರದಿಂದ ಉತ್ತರದಾಯಿತ್ವದೆಡೆಗೆ ತರಬೇತಿ, ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗೂ ತತ್ಸಮಾನ ವೃಂದದ ಅಧಿಕಾರಿಗಳಿಗೆ ಹಾಗೂ ಉಪನಿರ್ದೇಶಕರ ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿಯ ಬೋಧಕೇತರ ವೃಂದದ ವ್ಯವಸ್ಥಾಪಕರಿಗೆ ಆಡಳಿತಾತ್ಮಕ ಹಾಗೂ ಸಾಮರ್ಥ್ಯಾಭಿವೃದ್ಧಿ ತರಬೇತಿ' ಎಲ್ಲ ಮೇಲ್ವಿಚಾರಕ ಅಧಿಕಾರಿಗಳಿಗೆ ಮಕ್ಕಳ ಶಿಕ್ಷಣ ಹಕ್ಕು ಕಾಯಿದೆ– 2009ರ ಅಡಿಯಲ್ಲಿ ಗುಣಾತ್ಮಕ ಶಿಕ್ಷಣದ ಸೂಚ್ಯಾಂಕಗಳ ಬಗ್ಗೆ ಒತ್ತು ನೀಡಿ ಪರಿಣಾಮಕಾರಿ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ಈ ತರಬೇತಿ ಕಾರ್ಯಕ್ರಮಗಳಿಗೆ ಅವಶ್ಯಕವಿರುವ ವಿಷಯಗಳಲ್ಲಿ ನುರಿತ ತಜ್ಞರಿಂದ ಹಾಗೂ ಕ್ಷೇತ್ರ ಮಟ್ಟದ ಪ್ರಯೋಗಶೀಲ ಪರಿಣಿತರಿಂದ ತರಬೇತಿ ವಿನ್ಯಾಸ (Training Modules) ಗಳನ್ನು ರಚಿಸಲಾಗಿದೆ.

ಪ್ರಸ್ತುತ ಸಾಲಿನಲ್ಲಿ 'ವಿದ್ಯಾರ್ಥಿಗಳೊಂದಿಗೆ ಆಪ್ತಸಮಾಲೋಚನೆ ಹಾಗೂ ಮಾನಸಿಕ ಆರೋಗ್ಯದ ಉಪಕ್ರಮಗಳು', 'ಕಲಿಕಾ ಬೋಧನಾ ಪ್ರಕ್ರಿಯೆಯಲ್ಲಿ ನಾವೀನ್ಯತಾ ಉಪಕ್ರಮಗಳು ಗುಣಾತ್ಮಕ ಶಿಕ್ಷಣದಲ್ಲಿ ಭಾಗೀದಾರರ ಪಾತ್ರ, ಮನೋವೈಜ್ಞಾನಿಕ, ವೈಚಾರಿಕ ದೃಷ್ಟಿಕೋನದ ಅಭಿವೃದ್ಧಿ' ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗಾಗಿ, 'ಬಹುತ್ವದ ಭಾರತ ಮತ್ತು ವ್ಯಕ್ತಿಘನತೆ', 'ಗ್ರಂಥಾಲಯ ಬಳಕೆ ಮತ್ತು ನಿರ್ವಹಣೆ', 'ಮಕ್ಕಳ ಹಕ್ಕುಗಳ ಸಂರಕ್ಷಣೆ ಮತ್ತು ಪ್ರಚಲಿತ ಕಾನೂನುಗಳು', 'ಮಕ್ಕಳ ಸುರಕ್ಷತೆಯ ವಿನೂತನ ಮಾರ್ಗೋಪಾಯಗಳು', 'ಭಾಷಾವನ' (Language Garden) ಮತ್ತು ಭಾಷಾ ಕೌಶಲ್ಯಗಳ ಅಭಿವೃದ್ಧಿ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಶೈಕ್ಷಣಿಕ ನಾಯಕರ ಪಾತ್ರ, ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣ ಮತ್ತು ಸೌಲಭ್ಯಗಳ ನಿರ್ವಹಣೆ', ಶೈಕ್ಷಣಿಕ ಸಮೀಕ್ಷೆಗಳು ಮತ್ತು ದತ್ತಾಂಶಗಳ ವಿಶ್ಲೇಷಣೆ' 'ಶಾಲೆಯಿಂದ ಹೊರಗುಳಿದ ಹಾಗೂ ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಕರೆತರಲು ಅನುಸರಿಸಬಹುದಾದ ಮಾರ್ಗೋಪಾಯಗಳು', 'ಶಿಕ್ಷಣದಲ್ಲಿ ರಂಗಕಲೆ'ಈ ಕುರಿತಾದ ತರಬೇತಿ ವಿನ್ಯಾಸಗಳನ್ನು ಅವಶ್ಯಕತೆಗಳಿಗನುಸಾರವಾಗಿ ಹೊಸದಾಗಿ ರೂಪಿಸಲಾಗಿದೆ.

ಗುಣಾತ್ಮಕ ಶಿಕ್ಷಣದ ಸಾಧನೆಯ ಹಿನ್ನೆಲೆಯಲ್ಲಿ ಸಿಸ್ಲೆಪ್ ಸಂಸ್ಥೆಯಲ್ಲಿ ಶಿಕ್ಷಣ ಇಲಾಖೆಯ ವಿವಿಧ ಸ್ತರದ ಮೇಲ್ವಿಚಾರಣಾ ಅಧಿಕಾರಿಗಳಿಗೆ ಐದು ದಿನಗಳ **ಆಡಳಿತಾತ್ಮಕ ತರಬೇತಿ** ಹಾಗೂ ಮೂರು ದಿನಗಳ **ಶೈಕ್ಷಣಿಕ ಸಾಮರ್ಥ್ಯಾಭಿವೃದ್ಧಿ** ತರಬೇತಿಗಳನ್ನು ನಡೆಸಲಾಗುತ್ತಿದ್ದು, ಈ ತರಬೇತಿಗಳಲ್ಲಿ 'ಶಾಲಾ ನಾಯಕತ್ವದ ಹೊಸ ಸವಾಲುಗಳು ಮತ್ತು ವಿನೂತನ ಆಚರಣೆಗಳು', ಕಛೇರಿ ಕಾರ್ಯವಿಧಾನ, ಸಂವಹನ ಕೌಶಲ್ಯಗಳು, ಕರ್ನಾಟಕ ನಾಗರಿಕ ಸೇವಾ (ನಡತೆ) ನಿಯಮಗಳು–2021, ಕರ್ನಾಟಕ ನಾಗರೀಕ ಸೇವಾ ನಿಯಮಗಳು.–1957, ಮಾಹಿತಿ ಹಕ್ಕು ಅಧಿನಿಯಮ–2005, ಕೆ ಸಿ ಎಸ್ ಆರ್ ನಿಯಮಗಳು, ರಜಾ ನಿಯಮಗಳು / ಸೇವಾ ಪುಸ್ತಕ ನಿರ್ವಹಣೆ , ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ, ಖಜಾನೆ–2, ಹಣಕಾಸು ನಿರ್ವಹಣೆ. ವಿವಿಧ ಬಿಲ್ಲುಗಳ ತಯಾರಿ,
ಕೆ.ಟಿ.ಪಿ.ಪಿ ಕಾಯ್ದೆ 1999/2000, ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶಿಕ್ಷಣ ಸೌಲಭ್ಯಗಳು ಹಾಗೂ ಪ್ರಚಲಿತ ಕಾನೂನುಗಳು, ಎಸ್.ಎ.ಟಿ.ಎಸ್. (Student Achievement Tracking System) ಮುಂತಾದ ವಿಷಯಾಂಶಗಳ ಕುರಿತಾಗಿ ತರಬೇತಿಯನ್ನು ನೀಡಲಾಗುತ್ತಿದೆ.

ಪ್ರಸ್ತುತ ಸಿಸ್ಲೆಪ್ ಸಂಸ್ಥೆಯಲ್ಲಿ 8206 ಹಾಗೂ ಕ್ಯಾಸ್ಕೇಡ್ ವಿಧಾನದಲ್ಲಿ ಡಯಟ್ ಹಂತದಲ್ಲಿ 9500 ವಿವಿಧ ಸ್ತರದ ಅಧಿಕಾರಿಗಳಿಗೆ ತರಬೇತಿಯನ್ನು ನೀಡಲಾಗಿದೆ. ಅವಶ್ಯಕತೆಗಳಿಗನುಗುಣವಾಗಿ ಇನ್ನಷ್ಟು ತರಬೆತಿ ವಿನ್ಯಾಸಗಳನ್ನು ರಚಿಸಲು ಹಾಗೂ ತರಬೇತಿಗಳನ್ನು ಆಯೋಜಿಸುವಲ್ಲಿ ಸಂಸ್ಥೆಯು ನಿರಂತರ ಕ್ರಿಯಾಶೀಲವಾಗಿದೆ.

ಆ ಮೂಲಕ ಕರ್ನಾಟಕ ರಾಜ್ಯದ ಶಾಲೆಗಳಲ್ಲಿ ದಾಖಲಾಗುವ ಅರ್ಹ ವಯೋಮಾನದ ಎಲ್ಲ ಮಕ್ಕಳಿಗೆ ಗುಣಾತ್ಮಕ ಶಿಕ್ಷಣವನ್ನು ಖಾತರಿಪಡಿಸಲು ಆಶಿಸಲಾಗಿದೆ. ಶಾಲಾ ಶಿಕ್ಷಣ ಇಲಾಖೆಯಲ್ಲಿ ಐವತ್ತು ಸಾವಿರ ಪ್ರಾಥಮಿಕ ಶಾಲೆಗಳು ಹಾಗೂ ಇಪ್ಪತ್ತೈದು ಸಾವಿರಕ್ಕಿಂದ ಹೆಚ್ಚು ಪ್ರೌಢಶಾಲೆಗಳು ಕಾರ್ಯನಿರ್ವಹಿಸುತ್ತಿದ್ದು, ಈ ಸಂಸ್ಥೆಗಳ ಮುಖ್ಯಸ್ಥರುಗಳು ಅತ್ಯುತ್ತಮ ಮೇಲ್ವಿಚಾರಕ ಕೌಶಲಗಳನ್ನು ಹಾಗೂ ಉತ್ತಮ ನಾಯಕತ್ವ ಗುಣಗಳನ್ನು ಹೊಂದಿರಬೇಕಾಗುತ್ತದೆ. ಇಷ್ಟು ಬೃಹತ್ ಸಂಖ್ಯೆಯ ಮೇಲ್ವಿಚಾರಕ ಅಧಿಕಾರಿಗಳ ಸಾಮರ್ಥ್ಯಾಭಿವೃದ್ಧಿಯ ಸಂಕಲ್ಪದೊಂದಿಗೆ ಈ ಸಂಸ್ಥೆಯು ಕಾರ್ಯ ನಿರ್ವಹಿಸುತ್ತಿದೆ. ಈ ಭಾಗದಲ್ಲಿ ಒಂದು ಅತ್ಯುತ್ತಮ ಶಾಲಾ ನಾಯಕತ್ವ ಹಾಗೂ ನಿರ್ವಹಣಾ ಸಂಸ್ಥೆಯು ಅಭಿವೃದ್ಧಿ ಹೊಂದುತ್ತಿರುವುದು ಒಂದು ಆಶಾದಾಯಕ ವಿಷಯವಾಗಿದೆ. ಆ ಮೂಲಕ ಗುಣಾತ್ಮಕ ಶಿಕ್ಷಣದ ಗುರಿ ಸಾಧನೆಗೈದು ಸಾಂವಿಧಾನಿಕ ಆಶಯಗಳನ್ನು ಇಡೇರಿಸುವ ಪ್ರಯತ್ನಕ್ಕೆ ಇಂಬು ದೊರೆತಿದೆ. ಪ್ರಸ್ತುತ ಈ ಸಂಸ್ಥೆಯಲ್ಲಿ ಯೋಜನೆ ಮತ್ತು ನೀತಿ ನಿರೂಪಣೆ ವಿಭಾಗ, ಶಾಲಾ ನಿರ್ವಹಣಾ ವಿಭಾಗ, ಶೈಕ್ಷಣಿಕ ಹಣಕಾಸು ವಿಭಾಗ, ಸಂಶೋಧನೆ, ಮೌಲ್ಯಾಂಕನ ಮತ್ತು ಶೈಕ್ಷಣಿಕ ನಾವೀನ್ಯತಾ ವಿಭಾಗ, ಶೈಕ್ಷಣಿಕ ದತ್ತಾಂಶ ವಿಶ್ಲೇಷಣೆ ಮತ್ತು ಮಾಹಿತಿ ನಿರ್ವಹಣಾ ವಿಭಾಗಗಳಿವೆ. ಶಾಲೆಗಳ ತರಗತಿ ಕೋಣೆಗಳಲ್ಲಿ ದೇಶದ ಭವಿಷ್ಯವು ನಿರ್ಮಾಣವಾಗುತ್ತದೆ ಎಂಬ ಆಶಯಕ್ಕೆ ಪೂರಕವಾಗಿ ಹಾಗೂ ದೇಶಕ್ಕೆ ಬೇಕಾದ ಅತ್ಯುತ್ತಮ ನಾಗರಿಕರನ್ನು ನಿರ್ಮಾಣ ಮಾಡುವ ಮಹತ್ಕಾರ್ಯದಲ್ಲಿ ರಾಜ್ಯದ ಎಲ್ಲ ಹಂತದ ಜನಪ್ರತಿನಿಧಿಗಳು, ಶಿಕ್ಷಣ ತಜ್ಞರು, ಸಾಹಿತಿಗಳು, ಶಿಕ್ಷಣ ಪ್ರೇಮಿಗಳು, ಮತ್ತು ಉದ್ಯಮಗಳ ನೇತಾರರು ಈ ಸಂಸ್ಥೆಯ ಪ್ರಯತ್ನಗಳಲ್ಲಿ ಪಾಲುದಾರಿಕೆ ವಹಿಸಿ ಸಹಕಾರ ನೀಡುತ್ತಾರೆಂದು ಆಶಿಸಲಾಗಿದೆ.

**"ಬಿಂಕಕ್ಕೆ ಡೊಳ್ಳಿವುದು ವಿದ್ಯೆಯೇ?,**

**ಅವಿದ್ಯೆ ತವಿಪುದಾವುದೋ ಅಹಂಕಾರಮಂ ಅದು ವಿದ್ಯೆ.**

**ಮಿಕ್ಕುದೆಲ್ಲಂ ಅವಿದ್ಯೆ"**

**-- ರಾಷ್ಟ್ರಕವಿ ಕುವೆಂಪು.**

# ಪರಿವಿಡಿ


| ಅಧ್ಯಾಯಗಳು | ಪುಟ ಸಂಖ್ಯೆ: |
|---|---|
| **ಅಧ್ಯಾಯ–1**<br>**ಆಶಯ ಮತ್ತು ಹಿನ್ನಲೆ**<br>○ ಅಧ್ಯಯನಗಳ ವರದಿ/ಉಲ್ಲೇಖಗಳು<br>○ ದೂರದೃಷ್ಠಿ<br>○ ಮಾಡ್ಯೂಲನ ಗುರಿ ಮತ್ತು ಉದ್ದೇಶಗಳು<br>○ ನಿರೀಕ್ಷಿತ ಫಲಗಳು | **01–07** |
| **ಅಧ್ಯಾಯ–2**<br>○ ನಿಸರ್ಗ ಮತ್ತು ಮಾನವ<br>○ ಚಿಂತನಶೀಲ ಪ್ರಶ್ನೆಗಳು<br>○ ಮೌಲ್ಯಮಾಪನಕ್ಕೆ ಪೂರಕ ಪ್ರಶ್ನೆಗಳು | **08–12** |
| **ಅಧ್ಯಾಯ–3**<br>○ ಸುಸ್ಥಿರ ಅಭಿವೃದ್ಧಿಯ ಗುರಿಗಳ ಚಾರಿತ್ರಕ ನೋಟಗಳು ಜಾಗತಿಕ ಘೋಷಣೆ–2015. | **13–20** |
| **ಅಧ್ಯಾಯ–4**<br>**ಶಿಕ್ಷಣಕ್ಕೆ ಸಂಬಂಧಿಸಿದಂತೆ ಗುರಿಗಳು ಮತ್ತು ಅವುಗಳ ಆಶಯ**<br>○ ಬಡತನ ಮುಕ್ತ<br>○ ಹಸಿವು ಮುಕ್ತ<br>○ ಉತ್ತಮಆರೋಗ್ಯ ಮತ್ತು ಯೋಗಕ್ಷೇಮ<br>○ ಗುಣಮಟ್ಟದ ಶಿಕ್ಷಣ<br>○ ಲಿಂಗ ಸಮಾನತೆ<br>○ ಸ್ವಚ್ಛ ನೀರು ಮತ್ತು ನೈರ್ಮಲ್ಯ<br>○ ಅಸಮಾನತೆಗಳ ಇಳಿಕೆ | **21–42** |
| **ಅಧ್ಯಾಯ–5**<br>○ ಶೈಕ್ಷಣಿಕ ಅಧಿಕಾರಿಗಳ ಪಾತ್ರ ಮತ್ತು ಜವಾಬ್ದಾರಿಗಳು<br>○ ಅನುಷ್ಠಾನದ ಸವಾಲುಗಳು ಮತ್ತು ಸಾಧ್ಯತೆಗಳು<br>○ ಕಲಿಕೆಯಲ್ಲಿ ಸುಸ್ಥಿರತೆ | **43–45** |
| **ಅಧ್ಯಾಯ–6**<br>○ ಕಾರ್ಯಾಗಾರದ ಮಾಡ್ಯೂಲ್<br>○ ಕಾರ್ಯಾಗಾರದ ವೇಳಾಪಟ್ಟಿ<br>○ ನನ್ನಯೋಜನೆ | **46–50** |

# ಅಧ್ಯಾಯ–1

## ಆಶಯ ಮತ್ತು ಹಿನ್ನೆಲೆ

**ಸುಸ್ಥಿರ ಅಭಿವೃದ್ಧಿ ಯೋಜನೆಯ ಹಿನ್ನೆಲೆ:**

ಅನಾದಿ ಕಾಲದಲ್ಲಿ ಪ್ರಕೃತಿಯೊಂದಿಗೆ ಬದುಕುತ್ತಿದ್ದ ಮಾನವ ನಾಗರೀಕತೆ ಬೆಳೆದಂತೆ, ಪ್ರಕೃತಿಯಿಂದ ದೂರ ಸರಿಯತೊಡಗಿದ. ತನ್ನ ನಾಗರೀಕ ಜೀವನದ ವೈಭವಕ್ಕಾಗಿ ತನ್ನ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ನಿಸರ್ಗ ಸಂಪತ್ತನ್ನು ಬರಿದು ಮಾಡತೊಡಗಿದ. ಸುಸಂಸ್ಕೃತನೆಂದು ತೋರಿಸಿಕೊಳ್ಳಲು ಕೊಳ್ಳುಬಾಕ ಸಂಸ್ಕೃತಿ (ಉಪಯೋಗಿಸಿ ಬಿಸಾಡು)ಗೆ ಒಳಗಾದ ಕಾರಣ ಪರಿಸರ ಸಮತೋಲನ ತಪ್ಪಿತು. ಇದರಿಂದ ಅರಣ್ಯಗಳೆಲ್ಲ ಕೃಷಿ, ವಸತಿ ಐಷಾರಾಮಿ, ವೈಭವಿಕ ಜೀವನಕ್ಕಾಗಿ ನಾಶವಾಗತೊಡಗಿದವು. ಪರಿಣಾಮ ಮಳೆ ಪ್ರಮಾಣ ಕಡಿಮೆಯಾಯಿತು. ಅತಿಯಾದ ರಾಸಾಯನಿಕ ಗೊಬ್ಬರಗಳ ಬಳಕೆಯಿಂದ ಭೂಮಿ ಬಂಜರಾಗತೊಡಗಿತು. ಜಲ ಮಲೀನವಾಗತೊಡಗಿತು. ಗಾಳಿ ವಿಷವಾಗತೊಡಗಿತು. ಹೀಗೆ ಪರಿಸರ ಮಾಲಿನ್ಯ ಬೆಳೆಯತೊಡಗಿತು. ದೊಡ್ಡ ನಗರಗಳು ಮತ್ತು ಸೊಸೈಟಿಗಳು ಬೆಳೆಯುತ್ತಾ ನೀರಿನ ಬಳಕೆ, ಕೃಷಿ ಭೂಮಿ ಮತ್ತು ಕಸ ನಿರ್ವಹಣೆಯಂತಹ ಸಮಸ್ಯೆಗಳು ಸುಸ್ಥಿರತೆಯ ಮುಖ್ಯ ಅಂಶಗಳಾಗಿ ಪರಿಚಿತವಾದವು. ಮುಂದಿನ ಜನಾಂಗಕ್ಕೂ ಒಳ್ಳೆಯ ಪರಿಸರ, ನಿಸರ್ಗ ಸಂಪತ್ತು ಉಳಿಸಬೇಕೆಂಬುದು ಮಾನವರಿಗೆ ಅರಿವಾಯಿತು. ಇದರ ಆಲೋಚನೆಯ ಫಲವಾಗಿಯೇ ಸುಸ್ಥಿರ ಅಭಿವೃದ್ಧಿಯೆಂಬ ಪರಿಕಲ್ಪನೆ ಉದಯವಾಯಿತು.

ವಿಶ್ವ ಪರಿಸರ ಮತ್ತು ಅಭಿವೃದ್ಧಿ ಆಯೋಗ (ಡಬ್ಲೂಸಿಇಡಿ–1980) ತನ್ನ ವರದಿಯಲ್ಲಿ ವಿಶ್ವ ವ್ಯಾಪಿ ಸುಸ್ಥಿರತೆಯ ಪರಿಕಲ್ಪನೆಯನ್ನು ಪರಿಚಯಿಸಿತು (1987) "ನಮ್ಮ ಸಾಮಾನ್ಯ ಭವಿಷ್ಯ ವರದಿ"ಯಲ್ಲಿ ಸುಸ್ಥಿರ ಅಭಿವೃದ್ದಿಯ ಅರ್ಥವನ್ನು ವಿವರಿಸಿತು. ವಿಶ್ವಸಂಸ್ಥೆಯು ಮಂಡಿಸಿದ ಸುಸ್ತಿರ ಅಭಿವೃದ್ಧಿ ಗುರಿಗಳನ್ನು ಭಾರತವು ಸೇರಿದಂತೆ ವಿಶ್ವದ ಬಹುತೇಕ ರಾಷ್ಟಗಳು ಒಪ್ಪಿಕೊಂಡಿವೆ. ಇದರಲ್ಲಿ 17 ಗುರಿಗಳು 169 ಲಕ್ಷ್ಯಗಳು ಹಾಗೂ 230 ಸೂಚಕಗಳಿವೆ. ಒಂದು ಅಂದಾಜಿನ ಪ್ರಕಾರ ಸುಮಾರು 7 ಗುರಿಗಳು ಮತ್ತು ಸುಮಾರು 50 ಲಕ್ಷ್ಯಗಳು ನೇರವಾಗಿ ಮಕ್ಕಳಿಗೆ ಸಂಬಂದಿಸಿದಂತೆ ಇರುತ್ತವೆ. ಈ ಗುರಿಗಳನ್ನು ನಾವೆಲ್ಲರೂ ಒಟ್ಟಾಗಿ 2030 ರ ಒಳಗೆ ಸಾಧಿಸಿದರೆ, ವಿಶ್ವದ ಬಹುತೇಕ ಮಕ್ಕಳ ಹಕ್ಕುಗಳನ್ನು ಎತ್ತಿಹಿಡಿಯುವುದು ಖಂಡಿತ ಸಾಧ್ಯವೆಂದು ಮನಗಂಡು ಜಗತ್ತಿನ ಬಹುಪಾಲು ದೇಶಗಳ ಸರಕಾರಗಳು ಮತ್ತು ಅಲ್ಲಿನ ಕೋಟ್ಯಾಂತರ ನಾಗರಿಕರನ್ನೊಳಗೊಂಡ ಅಭೂತಪೂರ್ವ ಸಲಹೆ, ಪರ್ಯಾಲೋಚನೆ ಮತ್ತು ಸಮಾಲೋಚನಾ ಪ್ರಕ್ರಿಯೆಗಳಿಂದ ಈ ಮಹತ್ವಾಕಾಂಕ್ಷಿ ಕಾರ್ಯಸೂಚಿಯಾದ ಸುಸ್ಥಿರ ಅಭಿವೃದ್ದಿಗುರಿಗಳನ್ನು ಅಭಿವೃದ್ದಿಪಡಿಸಲಾಗಿದೆ.

ಈ ಗುರಿಗಳನ್ನು ಸಾಧಿಸಲು ಕೇವಲ ಕೇಂದ್ರ ಮತ್ತು ರಾಜ್ಯ ಸರಕಾರಗಳ ಪ್ರಯತ್ನ ಸಾಲದು. ಇದರ ಜೊತೆಗೆ ಎಲ್ಲ ಸ್ಥಳೀಯ ಸರಕಾರಗಳು ಸ್ವಯಂಸೇವಾ ಸಂಸ್ಥೆಗಳು, ಕೈಗಾರಿಕೆಗಳು, ವ್ಯಾಪಾರೋದ್ಯಮಗಳು, ಸೇವಾ ವಲಯಗಳು, ಸಮುದಾಯ ಮತ್ತು ಎಲ್ಲಕ್ಕಿಂತ ಹೆಚ್ಚಾಗಿ ಮಕ್ಕಳು, ಶಿಕ್ಷಕರು, ಮುಖ್ಯ ಶಿಕ್ಷಕರು ಹಾಗೂ ಮೇಲುಸ್ತುವಾರಿ ವಹಿಸಿರುವ ನಾಯಕರೆಲ್ಲೂ ಈ ಗುರಿಗಳನ್ನು ಅರಿತುಕೊಳ್ಳುವ ಅವಶ್ಯಕತೆ ಇದೆ.

**ಸುಸ್ಥಿರ ಅಭಿವೃದ್ಧಿ ಪರಿಕಲ್ಪನೆ;**

1. ನಿಮ್ಮ ಪ್ರಕಾರ ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆ ಅಂದರೆ?
2. ಸುಸ್ಥಿರ ಅಭಿವೃದ್ಧಿಯನ್ನು ಹೀಗೆ ನಿರೂಪಿಸಬಹುದೇ?

ಯಾವುದೇ ಅಭಿವೃದ್ಧಿಯಿಂದ ಸಿಗುವ ಫಲಿತಾಂಶ, ಪ್ರಯೋಜನವನ್ನು ಒಬ್ಬರೇ ಬಳಸಿ, ಎಲ್ಲವನ್ನೂ ಮುಗಿಸಿಬಿಡುವುದು, ಖಾಲಿ ಮಾಡುವುದು ಒಳ್ಳೆಯದಲ್ಲ. ಅದು ಸುಸ್ಥಿರವಲ್ಲ. ಸುಸ್ಥಿರ ಅಭಿವೃದ್ಧಿಯೆಂದರೆ, ಸ್ವಾಭಾವಿಕವಾಗಿ ಇರುವ, ಸಿಗುವ ಮತ್ತು ಮನುಷ್ಯರು ಸೃಷ್ಟಿಸಿರುವ ಅಥವಾ ತಯಾರಿಸಿರುವ ಸಂಪನ್ಮೂಲಗಳನ್ನು ನಮಗೆ ಎಷ್ಟು ಅವಶ್ಯಕತೆ ಇದೆಯೋ ಅಷ್ಟನ್ನು ಮಾತ್ರ ಬಳಸಿಕೊಂಡು ಉಳಿದವರಿಗಾಗಿ ಅದೇ ಸಂಪನ್ಮೂಲಗಳನ್ನು, ಉದಾಹರಣೆಗೆ:– ನದಿ, ಹಳ್ಳ, ಬಾವಿ, ತೊರೆ, ಕೆರೆಕಟ್ಟೆಗಳು, ಗಿಡ, ಮರ, ಬಳ್ಳಿ, ಗುಡ್ಡ, ಬೆಟ್ಟ, ತೈಲ, ಗಾಳಿ, ಪ್ರಾಣಿ ಮತ್ತು ಪಕ್ಷಿ ಸಂಕುಲ ಇವೇ ಮೊದಲಾದ ನೈಸರ್ಗಿಕ ಸಂಪನ್ಮೂಲಗಳನ್ನು ಎಷ್ಟು ಸಾಧ್ಯವೋ ಅಷ್ಟು ಉತ್ತಮ ಪರಿಸ್ಥಿತಿಯಲ್ಲಿ ಬಿಟ್ಟುಕೊಡುವುದು. ಅಂದರೆ, ನಾವು ಜವಾಬ್ದಾರಿಯಿಂದ ಬಳಸುವುದು. ಇರುವುದನ್ನೆಲ್ಲಾ ಹಾಳು

ಮಾಡುವುದಲ್ಲ. ಇದು ಕೇವಲ ಈಗಿರುವ ಜನರಿಗಾಗಿ ಮಾತ್ರವಲ್ಲ, ಮುಂದಿನ ಜನಾಂಗಕ್ಕೂ ಉಳಿಸುವುದೇ ಆಗಿದೆ. ಸಂಪನ್ಮೂಲಗಳನ್ನು ಹೆಚ್ಚು ಹೆಚ್ಚು ಮಾಡುವುದು ಕೂಡಾ ನಮ್ಮ ಜವಾಬ್ದಾರಿ. ಹಾಗೆ ಸೃಷ್ಟಿಸಿದ ಸಂಪನ್ಮೂಲಗಳನ್ನು ನಾವು ಬಳಸಬಹುದು. ಆದರೆ, ಮುಂದಿನವರಿಗೂ ಇದನ್ನು ಉಳಿಸುವುದು ನಮ್ಮ ಜವಾಬ್ದಾರಿ. ಒಟ್ಟಿನಲ್ಲಿ ಸುಸ್ಥಿರ ಅಭಿವೃದ್ಧಿ ಎಂದರೆ,


**'ಬೆಳೆಸು – ಬಳಸು – ಉಳಿಸು'**

ಸಧ್ಯದ ಸುಸ್ಥಿತಿಯನ್ನು ದೀರ್ಘಕಾಲದವರೆಗೆ ಹಾನಿಯಾಗದಂತೆ ಕಾಯ್ದುಕೊಂಡು ಅಭಿವೃದ್ದಿ ಸಾಧಿಸುವದೇ ಸುಸ್ಥಿರ ಅಭಿವೃದ್ದಿ ಅಂದರೆ, ಮುಂದಿನ ಜನಾಂಗವು ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳುವ ಸಾಮರ್ಥ್ಯಕ್ಕೆ ಧಕ್ಕೆ ಬಾರದ ರೀತಿಯಲ್ಲಿ ಪ್ರಸಕ್ತ ಜನಾಂಗವು ತನ್ನ ಅಗತ್ಯಗಳನ್ನು ಪೂರೈಸಿಕೊಳ್ಳಲು ಅನುವು ಮಾಡಿಕೊಡುವ ಅಭಿವೃದ್ದಿಯಾಗಿದೆ. "ಮುಂದಿನ ಪೀಳಿಗೆಯ ತಮ್ಮ ಅಗತ್ಯಗಳನ್ನು ಪೂರೈಸುವ ಸಾಮರ್ಥ್ಯವನ್ನು ರಾಜಿ ಮಾಡಿಕೊಳ್ಳದೇ ಪ್ರಸ್ತುತ ಪೀಳಿಗೆಯ ಅಗತ್ಯಗಳನ್ನು ಪೂರೈಸುವುದೇ ಅಭಿವೃದ್ದಿ". ಬ್ರಂಡ್ಲ್ಯಾಂಡ ವರದಿ –1987. ಸುಸ್ತಿರ ಅಭಿವೃದ್ಧಿ 17 ಗುರಿಗಳನ್ನು ಕೇಂದ್ರವಾಗಿಸಿಕೊಂಡು ವಿಶ್ವಸಂಸ್ಥೆಯು 2015ರಲ್ಲಿ ಕಾರ್ಯಸೂಚಿ 2030ನ್ನು ಸ್ವೀಕರಿಸಿತು. ಇವು ಮಿಲೇನಿಯಮ್ ಡೆವಲಪ್ಮೆಂಟ್ ಗೋಲ್ಸ್‌ನ್ನು ಆಧಾರವಾಗಿಟ್ಟುಕೊಂಡು 2015–2030 ಸಾಧಿಸುವ ಉದ್ದೇಶವನ್ನು ಹೊಂದಿತ್ತು. ಇದು ಸುಸ್ಥಿರ ಅಭಿವೃದ್ಧಿಯಲ್ಲಿ ಸಾರ್ವತ್ರಿಕ ವೈಯಕ್ತಿಕ ನೆಲೆಯಲ್ಲಿ ಮಹತ್ವದ ಸ್ಥಿತ್ಯಂತರವನ್ನು ತರುವ ದೂರದೃಷ್ಟಿಯನ್ನು ಹೊಂದಿದೆ ಈ ದಿಕ್ಕಿನಲ್ಲಿ ಕಳೆದ 15 ವರ್ಷಗಳ ಬಡತನವನ್ನು ಮತ್ತು ಅದರದು ಸ್ಥಿತಿಯನ್ನು ನಿರ್ಮೂಲನೆ ಮಾಡಿ ಜನರಿಗೆ ಮತ್ತು ಭೂಮಂಡಲಕ್ಕೆ ಶಾಂತಿಯನ್ನು ನೀಡುವ ಪ್ರಯತ್ನ ಮಾಡಿದೆ. ಸುಸ್ಥಿರ ಅಭಿವೃದ್ಧಿಯ ನೀಲಿನಕ್ಷೆಯನ್ನು ಜನರು ಭೂಮಂಡಲದ ಶಾಂತಿ ಮತ್ತು ಸಮೃದ್ಧಿಯನ್ನು ಗುರಿಯಾಗಿಸಿಕೊಂಡು ತಯಾರಿಸಲಾಗಿದೆ.

ಸುಸ್ಥಿರ ಅಭಿವೃದ್ಧಿ ಗುರಿ ಚೌಕಟ್ಟಿನ ಕೆಲವು ಸೂಚ್ಯಂಕಗಳ ಆಧಾರದ ಮೇಲೆ ಮೇ–2019 ರ ಮಾಹಿತಿಯನ್ನು ಬಳಸಿಕೊಂಡು ಸಿದ್ಧಪಡಿಸಿದ ವಿಶ್ವ ಸಂಸ್ಥೆಯ ಸುಸ್ಥಿರ ಅಭಿವೃದ್ಧಿ ಗುರಿ ವರದಿ–2019ರ ಪ್ರಕಾರ ಸುಸ್ಥಿರ ಅಭಿವೃದ್ಧಿಗೆ ಪೂರಕವಾದ ಕೆಲವು ಬೆಳವಣಿಗೆ ಕಾಣಬಹುದಾಗಿದೆ. ತೀವ್ರವಾದ ಬಡತನದ ಪ್ರಮಾಣವೂ ಕುಸಿತವನ್ನು ಕಂಡಿದೆ 2017ರ ನಡುವಿನ ವರ್ಷಗಳಲ್ಲಿ ಐದು ವರ್ಷದೊಳಗಿನ ಮಕ್ಕಳ ಮರಣ ಪ್ರಮಾಣದಲ್ಲಿ ಶೇಕಡ 49ರಷ್ಟು ಕುಸಿತವನ್ನು ಕಂಡಿದೆ. ಲಸಿಕೆಗಳು ಲಕ್ಷಾಂತರ ಜನರ ಜೀವವನ್ನು ಉಳಿಸಿವೆ ಮತ್ತು ಜಗತ್ತಿನ ಬಹುತೇಕ ಜನರಿಗೆ ವಿದ್ಯುತ್ ಸಂಪರ್ಕವೂ ದೊರೆತಿದೆ. ಭೂಗ್ರಹವನ್ನು ಸಂರಕ್ಷಿಸುವ ಅನೇಕ ಕ್ರಮಗಳನ್ನು ವಿವಿಧ ದೇಶಗಳು ಕೈಗೊಳ್ಳುತ್ತಿವೆ. ಜಲಚರ ಸಂರಕ್ಷಣಾ ಪ್ರದೇಶ ವ್ಯಾಪ್ತಿ 2010ರ ನಂತರ ದ್ವಿಗುಣಗೊಂಡಿದೆ. ಕಾಡುಪ್ರಾಣಿಗಳ ಕಳ್ಳ ಬೇಟೆಯನ್ನು ತಡೆಗಟ್ಟುವ ಖಚಿತವಾದ ಕ್ರಮಗಳು ದೇಶಗಳು ಅನುಷ್ಠಾನಗೊಳಿಸಿವೆ ಹವಾಮಾನ ವೈಪರಿತ್ಯ ತಡೆಯುವ ಪ್ಯಾರಿಸ್ ಒಪ್ಪಂದಕ್ಕೆ 183 ದೇಶಗಳು ಸಹಿ ಹಾಕಿವೆ. ಬಹುತೇಕ ಎಲ್ಲಾ ದೇಶಗಳು ತಮ್ಮ ಉಳಿವಿಗೆ ಬೇಕಾದ ಕ್ರಮಗಳನ್ನು ಬಹಳ ಸ್ಪಷ್ಟವಾಗಿ ಬಹಿರಂಗಗೊಳಿಸಿವೆ. ವೇಗವಾಗಿ ಬೆಳೆಯುತ್ತಿರುವ ನಗರೀಕರಣವನ್ನು ತಡೆಗಟ್ಟುವ ನಿಟ್ಟಿನಲ್ಲಿ 150 ದೇಶಗಳು ರಾಷ್ಟ್ರೀಯ ನೀತಿಗಳನ್ನು ಅನುಷ್ಠಾನಕ್ಕೆ ತಂದಿವೆ. ಜವಾಬ್ದಾರಿಯುತ ಬಳಕೆ ಮತ್ತು ಉತ್ಪಾದನೆಯನ್ನು ಬೆಂಬಲಿಸುವ 300 ನೀತಿಗಳನ್ನು ಮತ್ತು ನಿಯಮಗಳನ್ನು ಯುರೋಪಿಯನ್ ಒಕ್ಕೂಟ ಸೇರಿದಂತೆ 71 ದೇಶಗಳು ಸೇರಿ ಠರಾವು ಪಾಸ್ ಮಾಡಿವೆ.

ಅಂತರರಾಷ್ಟ್ರೀಯ ಸಂಸ್ಥೆಗಳು ವ್ಯಾಪಾರಗಾರರು ಸ್ಥಳೀಯ ಆಡಳಿತಗಾರರು ವೈಜ್ಞಾನಿಕ ಸಮುದಾಯ ಮತ್ತು ನಾಗರೀಕ ಸಮಾಜ ಎಲ್ಲರೂ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಬಹಳ ಸೂಕ್ಷ್ಮವಾಗಿ ಸ್ವೀಕರಿಸಿರುವುದನ್ನು ಕಾಣಬಹುದಾಗಿದೆ. ಮುಂಬರುವ ದಿನಗಳಲ್ಲಿ ಅತ್ಯಂತ ಪ್ರಮುಖವಾದ ಶಕ್ತಿಯಾಗಿ ಹೊರಹೊಮ್ಮಲಿದೆ. ಸುಸ್ಥಿರ ಅಭಿವೃದ್ಧಿ ಗುರಿಗಳ ಪ್ರಗತಿಗೆ ಸಂಬಂಧಿಸಿದಂತೆ ವಿಶ್ವ ಸಂಸ್ಥೆ ಅಂಗಸಂಸ್ಥೆಯಾದ "ಯುನೈಟೆಡ್ ನೇಷನ್ ಎಕನಾಮಿಕ್ ಅಂಡ್ ಸೋಶಿಯಲ್ ಕಮಿಷನ್ ಫಾರ್ ಏಷ್ಯಾ ಅಂಡ್ ಪೆಸಿಫಿಕ್" ಸಂಸ್ಥೆಯು ನೀಡಿರುವ ವರದಿಯಲ್ಲಿ ಕೆಲವು ಮುಖ್ಯವಾದ ಅಂಶಗಳನ್ನು ಪ್ರಸ್ತಾಪಿಸಲಾಗಿದೆ.

ಸುಸ್ಥಿರ ಅಭಿವೃದ್ಧಿ ಗುರಿಗಳ 2030ರ ಕುರಿತು ಯುಎನ್‌ಇಎಸ್‌ಸಿಎಪಿ ವರದಿ




**ಮೂಲ:** ಯುಎನ್‌ಎಎಸ್‌ಸಿಎಪಿ, 2019 ವರದಿ (ಏಷ್ಯಾ–ಪೆಸಿಫಿಕ್)


## ಭಾರತ ಮತ್ತು ಸುಸ್ತಿರ ಅಭಿವೃದ್ಧಿಯ ಗುರಿಗಳು:

ಭಾರತದ ಸಂಸತ್ತು ದೇಶದ ಅಭಿವೃದ್ಧಿ ಕಾರ್ಯಸೂಚಿಯೊಂದಿಗೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಒಳಗೊಳ್ಳುವ ಬದ್ಧತೆಯನ್ನು ಪ್ರದರ್ಶಿಸಿದೆ. ಬಡತನ ನಿವಾರಣೆ, ಲಿಂಗ ಸಮಾನತೆಯನ್ನು ಸಾಧಿಸುವುದು ಮತ್ತು ಹವಾಮಾನ ವೈಪರಿತ್ಯಗಳ ಪರಿಣಾಮವನ್ನು ನಿಭಾಯಿಸುವ ಕುರಿತು ಚರ್ಚಿಸಲು ತನ್ಮೂಲಕ ಕಾರ್ಯನೀತಿಗಳನ್ನು ರಚಿಸಲು ಅನೇಕ ಸಮ್ಮೇಳನಗಳನ್ನು ಮತ್ತು ಚರ್ಚೆಗಳನ್ನು ಏರ್ಪಡಿಸಿದೆ. ವಿಶ್ವಸಂಸ್ಥೆ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು 75ರ ಹೊಸ್ತಿಲಲ್ಲಿ ನವ ಭಾರತಕ್ಕೆ ನವೀನ ತಂತ್ರಗಳು ಸಮಗ್ರವಾಗಿ ಒಗ್ಗೂಡಿಸುವ ಕಾರ್ಯತಂತ್ರವನ್ನು ರೂಪಿಸಿದೆ. ಸುಸ್ಥಿರ ಅಭಿವೃದ್ಧಿ ಗುರಿಗಳೊಂದಿಗೆ ಭಾರತದ ಸಮಗ್ರ ಅಭಿವೃದ್ಧಿ ಕಾರ್ಯಸೂಚಿ ಮತ್ತು ಸಬ್ ಕಾ ವಿಕಾಸ್ ಅಥವಾ ಸಾಮೂಹಿಕ ಯತ್ನ ಸಮಗ್ರ ಅಭಿವೃದ್ಧಿ ಗುರಿಗಳನ್ನು ಸಮ್ಮಿಳಿತಗೊಳಿಸುವ ಉದ್ದೇಶವನ್ನು ಹೊಂದಲಾಗಿರುತ್ತದೆ. ಇದರ ಅನುಷ್ಠಾನಕ್ಕೆ ಪ್ರಧಾನ ಮಂತ್ರಿಗಳು ಅಧ್ಯಕ್ಷರಾಗಿರುವ ನೀತಿ ಆಯೋಗವು ಒಟ್ಟಾರೆ ನಾಯಕತ್ವವನ್ನು ನೀಡುತ್ತದೆ. ಎಲ್ಲಾ 17 ಸುಸ್ತಿರ ಅಭಿವೃದ್ಧಿ ಗುರಿಗಳ ಹಾಗೂ ಎಲ್ಲಾ 169 ಲಕ್ಷ್ಯಗಳ ವಿವರಗಳನ್ನು ಸಂಬಂಧಪಟ್ಟ ನೋಡಲ್ ಕೇಂದ್ರ ಸಚಿವಾಲಯಗಳಿಗೆ ಸಂಪೂರ್ಣವಾಗಿ ನೀಡಿರುತ್ತದೆ. ಇದರಿಂದ ಕೇಂದ್ರದ ಪ್ರಾಯೋಜಕತ್ವವನ್ನು ಹೊಂದಿರುವ ಯೋಜನೆಗಳು ಮತ್ತು ಪ್ರಮುಖವಾದ ಸರ್ಕಾರಿ ಪ್ರಕ್ರಿಯೆಗಳು ಇದರ ಪ್ರಯೋಜನವನ್ನು ಪಡೆದುಕೊಳ್ಳಲಿದೆ. ಬಹುತೇಕ ಸರ್ಕಾರಗಳಿಂದ ಹುದ್ದೆ ಕಾರ್ಯವನ್ನು ಹೊಂದಿಕೊಂಡಿದ್ದು ಇದೇ ರೀತಿಯ ತಯಾರಿಯನ್ನು ಮಾಡಿಕೊಂಡಿರುತ್ತೇವೆ. ಜಾಗತಿಕ ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಆಧಾರವಾಗಿಟ್ಟುಕೊಂಡು ಕೇಂದ್ರ ಅಂಕಿ ಸಂಖ್ಯೆ ಮತ್ತು ಕಾರ್ಯಕ್ರಮ ಅನುಷ್ಠಾನದ ಸಚಿವಾಲಯವು ಕರಡು ರಾಷ್ಟ್ರೀಯ ಸೂಚ್ಯಂಕವನ್ನು ಸಿದ್ಧಪಡಿಸಿದೆ.

2018ರ ನೀತಿ ಆಯೋಗವು ಯು.ಎನ್ ಇಂಡಿಯಾದ ಸಹಯೋಗದಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳ ಇಂಡಿಯಾ ಬೇಸ್ ಲೈನ್ ವರದಿಯನ್ನು ಸಿದ್ಧಪಡಿಸಿತು ಜೊತೆಗೆ 17 ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ 13ಕ್ಕೆ ಸಂಪೂರ್ಣ ಪೂರಕ ಮಾಹಿತಿಗಳಿರುವ ಅಗತ್ಯ ಮಾಹಿತಿ ಸಂಗ್ರಹವನ್ನು ನಿರ್ಮಿಸಿತು. 12, 13, 14 ಮತ್ತು 17 ಗುರಿಗಳನ್ನು ಹೊರತುಪಡಿಸಿ ಅದರಲ್ಲಿ 12 ಸೂಚ್ಯಂಕಗಳನ್ನು ಆಧರಿಸಿ ದೇಶದ ಪ್ರಗತಿಯನ್ನು ಸಮಗ್ರವಾಗಿ ದಾಖಲಿಸುವ ಪ್ರಯತ್ನವನ್ನು ಈ ವರದಿ ಮಾಡಿತು. ಜೊತೆಗೆ ಇದೇ 62 ಸೂಚ್ಯಂಕಗಳನ್ನು ಆದರಿಸಿ ರಾಜ್ಯಗಳ ಮತ್ತು ಕೇಂದ್ರಾಡಳಿತ ಪ್ರದೇಶಗಳ ಪ್ರಗತಿಯನ್ನು

ಗಣನೆಗೆ ತೆಗೆದುಕೊಂಡು ಜೇಷ್ಠತಾ ಪಟ್ಟಿ ಒಂದನ್ನು ತಯಾರಿಸಲಾಗಿದೆ. ಈ ಸೂಚ್ಯಂಕವು ಅಭಿವೃದ್ಧಿಯ ಸಾಮಾಜಿಕ ಆರ್ಥಿಕ ಹಾಗೂ ನೈಸರ್ಗಿಕ ಮಾನದಂಡಗಳನ್ನು ರೂಪಿಸುವುದಕ್ಕೆ ಪೂರಕವಾದ ವಾತಾವರಣವನ್ನು ನಿರ್ಮಿಸುತ್ತದೆ

ರಾಜ್ಯವಾರು ಸುಸ್ಥಿರ ಅಭಿವೃದ್ಧಿ ಗುರಿ ಸೂಚಿ




ಮೂಲ: ನೀತಿ ಆಯೋಗ, 2018

## ಸುಸ್ಥಿರ ಅಭಿವೃದ್ಧಿ ಮಾಡ್ಯೂಲ್‌ನ ದೂರದೃಷ್ಟಿ:

**"ದಾಖಲಾದ ಎಲ್ಲ ಮಕ್ಕಳನ್ನು ಕಲಿಕೆಯಲ್ಲಿ ತೊಡಗಿಸಿ, ಗುಣಾತ್ಮಕ ಶಿಕ್ಷಣವನ್ನು 2030 ರೊಳಗೆ ಪೂರೈಸುವುದು".**

2015 ರಲ್ಲಿ ವಿಶ್ವಸಂಸ್ಥೆಯು ಅಳವಡಿಸಿಕೊಂಡ ಸುಸ್ಥಿರ ಅಭಿವೃದ್ಧಿ ಗುರಿಗಳು (SDGs), ಬಡತನವನ್ನು ಕೊನೆಗೊಳಿಸುವ, ಭೂಪರಿಸರವನ್ನು ರಕ್ಷಿಸುವ ಮತ್ತು 2030 ರ ವೇಳೆಗೆ ಎಲ್ಲಾ ಜನರು ಶಾಂತಿ ಮತ್ತು ಸಮೃದ್ಧಿಯನ್ನು ಆನಂದಿಸುವ ಗುರಿಯನ್ನು ಒಳಗೊಂಡಿದೆ. ಈ 17 ಗುರಿಗಳು ಸಮಗ್ರ ನೀಲನಕ್ಷೆಯನ್ನು ಒದಗಿಸುತ್ತದೆ. ಹೆಚ್ಚು ಸಮಾನ ಮತ್ತು ಸಮರ್ಥನೀಯ ಜಗತ್ತಿಗೆ, ಹವಾಮಾನ ಬದಲಾವಣೆ ಮತ್ತು ಪರಿಸರ ಸಂರಕ್ಷಣೆಯಿಂದ ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಬೆಳವಣಿಗೆಯವರೆಗೆ ವ್ಯಾಪಕ ಶ್ರೇಣಿಯ ಸಮಸ್ಯೆಗಳನ್ನು ಪರಿಹರಿಸುತ್ತದೆ.

ಶಿಕ್ಷಣ ನಿರ್ದಿಷ್ಟವಾಗಿ ಈ ಆಶಯಗಳನ್ನು ಸಾಧಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. "ಗುಣಮಟ್ಟದ ಶಿಕ್ಷಣ"ದ ಮೇಲೆ ಕೇಂದ್ರೀಕರಿಸುವ SDG 4, ಎಲ್ಲರಿಗೂ ಒಳಗೊಳ್ಳುವ ಮತ್ತು ಸಮಾನ ಶಿಕ್ಷಣದ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತದೆ. ಆಜೀವಕಲಿಕೆಯ ಅವಕಾಶಗಳನ್ನು ಉತ್ತೇಜಿಸುತ್ತದೆ. ಆದಾಗ್ಯೂ ಶಿಕ್ಷಣ ಮತ್ತು ವಿಶಾಲವಾದ SDG ಚೌಕಟ್ಟಿನ ನಡುವಿನ ಸಂಪರ್ಕವು ಈ ಏಕೈಕ ಗುರಿಯನ್ನು ಮೀರಿ ವಿಸ್ತರಿಸುತ್ತದೆ. ಶಿಕ್ಷಣವು ಸುಸ್ಥಿರ ಭವಿಷ್ಯವನ್ನು ರಚಿಸಲು ಅಗತ್ಯವಾದ ಜ್ಞಾನ, ಕೌಶಲಗಳು, ಮೌಲ್ಯಗಳು ಮತ್ತು ವರ್ತನೆಗಳ ಅಭಿವೃದ್ಧಿಯನ್ನು ಉತ್ತೇಜಿಸುವ, ಎಲ್ಲಾ

SDG ಗಳ ಸಾಧನೆಯ ಮೇಲೆ ಪ್ರಭಾವ ಬೀರುವ ಮತ್ತು ಬೆಂಬಲಿಸುವ ಪ್ರಬಲ ಸಾಧನವಾಗಿದೆ. ಈ ಪರಿವರ್ತನಾ ಪ್ರಕ್ರಿಯೆಯಲ್ಲಿ ಶಾಲೆಗಳು ಮುಂಚೂಣಿಯಲ್ಲಿವೆ. ಪಠ್ಯಕ್ರಮದಲ್ಲಿ SDG ಗಳನ್ನು ಸಂಯೋಜಿಸುವ ಮೂಲಕ, ಶಾಲಾ ಶಿಕ್ಷಣವು 21ನೇ ಶತಮಾನದ ಸವಾಲುಗಳನ್ನು ನಿಭಾಯಿಸಲು ಸಜ್ಜುಗೊಂಡಿದೆ. ಈ ಮೂಲಕ ಮಾಹಿತಿಯುಕ್ತ ಮತ್ತು ಜವಾಬ್ದಾರಿಯುತ ಜಾಗತಿಕ ನಾಗರಿಕರ ಪೀಳಿಗೆಯನ್ನು ಬೆಳೆಸಬಹುದು. ಈ ವಿಧಾನವು ವಿದ್ಯಾರ್ಥಿಗಳು ಜಾಗತಿಕ ಸಮಸ್ಯೆಗಳ ಬಗ್ಗೆ ವಿಮರ್ಶಾತ್ಮಕವಾಗಿ ಯೋಚಿಸಲು, ವಿವಿಧ ಅಭಿವೃದ್ಧಿ ಸವಾಲುಗಳ ಪರಸ್ಪರ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಮತ್ತು ಅವರ ಸಮುದಾಯಗಳಲ್ಲಿ ಮತ್ತು ಅದರಾಚೆಗೆ ಅರ್ಥಪೂರ್ಣ ಕ್ರಮಗಳನ್ನು ತೆಗೆದುಕೊಳ್ಳಲು ಪ್ರೋತ್ಸಾಹಿಸುತ್ತದೆ.

ಶಾಲಾ ಶಿಕ್ಷಣದಲ್ಲಿ SDG ಗಳನ್ನು ಸೇರಿಸುವುದರಿಂದ ಅಂತರಶಿಸ್ತಿನ ಕಲಿಕೆಯನ್ನು ಉತ್ತೇಜಿಸುತ್ತದೆ. ಅಲ್ಲಿ ವಿದ್ಯಾರ್ಥಿಗಳು ವಿವಿಧ ವಿಷಯಗಳ ನಡುವಿನ ಸಂಪರ್ಕಗಳನ್ನು ಅನ್ವೇಷಿಸಬಹುದು. ಉದಾಹರಣೆಗೆ ವಿಜ್ಞಾನ, ಸಾಮಾಜಿಕ ಅಧ್ಯಯನಗಳು ಮತ್ತು ಅರ್ಥಶಾಸ್ತ್ರ ಅಂತರ್‌ಶಿಸ್ತೀಯ ಅಧ್ಯಯನದ ಮೂಲಕ ಸಾಧಿಸಬಹುದು. ಈ ಸಮಗ್ರ ವಿಧಾನವು ವಿದ್ಯಾರ್ಥಿಗಳ ಶೈಕ್ಷಣಿಕ ಜ್ಞಾನವನ್ನು ಹೆಚ್ಚಿಸುವುದು ಮಾತ್ರವಲ್ಲದೆ ಸಮಸ್ಯೆ ಪರಿಹರಿಸುವುದು, ಸಹಯೋಗ ಮತ್ತು ನೈತಿಕ ನಿರ್ಧಾರ ಮಾಡುವಿಕೆಯಂತಹ ಅಗತ್ಯ ಜೀವನ ಕೌಶಲಗಳನ್ನು ಸಹ ನಿರ್ಮಿಸುತ್ತದೆ.

**ಸುಸ್ಥಿರ ಅಭಿವೃದ್ಧಿ ಮಾಡ್ಯೂಲ್‌ನ ಉದ್ದೇಶಗಳು:**

- ಸುಸ್ಥಿರ ಅಭಿವೃದ್ಧಿ ಅಂದರೇನು ಎಂಬುದನ್ನು ಪರಿಚಯಿಸುವುದರ ಜೊತೆಗೆ ಪ್ರಾಮುಖ್ಯತೆಯನ್ನು ವಿಶ್ಲೇಷಿಸುವರು.
- ಸುಸ್ಥಿರ ಅಭಿವೃದ್ದಿಯ ಗುರಿಗಳನ್ನು ಪರಿಚಯಿಸುವ ಮೂಲಕ ಭವಿಷ್ಯದ ಹೊಣೆಗಾರಿಕೆಯ ಅರಿವು ಮೂಡಿಸುವುದು.
- ಶಿಕ್ಷಣಕ್ಕೆ ಸಂಬಂಧಿಸಿದ ಸುಸ್ಥಿರ ಅಭಿವೃದ್ದಿಯ ಗುರಿಗಳ ಅನುಷ್ಠಾನದಲ್ಲಿ ಮೇಲ್ವಿಚಾರಕರ ಪಾತ್ರವನ್ನು ಗುರುತಿಸಿಕೊಳ್ಳುವುರು.
- ಸುಸ್ಥಿರ ಅಭಿವೃದ್ದಿಯ ಗುರಿಗಳ ಈಡೇರಿಕೆಯಲ್ಲಿ ಕ್ರಿಯಾಯೋಜನೆ ಸಿದ್ದಪಡಿಸಿ, ಅದರ ಅನುಷ್ಠಾನದ ಕಾರ್ಯತಂತ್ರಗಳನ್ನು ಕಂಡುಕೊಳ್ಳುವರು.

**ಸುಸ್ಥಿರ ಅಭಿವೃದ್ದಿಯ ಅವಶ್ಯಕತೆ:**

ಸುಸ್ಥಿರ ಅಭಿವೃದ್ದಿ ಎಂಬ ಪರಿಕಲ್ಪನೆ ಎಲ್ಲೆಡೆಯಲ್ಲಿ ಚರ್ಚೆಯಾಗುತ್ತಿದೆ ಏಕಿರಬಹುದು?

ಸುಸ್ಥಿರ ಅಭಿವೃದ್ದಿಯ ಅವಶ್ಯಕತೆ ಇಂದು ಅತ್ಯಗತ್ಯವಾಗಿದೆ. ಇಂದು ಆರ್ಥಿಕ ಅಭಿವೃದ್ಧಿಯ ಹೆಸರಿನಲ್ಲಿ ಕೈಗೊಂಡ ಕಾರ್ಯಗಳ ಬೆಲೆಯನ್ನು ಭೂಮಿಯ ಅವನತಿ, ಮಣ್ಣಿನ ಸವೆತ, ವಾಯು ಮತ್ತು ಜಲಮಾಲಿನ್ಯ, ಅರಣ್ಯ ನಾಶ, ಇತ್ಯಾದಿಗಳ ರೂಪದಲ್ಲಿ ಪಾವತಿಸಲಾಗುತ್ತಿದೆ. ಆದುದರಿಂದ ಪರಿಸರದ ಸಮಸ್ಯೆಗಳನ್ನು ಕಡಿಮೆ ಮಾಡುವ ರೀತಿಯಲ್ಲಿ ಅಭಿವೃದ್ದಿ ಸಾಧಿಸಲು ಮುಂದಿನ ಪೀಳಿಗೆಯು ತಮ್ಮ ಅಗತ್ಯಗಳನ್ನು ಪೂರೈಸಿಕೊಳ್ಳಲು ಯಾವುದೇ ತೊಂದರೆಯಾಗದಿರಲು ಇಂದು ಸುಸ್ಥಿರ ಅಭಿವೃದ್ದಿಯ ಅವಶ್ಯಕತೆ ಇದೆ.

ಆದ್ದರಿಂದ ಸುಸ್ಥಿರ ಅಭಿವೃದ್ಧಿ ಗುರಿಗಳು ಶಾಲೆಯಲ್ಲಿನ ಬೇರೆ ಬೇರೆ ಪ್ರಕ್ರಿಯೆಗಳ ಮೂಲಕ ಯಾವ ರೀತಿ ಸಾಕಾರಗೊಳಿಸಬಹುದು ಎಂದು ಚಿಂತನೆ ನಡೆಸಿ, ಆ ನಿಟ್ಟಿನಲ್ಲಿ ನಿರ್ದಿಷ್ಟ ಕ್ರಿಯೆಗಳನ್ನು ಗುರುತಿಸಿ ಕಾರ್ಯತತ್ಪರವಾಗುವುದು ಅವಶ್ಯಕವಾಗಿದೆ. ಉದಾಹರಣೆಗೆ ಏಳು ಗುರಿಗಳು ನೇರವಾಗಿ ಶೈಕ್ಷಣಿಕ ವ್ಯವಸ್ಥೆಯೊಳಗೆ ಅನುಷ್ಠಾನಗೊಳಿಸುವ ಸಾಧ್ಯತೆ ಇದ್ದು, ಅವುಗಳನ್ನು ಶಾಲಾ ಮತ್ತು ತರಗತಿ ಪ್ರಕ್ರಿಯೆಗಳ ಜೊತೆಗೆ ಮ್ಯಾಪಿಂಗ್ ಮಾಡುವುದರ ಮೂಲಕ ಜವಾಬ್ದಾರಿಯಿಂದ ಅನುಷ್ಠಾನಗೊಳಿವ ಅವಶ್ಯಕತೆ ಇದೆ.

**ಸುಸ್ಥಿರ ಅಭಿವೃದ್ದಿಯ ಕ್ಷೇತ್ರಗಳು:**

ಸುಸ್ಥಿರ ಅಭಿವೃದ್ದಿಯ ಕ್ಷೇತ್ರಗಳು ಯಾವವು? ಪಟ್ಟಿ ಮಾಡಿ.

ಸುಸ್ಥಿರ ಅಭಿವೃದ್ದಿ ಕ್ಷೇತ್ರಗಳನ್ನು ಗುರುತಿಸಿಕೊಂಡು ವಿಶ್ವ ಸಂಸ್ಥೆಯು ನಿರ್ಧಿಷ್ಠವಾಗಿ 17 ಗುರಿಗಳನ್ನು ಗುರುತಿಸಿಕೊಂಡು 2030 ರೊಳಗೆ ಇವುಗಳನ್ನು ಸಾಧಿಸುವಂತೆ 2015ರ ಸೆಪ್ಟಂಬರ್ ನಲ್ಲಿ ನಡೆದ 193 ಸದಸ್ಯ

ರಾಷ್ಟ್ರಗಳ ವಿಶ್ವ ಸಂಸ್ಥೆಯ ಸಾಮಾನ್ಯ ಸರ್ವ ಸದಸ್ಯರ ಐತಿಹಾಸಿಕ ಶೃಂಗ ಸಮ್ಮೇಳನದಲ್ಲಿ ಅಳವಡಿಸಿಕೊಳ್ಳಲಾಯಿತು. ಎಸ್.ಡಿ.ಜಿ 1 ಜನೇವರಿ 2016 ರಿಂದ ಜಾರಿಗೆ ಬಂದಿದೆ. ಭಾರತವೂ ಎಸ್.ಡಿ.ಜಿ ಜಾರಿಗೆ ಒಪ್ಪಿಕೊಂಡಿದೆ.

**1. ಸುಸ್ಥಿರ ಅಭಿವೃದ್ಧಿ ಗುರಿಗಳು :**

1. ಬಡತನದಿಂದ ಮುಕ್ತಿ.
2. ಹಸಿವು ಮುಕ್ತ.
3. ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ
4. ಗುಣಮಟ್ಟದ ಶಿಕ್ಷಣ
5. ಲಿಂಗ ಸಮಾನತೆ
6. ಸ್ವಚ್ಛ ನೀರು ಮತ್ತು ನೈರ್ಮಲ್ಯ
7. ಕೈಗೆಟುಕಬಹುದಾದ ಮತ್ತು ಶುದ್ಧ ಇಂಧನ ಶಕ್ತಿ
8. ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ
9. ಉದ್ಯಮ ಅವಿಷ್ಕಾರ ಮತ್ತು ಮೂಲ ಸೌಕರ್ಯ
10. ಅಸಮಾನತೆಗಳ ಇಳಿಕೆ
11. ಸುಸ್ಥಿರ ನಗರಗಳು ಮತ್ತು ಸಮುದಾಯಗಳು
12. ಸುಸ್ಥಿರ ಬಳಕೆ ಮತ್ತು ಉತ್ಪಾದನೆ
13. ಹವಾಮಾನ ಕ್ರಮ
14. ಜಲದಡಿಯ ಜೀವರಾಶಿ
15. ಭೂಮಿ ಮೇಲಿನ ಜೀವಜಾಲ
16. ಶಾಂತಿ, ನ್ಯಾಯ ಮತ್ತು ದೃಢಸಂಸ್ಥೆಗಳು
17. ಗುರಿಗಳಿಗಾಗಿ ಸಹಭಾಗಿತ್ವ

**2. ಸುಸ್ಥಿರ ಅಭಿವೃದ್ಧಿ ಯೋಜನೆಯ ಉದ್ದೇಶಗಳು.**

- ದಾಖಲಾದ ಎಲ್ಲ ಮಕ್ಕಳಿಗೆ 2030 ರೊಳಗಾಗಿ ಗುಣಮಟ್ಟದ ಶಿಕ್ಷಣವನ್ನು ಒದಗಿಸುವುದು.
- ಪ್ರತಿ ಮಗುವಿಗೆ ತಾರತಮ್ಯ ರಹಿತ, ಹಸಿವು ಮುಕ್ತ ಮತ್ತು ಪರಿಸರ ಸ್ನೇಹಿ ವಾತಾವರಣವನ್ನು ಒದಗಿಸುವುದು.
- ಸಂಪನ್ಮೂಲಗಳನ್ನು ನಾವು ಬಳಸಿ, ಬೆಳೆಸಿ ಮತ್ತು ಉಳಿಸುವ ಜವಾಬ್ದಾರಿಯನ್ನು ಅರ್ಥ ಮಾಡಿಸುವುದು.
- ಎಲ್ಲರಿಗೂ ಸಾಮಾಜಿಕ, ಆರ್ಥಿಕ, ಶೈಕ್ಷಣಿಕವಾಗಿ ನಿರಂತರ ಕಲಿಕಾ ಅವಕಾಶವನ್ನು ಒದಗಿಸುವುದು.
- ಪರಿಸರದ ಅಸಮತೋಲನ ಕುರಿತು ಅರಿವು ಮೂಡಿಸುವುದು.
- ಮಕ್ಕಳಿಗೆ ಜೀವನ ಕೌಶಲ, ಸೃಜನಶೀಲತೆ ಮತ್ತು ಆತ್ಮಸ್ಥೈರ್ಯವನ್ನು ಹೆಚ್ಚಿಸುವುದು.

**3. ಸುಸ್ಥಿರ ಅಭಿವೃದ್ಧಿಯ ನಿರೀಕ್ಷಿತ ಫಲಗಳು**

- ಗುಣಮಟ್ಟದ ಶಿಕ್ಷಣವನ್ನು ಮಗುವಿಗೆ ನೀಡುವಲ್ಲಿ ಪ್ರಭಾವಬೀರುವ ಅಂಶಗಳನ್ನು ಗುರುತಿಸಿಕೊಂಡು ಕಾರ್ಯೋನ್ಮುಖರಾಗುವರು.
- ಪರಿಸರದಲ್ಲಿ ಪ್ರತಿ ಜೀವಿಯ ಪಾಲುದಾರಿಕೆಯನ್ನು ಅರಿತು ಜೀವ ಸಂಕುಲನದ ರಕ್ಷಣಾ ಕ್ರಮಗಳನ್ನು ಅರಿತುಕೊಳ್ಳುವುರು.
- ಸಾಮಾಜಿಕ ನ್ಯಾಯ ಮತ್ತು ಸರ್ವರಿಗೂ ಸಮಬಾಳು ಅರಿತುಕೊಳ್ಳುವರು.

- ಬಡತನವನ್ನು ಕಡಿಮೆ ಮಾಡಿ, ಹೆಚ್ಚು ಉದ್ಯೋಗ ಸೃಷ್ಟಿ ಹಾಗೂ ನಿರಂತರ ಆರ್ಥಿಕ ಬೆಳವಣಿಗೆಯನ್ನು ಸಾಧಿಸುವುದು.

- ಪ್ರಕೃತಿ ಸಂಪತ್ತುಗಳ ಸಂರಕ್ಷಣೆ, ಪರಿಸರದ ಕಾನೂನುಗಳ ಅನುಸರಣೆ ಹಾಗೂ ಹಸಿರು ತಂತ್ರಜ್ಞಾನಗಳ ಬಳಕೆ.
- ಸ್ಥಳೀಯ ಸಂಸ್ಕೃತಿಗಳ ಸಂರಕ್ಷಣೆ ಮತ್ತು ಉತ್ತೇಜನ.

**ಆಕರಗಳು.**

- ಮಾನವ ಅಭಿವೃದ್ದಿ ಸೂಚ್ಯಾಂಕ ವರದಿ.
- ರಾಜ್ಯವಾರು ಸುಸ್ಥಿರ ಅಭಿವೃದ್ದಿ ಗುರಿಗಳು ಆನ್–ಲೈನ್ ಅಂತರ್ಜಾಲ ಮಾಹಿತಿ.
- ಸುಸ್ಥಿರ ಅಭಿವೃದ್ದಿಗಳ ವರದಿ ಅಂತರ್ಜಾಲ ಮಾಹಿತಿ.

# ಅಧ್ಯಾಯ-2

## ನಿಸರ್ಗ ಮತ್ತು ಮಾನವ

ನಿಸರ್ಗದ ಸತ್ಯವನ್ನು ಅರಿಯಲು ಪ್ರಯೋಗಪಥದಲ್ಲಿ ಸಾಗಿದ ಮಾನವ ಹೊಸ, ಹೊಸ ತಂತ್ರಗಳನ್ನು ಆವಿಷ್ಕರಿಸಿ ಆರೋಗ್ಯ ಮತ್ತು ಸಾಮಾಜಿಕ ಕ್ರಾಂತಿಗೆ ಕಾರಣನಾದ. ಪರಿಣಾಮ ಮಾನವನ ಅತಿ ಚಟುವಟಿಕೆಗಳು ಪರಿಸರದ ಮೇಲೆ ವ್ಯತಿರಿಕ್ತ ಪರಿಣಾಮಗಳು ಉಂಟಾದವು. ಪರಿಸರದ ಸಮಸ್ಯೆಗಳು ಪರಿಣಾಮದ ಫಲವಾದವು. ಈ ಬದಲಾವಣೆ ಅನೇಕ ವರ್ಷಗಳಿಂದ ಬಂದಿದೆ. ಪರಿಸರವಿಲ್ಲದೆ ಮಾನವನಿಲ್ಲ. ಮಾನವನ ಮತ್ತು ಉಳಿದ ಜೀವಿಗಳಿಗೂ ಭೂಮಿಯೇ ಆವಾಸ ಸ್ಥಾನ. ಪರಿಸರವನ್ನು ಅರ್ಥೈಸಿಕೊಳ್ಳುವ ಅನೇಕ ಆಯಾಮಗಳಿಂದ ಇದನ್ನು ಆಳಕ್ಕಿಳಿದು ತಿಳಿಯಬೇಕಾಗಿದೆ.

**ಮಾನವ ಮತ್ತು ಪರಿಸರದ ಸಂಬಂಧ**

1. ಪರಿಸರ ಮಾನವನ ಜೀವನದ ಅನೇಕ ಕ್ಷೇತ್ರಗಳ ಮೇಲೆ ಪ್ರಭಾವ ಬೀರುತ್ತದೆ. ಉದಾಹರಣೆಗೆ ಉದ್ಯೋಗಗಳ ಆಯ್ಕೆ, ಆಹಾರ ಪದ್ಧತಿ, ಉಡುಪು, ಆರೋಗ್ಯ ಇತ್ಯಾದಿ.
2. ಪ್ರಾಕೃತಿಕ ವಿಕೋಪಗಳು
3. ಮಾನವನಿಗೆ ಪರಿಸರದೊಂದಿಗೆ ಹೊಂದಾಣಿಕೆ ಅಗತ್ಯತೆ.
4. ವಿಶ್ವ ಪರಿಸರವನ್ನು ಸ್ಥಳೀಯ ಅಂಶಗಳೊಂದಿಗೆ ಸಮೀಕರಿಸಿ ಅರ್ಥೈಸಿಕೊಳ್ಳುವುದು.

**ಚಟುವಟಿಕೆ:** ನಿಮ್ಮೂರಿನ ಸುತ್ತಮುತ್ತ ನಿಧಾನಕ್ಕೆ ಯಾವುದಾದರೂ ಗಿಡಗಳ, ಪಕ್ಷಿಗಳ, ಪ್ರಾಣಿಗಳ ಸಂಖ್ಯೆ ಇಳಿಮುಖವಾಗುತ್ತಿದೆಯೇ ? ಹಿರಿಯರೊಂದಿಗೆ ಚರ್ಚಿಸಿ.

**ಚರ್ಚಿಸಿ:** ಮೊಬೈಲ್‌ಗಳ ಬಳಕೆ ಹೆಚ್ಚಾದಂತೆ ಗುಬ್ಬಿಗಳ ಸಂಖ್ಯೆ ಇಳಿಮುಖವಾಗುತ್ತಿದೆಯೇ ?

ಸುಸ್ಥಿರ ಅಭಿವೃದ್ಧಿಗಾಗಿ ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಕಾಪಾಡಿಕೊಳ್ಳುವುದರೊಂದಿಗೆ ಪರಿಸರ ಮತ್ತು ನೈಸರ್ಗಿಕ ಸಂಪನ್ಮೂಲಗಳನ್ನು ಸಂರಕ್ಷಿಸುವಂತಹ ಅಂಶಗಳನ್ನು ಅನುಸರಿಸುವ ಅಗತ್ಯವಿದೆ. ಸುಸ್ಥಿರ ಅಭಿವೃದ್ಧಿಯು ಆರ್ಥಿಕ, ಪರಿಸರ ಮತ್ತು ಸಾಮಾಜಿಕ ಅಗತ್ಯತೆಗಳ ನಡುವೆ ಸಮತೋಲನವನ್ನು ಸೃಷ್ಟಿಸುತ್ತದೆ.

**ಸುಸ್ಥಿರ ಅಭಿವೃದ್ಧಿ ಏಕೆ ಬೇಕು?**

ಕಳೆದ ಎರಡು ಮೂರು ದಶಕಗಳಿಂದ ಆರ್ಥಿಕ ಬೆಳವಣಿಗೆ ದೃಷ್ಟಿಯಿಂದ ಪರಿಸರದ ಆರೋಗ್ಯಕ್ಕೆ ಹಿನ್ನಡೆ ಉಂಟಾಗಿದ್ದನ್ನು ಕಾಣುತ್ತಿದ್ದೇವೆ. ಪರಿಣಾಮವಾಗಿ ಹಸಿರು ಮನೆ ಅನಿಲಗಳಿಂದಾಗಿ ಗಾಳಿಯ ಗುಣಮಟ್ಟದಲ್ಲಿ ಕುಸಿತ ಮತ್ತು ಹವಾಮಾನ ಬದಲಾವಣೆಯಂತಹ ಪರಿಣಾಮ ಬೀರಿದೆ. ಈ ಎಲ್ಲಾ ಅಂಶಗಳು ಸುಸ್ಥಿರ ಅಭಿವೃದ್ಧಿ ಅಗತ್ಯಕ್ಕೆ ಕಾರಣವಾಯಿತು. ಪರಿಶೀಲಿಸದೆ ಬಿಟ್ಟರೆ ಅದು ಪರಿಸರಕ್ಕೆ ಬದಲಾಯಿಸಲಾಗದ ಹಾನಿಯನ್ನುಂಟು ಮಾಡಬಹುದು.

**ಸುಸ್ಥಿರ ಅಭಿವೃದ್ಧಿ ಪ್ರಾಮುಖ್ಯತೆ.**

ಸುಸ್ಥಿರ ಅಭಿವೃದ್ಧಿ ಪ್ರಾಮುಖ್ಯತೆಯನ್ನು ಹೀಗೆ ಪಟ್ಟಿ ಮಾಡಬಹುದು.

1. ಲಭ್ಯವಿರುವ ಸಂಪನ್ಮೂಲಗಳನ್ನು ವಿವೇಚನೆಯಿಂದ ಬಳಸುವುದು ಮತ್ತು ಪರಿಸರದ ಸಮತೋಲನವನ್ನು ಕಾಪಾಡಿಕೊಳ್ಳಲು ಕೆಲಸ ಮಾಡುವುದು.
2. ಪರಿಸರದ ಅವನತಿಯನ್ನು ತಡೆಗಟ್ಟಲು ಮತ್ತು ಪರಿಸರವನ್ನು ರಕ್ಷಿಸಲು ಒತ್ತು ನೀಡುವುದು.
3. ಸಂಪನ್ಮೂಲಗಳ ಅತಿಯಾದ ಶೋಷಣೆಯನ್ನು ತಡೆಗಟ್ಟುವುದು.

**ಪರಿಸರವನ್ನು ಉಳಿಸಲು ಕ್ರಮಗಳು.**

ಜಾಗತಿಕ ಪರಿಸರದ ಬಿಕಟ್ಟನ್ನು ಎದುರಿಸಲು ಸಂಘಟಿತ ಪ್ರಯತ್ನಗಳ ಅಗತ್ಯವಿದೆ. ಸುಸ್ಥಿರ ಅಭಿವೃದ್ಧಿಯ ಪರಿಕಲ್ಪನೆ ಆ ಮೂಲಕ ಕಾರ್ಯರೂಪಕ್ಕೆ ಬರುತ್ತದೆ. ಈಗಾಗಲೇ ನಡೆಯುತ್ತಿರುವ ಬಿಕ್ಕಟ್ಟನ್ನು ನಿಯಂತ್ರಿಸಲು ಕೈಗೊಳ್ಳಬಹುದಾದ ಕೆಲವು ಕ್ರಮಗಳು.

- **ಮಾಲಿನ್ಯ ನಿಯಂತ್ರಣ :** ಮಾಲಿನ್ಯ ನಿಯಂತ್ರಣ ಮಂಡಳಿಗಳನ್ನು ಸ್ಥಾಪಿಸಬಹುದು ಅಥವಾ ಮಾಲಿನ್ಯವನ್ನು ಕಡಿಮೆ ಮಟ್ಟದಲ್ಲಿ ಇರಿಸಲು ನಿಯಂತ್ರಕ ಮಾನದಂಡಗಳನ್ನು ಜಾರಿ ಗೊಳಿಸಬೇಕು.
- **ಅರಣ್ಯ ಸಂರಕ್ಷಣೆ :** ಹೆಚ್ಚಿದ ಕೈಗಾರಿಕೀಕರಣವು ನಾಶಕ್ಕೆ ನೇರವಾಗಿ ಕಾರಣವಾಗಿದೆ. ಅರಣ್ಯೀಕರಣ ಕ್ರಮಗಳನ್ನು ತೆಗೆದುಕೊಳ್ಳಬೇಕು. ಜೊತೆಗೆ ಅರಣ್ಯ ಸಂರಕ್ಷಣೆ ನಿಯಮಗಳನ್ನು ಗಂಭೀರವಾಗಿ ಅನುಷ್ಠಾನಗೊಳಿಸಬೇಕು.
- **ಸಾಮಾಜಿಕ ಜಾಗೃತಿ :** ಪರಿಸ್ಥಿತಿ ಗಂಭೀರತೆ ಬಗ್ಗೆ ಜನರಿಗೆಅರಿವು ಮೂಡಿಸುವವರೆಗೂ ಪರಿಸರ ನಾಶದ ಸಮಸ್ಯೆಯನ್ನು ನಿಭಾಯಿಸಲು ಸಾಧ್ಯವಿಲ್ಲ. ಅಭಿಯಾನಗಳು ಮತ್ತು ಚಳುವಳಿಗಳ ಮೂಲಕ ಜಾಗೃತಿ ಮೂಡಿಸುವುದು, ನಡೆಯುತ್ತಿರುವ ಪರಿಸರ ಬಿಕಟ್ಟಿನ ಸಮಸ್ಯೆಯನ್ನು ತಪ್ಪಿಸಲು ಸಹಾಯ ಮಾಡುತ್ತದೆ.
- **ತ್ಯಾಜ್ಯ ನಿರ್ವಹಣೆ :** ಘನತ್ಯಾಜ್ಯ ನಿರ್ವಹಣೆಯನ್ನು ನಗರ ಪ್ರದೇಶಗಳಲ್ಲಿ ಎಚ್ಚರಿಕೆಯಿಂದ ನಿರ್ವಹಿಸಬೇಕು. ಗ್ರಾಮೀಣ ತ್ಯಾಜ್ಯವನ್ನು ಗೊಬ್ಬರವಾಗಿ ಪರಿವರ್ತಿಸಬೇಕು.
- **ನೀರಿನ ನಿರ್ವಹಣೆ :** ಮಳೆನೀರು ಕೊಯ್ಲು ಮತ್ತು ನೀರಿನ ಸಂರಕ್ಷಣೆಯು ನೀರಿನ ಕೊರತೆಯನ್ನು ದೀರ್ಘಾವಧಿಯ ಪ್ರಬಲ ಸಮಸ್ಯೆಗೆ ಸಹಾಯಮಾಡುತ್ತದೆ.
- **ನೀತಿ ಕಾರ್ಯಕ್ರಮಗಳ ಅನುಷ್ಠಾನ:** ಪರಿಸರ ಕೇಂದ್ರದ ಕಾಯ್ದೆಗಳು ಮತ್ತು ನೀತಿಗಳನ್ನು ಜಾರಿಗೊಳಿಸುವುದು ಸಾಲದು. ಅವುಗಳ ಪರಿಣಾಮಕಾರಿ ಅನುಷ್ಠಾನ ಮತ್ತು ಎಚ್ಚರಿಕೆ ಅವಲೋಕನವು ಪರಿಸರದ ಸಂರಕ್ಷಣೆಯ ಪ್ರಯತ್ನಗಳಿಗೆ ಸಹಕಾರಿ.

**ಚಟುವಟಿಕೆಗಳು/ ಯೋಜನೆಗಳು.** (ಶಾಲೆಯಲ್ಲಿ/ಗ್ರಾಮದಲ್ಲಿ)

1. ಶಾಲೆಯ ಆವರಣದಲ್ಲಿರುವ ಗಿಡಮರಗಳು ಪ್ರತಿ ವರ್ಷ ಹೂ ಬಿಡುವ ತಿಂಗಳು–ದಿನಾಂಕ

| ಗಿಡದ ಹೆಸರು | ಹೂ ಬಿಡುವ ತಿಂಗಳು ದಿನಾಂಕ | ವರ್ಷ | ವೀಕ್ಷಣೆ |
|---|---|---|---|
| | | | |

2. ಗ್ರಾಮನಕ್ಷೆಯನ್ನು ಅವಲೋಕಿಸಿ ಈಗಿನ ಕೊಳವೆ ಬಾವಿಗಳ ಸಂಖ್ಯೆ ಮತ್ತು ಹತ್ತು ವರ್ಷಗಳ ಹಿಂದೆ ಇದ್ದ ಕೊಳವೆ ಬಾವಿಗಳ ಸಂಖ್ಯೆಯಲ್ಲಿ ಏನಾದರೂ ವ್ಯತ್ಯಾಸವಿದೆಯೇ. ? ಚರ್ಚಿಸಿ ತೀರ್ಮಾನಕ್ಕೆ ಬನ್ನಿ.
3. ಶಾಲೆಯಲ್ಲಿ ದಿನವೊಂದಕ್ಕೆ ಬಳಕೆಯಾಗುತ್ತಿರುವ ನೀರಿನ ಪ್ರಮಾಣ (ಲೀಟರ್‌ಗಳಲ್ಲಿ) ಎಷ್ಟು? ನೀರಿನ ಟ್ಯಾಂಕ್‌ನ್ನು ನೀರಿನ ಬ್ಯಾಂಕ್ ಆಗಿಸಬಹುದೇ?
4. ಶಾಲಾ ಆವರಣದಲ್ಲಿ ಪಕ್ಷಿಗಳು ಗೂಡು ಕಟ್ಟಲು ಏನಾದರೂ ವ್ಯವಸ್ಥೆ ಮಾಡಬಹುದೆ ?
5. ಮನೆಯಲ್ಲಿ ಹಾಲಿನ ಪ್ಲಾಸ್ಟಿಕ್ ಪ್ಯಾಕೇಟ್‌ನ್ನು ಕತ್ತರಿಸಿದಾಗ ಉಂಟಾಗುವ ತುಣುಕುಗಳು ಮರುಬಳಕೆಗೆ ಒಳಪಡುತ್ತದೆಯೇ ? ಹೀಗೆ ಉಂಟಾಗುವ ತುಣುಕುಗಳು ಪರಿಸರಕ್ಕೆ ಸೇರ್ಪಡೆಗೊಂಡು ಆಗುವ ಪರಿಣಾಮವನ್ನು ಚರ್ಚಿಸಿ.

**ಪರಿಸರ ಜಾಗತೀಕರಣ**


ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಯವಾಗಿ ಸಂಘಟಿತವಾದ ಅಭ್ಯಾಸಗಳು ಮತ್ತು ನಿಬಂಧನೆಗಳನ್ನು ಅಂತಾರಾಷ್ಟ್ರೀಯ ಒಪ್ಪಂದಗಳ ರೂಪದಲ್ಲಿ ಸೂಚಿಸುತ್ತದೆ.

ಸ್ಟೀವನ್ ಇಯರ್ಲಿ ಅವರು "ಪರಿಸರ ಕಾಳಜಿಯ ಜಾಗತೀಕರಣ" ಎಂದು ಉಲ್ಲೇಖಿಸುತ್ತಾರೆ.

ಪರಿಸರ ಜಾಗತೀಕರಣಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸುವ ಸಂಸ್ಥೆಗಳು

- ಅಂತಾರಾಷ್ಟ್ರೀಯ ಹವಾಮಾನ ಬದಲಾವಣೆ ಸಂಸ್ಥೆಗಳು
- ಅಂತಾರಾಷ್ಟ್ರೀಯ ಅರಣ್ಯ ಸಂಸ್ಥೆಗಳು
- ಅಂತರ ಸರ್ಕಾರಿ ಪರಿಸರ ಸಂಸ್ಥೆಗಳು
- ಪರಿಸರ ಮತ್ತು ಹವಾಮಾನ ಯುವ ಸಂಸ್ಥೆಗಳು.
- ಭೂಮಿಯ ಸ್ನೇಹಿತರು
- ಗ್ರೀನ್ ಪೀಸ್
- ಇಂಟರ್ನ್ಯಾಷನಲ್ ಯೂನಿಯನ್ ಫಾರ್ ಕನ್ಸರ್ವೇಷನ್ ಆಫ್ ನೇಚರ್
- ವರ್ಲ್ಡ್ ವೈಡ್ ಫಂಡ್ ಫಾರ್ ನೇಚರ್
- ಸೀ ಶೆಫರ್ಡ್ ಕನ್ಸರ್ವೇಷನ್ ಸೊಸೈಟಿ

**ಮಾಹಿತಿ ಸಂಗ್ರಹಿಸಿ:** ಭಾರತದಲ್ಲಿನ ಪರಿಸರ ಜಾಗತೀಕರಣ ಪೂರಕ ಸಂಸ್ಥೆಗಳು ಯಾವುವು ?




ಐ.ಯು.ಸಿ.ಎನ್ ಕೆಂಪು ದಸ್ತಾವೇಜು ಪಟ್ಟಿ ಪ್ರಕಾರ ಅಳಿವಿ ನಂಚಿನಲ್ಲಿರುವ ಕೆಲವು ಪ್ರಾಣಿವರ್ಗ (ಶೇಕಡಾ ಪ್ರಮಾಣದಲ್ಲಿ)

| | |
|---|---|
| ಉಭಯ ವಾಸಿಗಳು | 41% |
| ಸ್ತನಿಗಳು | 26% |
| ಪಕ್ಷಿಗಳು | 12% |
| ಸರಿಸೃಪಗಳು | 21% |
| ಶಾರ್ಕ ಮತ್ತು ರೇ ಮೀನುಗಳು | 37% |

**ತಿಳಿಯೋಣ.**

- ಕ್ರಿಸ್ತಶಕ 1900 ರಿಂದ 64% ಕ್ಕಿಂತ ಹೆಚ್ಚು ಜೌಗು ಪ್ರದೇಶಗಳು ಒಳಚರಂಡಿ ಮತ್ತು ಇತರ ಕಾರಣಗಳಿಂದ ಅಳಿದು ಹೋಗಿವೆ.
- ನೀರು, ಭೂಮಿ ಮತ್ತು ಆಹಾರದ ಬೇಡಿಕೆ ಹೆಚ್ಚಾದಂತೆ, ಹವಾಮಾನ ಬದಲಾವಣೆಯು ತೀವ್ರಗೊಳ್ಳುತ್ತಿದ್ದಂತೆ ಜೌಗು ಪ್ರದೇಶಗಳು ಒತ್ತಡಕ್ಕೆ ಒಳಗಾಗುತ್ತಿವೆ.
- ಜೌಗು ಪ್ರದೇಶಗಳು ಯಾವುವು ? : ನೀರು ಭೂಮಿಯನ್ನು ಸಂಧಿಸುವ ಸ್ಥಳದಲ್ಲಿ ಜೌಗು ಪ್ರದೇಶಗಳು ಉಂಟಾಗುತ್ತವೆ. ಪೀಟ್ ಲ್ಯಾಂಡ್ ಗಳು ಮತ್ತು ಜೌಗು ಪ್ರದೇಶಗಳು ಒಂದರ್ಥದಲ್ಲಿ ಅರ್ಧ ಭೂಮಿಗಳು.
- ವಿಶ್ವ ಜೌಗು ಪ್ರದೇಶ ದಿನವನ್ನು ಪ್ರತಿವರ್ಷ ಫೆಬ್ರುವರಿ 2ರಂದು ಆಚರಿಸಲಾಗುತ್ತದೆ.

**ಗೊತ್ತಿರಲಿ.**

**ಜಗತ್ತಿನಲ್ಲಿ –**

- ಪ್ರತಿದಿನ 27 ಸಾವಿರ ಗಿಡಗಳನ್ನು ಕಡೆಯಲಾಗುತ್ತದೆ
- ಬಳಕೆಗೆ ಲಭ್ಯ ನೀರಿನ ಪ್ರಮಾಣದಲ್ಲಿ 1% ಮನುಷ್ಯ ಬಳಸುತ್ತಾನೆ.
- 78 ಸಮುದ್ರ ಪ್ರದೇಶಗಳು ಪ್ಲಾಸ್ಟಿಕ್ ಸೇರ್ಪಡೆಯಿಂದಾಗಿ ಗಂಭೀರ ಪರಿಸ್ಥಿತಿಯನ್ನು ಎದುರಿಸುತ್ತಿವೆ.
- ಶೈವಲಗಳು ಪರಿಸರ ಸುಸ್ಥಿರವಾಗಿಡಲು ಪ್ರಮುಖ ಪಾತ್ರ ನಿರ್ವಹಿಸುತ್ತವೆ.

**ಶಾಲಾ ಹಂತದ ಸುಸ್ಥಿರ ಅಭಿವೃದ್ಧಿ ಅನುಷ್ಠಾನದ ಸಾಧ್ಯತೆಗಳು ಮತ್ತು ಸವಾಲುಗಳು.**

1. ಗುಣಮಟ್ಟದ ಶಾಲಾ ಕಟ್ಟಡದ ಕೊರತೆ
2. ಪಿಠೋಪಕರಣಗಳ ಕೊರತೆ
3. ಸುವ್ಯವಸ್ಥಿತ ಕುಡಿಯುವ ನೀರು, ಶೌಚಾಲಯಗಳ ಕೊರತೆ. ನಿರ್ವಹಣಾ ಮತ್ತು ಸ್ವಚ್ಛತೆ ಜವಾಬ್ದಾರಿ ಕೊರತೆ.
4. ಶಿಕ್ಷಕರ ಕೊರತೆ. ವಿದ್ಯಾರ್ಥಿ ಶಿಕ್ಷಕರ ಅನುಪಾತಕ್ಕೆ ಅನುಗುಣವಾಗಿ ಇಲ್ಲದಿರುವುದು.
5. ಪ್ರತಿ ಬಾರಿ ಹೊಸ ಹೊಸ ಕಾರ್ಯಕ್ರಮಗಳನ್ನು ತರುವುದು.
6. ಬಂದ ಯೋಜನೆಗಳ ನಿರಂತರತೆ ಮತ್ತು ಮೌಲ್ಯಮಾಪನ ಮಾಡುವ ಪೂರ್ವದಲ್ಲಿ ತೆಗೆದುಹಾಕಿ ಹೊಸದೊಂದನ್ನು ತರುವುದು.
7. ನಿರ್ದಿಷ್ಟಪಡಿಸಿದ ಕಾರ್ಯಕ್ಕೆ ನೇಮಿಸಿದ ಸಿಬ್ಬಂದಿಯನ್ನು ಅನ್ಯ ಕಾರ್ಯಕ್ಕೆ ಬಳಸುವುದು.
8. ಶಾಲೆಗಳಿಗೆ ಕೊಡಮಾಡುವ ಸೌಲಭ್ಯಗಳು ನಿಗದಿತ ಸಮಯಕ್ಕೆ ಶಾಲೆಗಳಿಗೆ ತಲುಪದೇ ಇರುವುದು.
9. ಹೊಸ ಯೋಜನೆಗಳನ್ನು ಅನುಷ್ಠಾನಗೊಳಿಸುವಾಗ ಅರ್ಹ ಸಿಬ್ಬಂದಿ ನೇಮಕಗೊಳ್ಳದೆ ಇರುವುದು ಇತ್ಯಾದಿ.

**ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ಅನುಷ್ಠಾನಗೊಳಿಸಲು ಇರುವ ಅವಕಾಶಗಳು.**

1. ಇದ್ದ ಸಂಪನ್ಮೂಲಗಳ ಮಾಹಿತಿಯನ್ನು ಪಟ್ಟಿ ಮಾಡಿ ಅವುಗಳ ಉಪಯೋಗ ಮಾಡುವುದು. ಭೌತಿಕ ಲಭ್ಯತೆ ಸಾಮರ್ಥ್ಯಗಳನ್ನು ಗುರುತಿಸುವುದು ಹಾಗೂ ಬಳಕೆ ಮಾಡುವ ಯೋಜನೆ ತಯಾರಿಸುವುದು.
2. ಶಾಲೆಯಲ್ಲಿ ಸಿ.ಡಬ್ಲ್ಯೂ.ಎಸ್.ಎನ್ ಮಕ್ಕಳ ಪಟ್ಟಿ ಇಡುವುದು. ಸರ್ಕಾರದ ಸೌಲಭ್ಯಗಳ ಮಾಹಿತಿ ನೀಡುವುದು.
3. ಪ್ರತಿ ಮಗುವಿನ ಹಾಜರಾತಿ ಹೆಚ್ಚಿಸಲು ಯೋಜನೆ ತಯಾರಿಸಿ ಪರಿಣಾಮಕಾರಿಯಾಗಿ ಜಾರಿಗೊಳಿಸುವುದು.
4. ಶಾಲೆಗೆ ಬೇಕಾದ ಅವಶ್ಯಕತೆ ಸಂಪನ್ಮೂಲಗಳ ಪಟ್ಟಿ ಇಡುವುದು.

5. ಶಾಲಾ ಸಿಬ್ಬಂದಿಯ ನಡುವೆ ಸುಮಧುರ ಬಾಂಧವ್ಯ ಹಾಗೂ ಸಂಪರ್ಕದ ಯೋಜನೆ ಕಾರ್ಯಹಂಚಿಕೆಯನ್ನು ಆಸಕ್ತಿಗನುಗುಣವಾಗಿ ನೀಡುವುದು.
6. ಭಾಗಿದಾರರ ಕಡೆಯಿಂದ ಪಡೆಯಬಹುದಾದ ಸಹಕಾರ ಮತ್ತು ಸೌಲಭ್ಯಗಳ ಪಟ್ಟಿ ಇಡುವುದು.
7. ಸಿಬ್ಬಂದಿಯ ಕೊರತೆ, ಸಾಮರ್ಥ್ಯಗಳ ಅವಶ್ಯಕತೆಗನುಗುಣವಾಗಿ ಯೋಜನೆ ತಯಾರಿಸಿ ನೀಡುವುದು.
8. ಸಿಬ್ಬಂದಿಯ ಕಾರ್ಯದ ಮೇಲ್ವಿಚಾರಣೆ, ಸಲಹೆ, ಪ್ರೋತ್ಸಾಹ ಮಾರ್ಗದರ್ಶನ ನೀಡುವುದು.
9. ಪ್ರತಿ ಮಗುವಿನ ಸಾಮರ್ಥ್ಯ ಕೊರತೆ ಅವಶ್ಯಕತೆ ಇವುಗಳ ಬಗ್ಗೆ ಸ್ಥೂಲ ಮಾಹಿತಿ ಹೊಂದಿರುವುದು
10. ಭಾಗಿದಾರರ ಸಭೆಯು ಕೇವಲ ಬೇಡಿಕೆಯಾಗದೆ ಅವರ ಜವಾಬ್ದಾರಿ ಹೊಣೆಗಾರಿಕೆ ಹಾಗೂ ಸಮರ್ಪಕ ಸಂದರ್ಭ ಮತ್ತು ಅದರ ಮಹತ್ವ ತಿಳಿಸುವಂತಿರುವುದು.

ಈ ವಿಡಿಯೋಗಳನ್ನು ನೋಡಿ

1) ಲಡಾಖ್ – ಪರಿಸರ ಹೋರಾಟ

https://youtube.com/@sonamwangchuk66?si=_yffpJyotFJYoxFe

2) Greta Thunberg
https://youtube.com/@gretathunberg7607?si=j060IwtoFMvamv6

ಆಕರ:

1 ಅಂತರ್ಜಾಲ ಮಾಹಿತಿ

2 I.U.C.N ಜಾಲಕೊಂಡಿ

# ಅಧ್ಯಾಯ–3

## ಸುಸ್ಥಿರ ಅಭಿವೃದ್ಧಿಯ ಗುರಿಗಳು

### 1. ಬಡತನದಿಂದ ಮುಕ್ತಿ;

2030ರಲ್ಲಿಯೋಜಿತ ಜಾಗತಿಕ ಬಡತನದರವು 7%, ಅಂದರೆ 598,394,116 ಜನರಿಗೆ ಸಮನಾಗಿರುತ್ತದೆ. ಈ UN ಗುರಿಯು ಎಲ್ಲಾ ರೀತಿಯ ಬಡತನವನ್ನು ಕೊನೆಗೊಳಿಸುವ ಗುರಿಯನ್ನು ಹೊಂದಿದೆ. SDG–1 ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದರೂ ಅವುಗಳಿಗೆ ಸೀಮಿತವಾಗಿಲ್ಲ:

1.1 2030ರ ಹೊತ್ತಿಗೆ, ಪ್ರತಿ ದಿನ 1.25 ಡಾಲರ್ ಗಳಿಸುತ್ತಿರುವ ಎಲ್ಲಾ ಜನರನ್ನು ಬಡತನದಿಂದ ಮುಕ್ತಗೊಳಿಸುವುದು.


| ರಾಷ್ಟ್ರೀಯ ಸೂಚ್ಯಂಕ ಸಂ. | ರಾಜ್ಯ ಸೂಚ್ಯಂಕ ಸಂ. | ಸೂಚ್ಯಂಕ | ಬೇಸ್ಲೈನ್ ಸಮೀಕ್ಷೆಯ ವರ್ಷ | ರಾಜ್ಯ ಬೇಸ್ಲೈನ್ ಸಮೀಕ್ಷೆಯ ಮೌಲ್ಯ | 2022 | 2030 |
|---|---|---|---|---|---|---|
| 1.1.1 | | ರಾಷ್ಟ್ರೀಯ ಬಡತನ ಸರಾಸರಿಗಿಂತ ಕಡಿಮೆ ಸ್ಥಿತಿಯಲ್ಲಿ ಬದುಕುತ್ತಿರುವವರ ಪ್ರಮಾಣ | 2011–12 | 20.91 | 10.46 | 0 |
| 1.1.2 | | ಬಡತನದ ಅಂತರ ಅನುಪಾತ | 2011–12 | 3.26 | 1.6 | 0 |
| | 1.1.2.1 | ಹೆಚ್ ಡಿ ಐ | 2015 | 0.6176 | 0.81 | 1 |
| | 1.1.2.2 | ತಲಾವಾರು ಎನ್‌ಡಿಡಿಪಿ (ರೂ) | 2017–18 | 1,81,788 | 296281 | 787645 |




- ತೀವ್ರ ಬಡತನವನ್ನು ಕೊನೆಗೊಳಿಸುವುದು (ದಿನಕ್ಕೆ ರೂ.104.86 ($1.25)ಕ್ಕಿಂತ ಕಡಿಮೆ ಹಣದ ಮೇಲೆ ಜೀವನ ನಡೆಸುವವರು).
- ಬಡತನದಲ್ಲಿ ವಾಸಿಸುವ ಅರ್ಧದಷ್ಟು ಜನಸಂಖ್ಯೆಯನ್ನು ಬಡತನ ರೇಖೆಯಿಂದ ಮೇಲೆ ತರುವುದು.
- ರಕ್ಷಣಾ ವ್ಯವಸ್ಥೆಗಳನ್ನು ಜಾರಿಗೊಳಿಸುವುದು.
- ಆರ್ಥಿಕ ಸಂಪನ್ಮೂಲಗಳು ಮತ್ತು ಮೂಲಭೂತ ಸೇವೆಗಳಿಗೆ ಸಮಾನ ಹಕ್ಕುಗಳನ್ನು ಖಚಿತಪಡಿಸುವುದು.
- ಬಡತನದಲ್ಲಿರುವವರ ಬದುಕಿನ ಮಟ್ಟ ಸುಧಾರಿಸುವುದು.
- ಅಭಿವೃದ್ಧಿಶೀಲ ದೇಶಗಳಲ್ಲಿ ಸಂಪನ್ಮೂಲಗಳನ್ನು ಚಲನೆಗೊಳಿಸುವುದು ಮತ್ತು 2030ರೊಳಗೆ ಬಡವರ ಪರವಾಗಿರುವ ಮತ್ತು ಲಿಂಗ ಸಮಾನತೆಯ ನೀತಿ ಚೌಕಟ್ಟುಗಳನ್ನು ಸೃಷ್ಟಿಸುವುದು.

COVID–19 ಸಂಘರ್ಷವು ಬಡತನ ಕಡಿಮೆಗೊಳಿಸುವ ಪ್ರಗತಿಯನ್ನು ಹಿಮ್ಮೆಟ್ಟಿಸಿದೆ.

ಸುಸ್ಥಿರ ಅಭಿವೃದ್ಧಿ ಗುರಿ 1ರ ಸೂಚ್ಯಂಕಗಳಿಗೆ ಸಂಬಂಧಿಸಿದಂತೆ ಆಗಿರುವ ಸಾಧನೆ




ಮೂಲ: ನೀತಿ ಆಯೋಗ, 2018

ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಬಹು ಆಯಾಮದ ಬಡತನ ಸೂಚ್ಯಂಕ (ಎಂಪಿಐ) 2015–16

| ಜಿಲ್ಲೆ | ಹೆಚ್‌ಸಿಆರ್ | ಸರಾಸರಿ ತೀವ್ರತೆ | ಎಂಪಿಐ | ಎಂಪಿಐಗೆ ವಿವಿಧ ಆಯಮಾಗಳ ಸೇರ್ಪಡೆ | | | ರಾಜ್ಯದೊಳಗಿನ ಸ್ಥಾನ | ಭಾರತದ 640 ಜಿಲ್ಲೆಗಳಲ್ಲಿನ ಸ್ಥಾನ |
|---|---|---|---|---|---|---|---|---|
| | | | | ಶಿಕ್ಷಣ | ಆರೋಗ್ಯ | ಜೀವನ ಮಟ್ಟ | | |
| ಬೆಳಗಾವಿ | 16.6 | 37.8 | 6.3 | 18.1 | 35.0 | 46.9 | 14 | 210 |
| ಬಾಗಲಕೋಟೆ | 33.3 | 39.2 | 13.0 | 16.5 | 38.3 | 45.2 | 23 | 361 |
| ವಿಜಯಪುರ | 34.3 | 39.4 | 13.5 | 21.1 | 28.8 | 50.1 | 26 | 374 |
| ಬೀದರ | 29.3 | 38.7 | 11.4 | 14.9 | 36.2 | 49.0 | 22 | 320 |
| ರಾಯಚೂರ | 40.8 | 43.4 | 17.7 | 26.8 | 27.4 | 45.8 | 29 | 468 |
| ಕೊಪ್ಪಳ | 34.3 | 39.9 | 13.7 | 19.5 | 35.5 | 45.1 | 27 | 378 |
| ಗದಗ | 33.1 | 39.7 | 13.1 | 19.6 | 31.4 | 48.9 | 25 | 363 |
| ಧಾರವಾಡ | 16.1 | 38.0 | 6.1 | 15.0 | 38.2 | 46.8 | 13 | 208 |
| ಉತ್ತರ ಕನ್ನಡ | 18.0 | 39.0 | 7.0 | 15.6 | 37.7 | 46.7 | 15 | 229 |
| ಹಾವೇರಿ | 23.7 | 39.0 | 9.2 | 17.7 | 34.2 | 48.1 | 19 | 268 |
| ಬಳ್ಳಾರಿ | 31.0 | 42.4 | 13.1 | 25.4 | 32.7 | 41.9 | 24 | 362 |
| ಚಿತ್ರದುರ್ಗ | 24.0 | 39.6 | 9.5 | 16.4 | 34.0 | 49.6 | 20 | 276 |
| ದಾವಣಗೆರೆ | 21.4 | 38.1 | 8.1 | 21.2 | 35.1 | 43.6 | 16 | 248 |
| ಶಿವಮೊಗ್ಗ | 13.6 | 39.7 | 5.4 | 17.2 | 36.1 | 46.7 | 9 | 180 |
| ಉಡುಪಿ | 14.1 | 38.7 | 5.4 | 18.4 | 41.1 | 40.5 | 10 | 181 |
| ಚಿಕ್ಕಮಗಳೂರು | 15.1 | 38.9 | 5.9 | 17.7 | 35.6 | 46.7 | 12 | 199 |
| ತುಮಕೂರು | 21.4 | 39.1 | 8.4 | 19.2 | 35.6 | 45.2 | 18 | 252 |
| ಬೆಂಗಳೂರು | 2.9 | 37.8 | 1.1 | 32.6 | 45.8 | 21.6 | 1 | 28 |
| ಮಂಡ್ಯ | 11.6 | 38.7 | 4.5 | 25.4 | 29.8 | 44.9 | 7 | 145 |
| ಹಾಸನ | 11.7 | 37.5 | 4.4 | 25.1 | 26.5 | 48.3 | 5 | 140 |
| ದಕ್ಷಿಣ ಕನ್ನಡ | 9.0 | 38.7 | 3.5 | 13.2 | 41.0 | 45.8 | 2 | 109 |

## 2. ಹಸಿವು ಮುಕ್ತ:

2030 ರ ಹೊತ್ತಿಗೆ, 2.37 ಶತಕೋಟಿ ಜನರು ಸಾಕಷ್ಟು ಆಹಾರ ಅಥವಾ ಆರೋಗ್ಯಕರ, ಸಮತೋಲಿತ ಆಹಾರವನ್ನು ಪಡೆಯಲು ಸಾಧ್ಯವಾಗುತ್ತಿಲ್ಲ. ಇದರಿಂದಲೇ ಶೂನ್ಯ ಹಸಿವು ಗುರಿ ಅತ್ಯಗತ್ಯವಾಗಿದೆ.

"ಶೂನ್ಯ ಹಸಿವು" ಎಂಬುದು ಹಸಿವನ್ನು ಕೊನೆಗೊಳಿಸುವದು, ಆಹಾರ ಭದ್ರತೆಯನ್ನು ಸಾಧಿಸುವುದು, ಪೋಷಣೆಯನ್ನು ಸುಧಾರಿಸುವುದು ಮತ್ತು ಸುಸ್ಥಿರ ಕೃಷಿಯನ್ನು ಉತ್ತೇಜಿವುದಾಗಿದೆ. ಜಾಗತಿಕ ಸಾಂಕ್ರಾಮಿಕವು ಜಾಗತಿಕ ಹಸಿವನ್ನು ಇನ್ನಷ್ಟು ಹದಗೆಡಿಸಿದೆ, ಇದರ ಪರಿಣಾಮವಾಗಿ 161 ಮಿಲಿಯನ್ ಹೆಚ್ಚುವರಿ ಜನರು ಹಸಿವನ್ನು ಅನುಭವಿಸುತ್ತಾರೆ. ಮಹಿಳೆಯರಿಗೆ ಸಂಬಂಧಿಸಿದಂತೆ, ಸಂತಾನೋತ್ಪತ್ತಿ ವಯಸ್ಸಿನಲ್ಲಿ 1/3 ರಷ್ಟು ಜನರು ಪೌಷ್ಟಿಕಾಂಶದ ಕೊರತೆಯಿಂದ ರಕ್ತಹೀನತೆಯನ್ನು ಅನುಭವಿಸುತ್ತಾರೆ.

SDG ಗುರಿ 2, ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದು, ಇವುಗಳಿಗೆ ಸೀಮಿತವಾಗಿಲ್ಲ ಅಂದರೆ ಇವುಗಳ ಜೊತೆಗೆ ಬೇರೆ ಉದ್ದೇಶಗಳನ್ನು ಹೊಂದಿದೆ.




- ಹಸಿವು ಅಂತ್ಯಗೊಳಿಸುವುದು,
- ಎಲ್ಲಾ ರೀತಿಯ ಅಪೌಷ್ಟಿಕತೆ,
- ದ್ವಿಗುಣ ಕೃಷಿ ಉತ್ಪಾದಕತೆ ಮತ್ತು ಸಣ್ಣ–ಪ್ರಮಾಣದ ಆಹಾರ ಉತ್ಪಾದಕರ ಆದಾಯ ಹೆಚ್ಚಿಸುವುದು.
- ಕೃಷಿ ಪದ್ಧತಿಗಳಿಗೆ ಸ್ಥಿತಿಸ್ಥಾಪಕತ್ವವನ್ನು ತರುವುದು ಮತ್ತು ಸುಸ್ಥಿರ ಆಹಾರ ಉತ್ಪಾದನಾ ವ್ಯವಸ್ಥೆಗಳು ಮತ್ತು ಆನುವಂಶಿಕ ಆಹಾರ ವೈವಿಧ್ಯತೆಯನ್ನು ಕಾಪಾಡಿಕೊಳ್ಳುವುದು.

## 3.ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ

ಜೀವಿತಾವಧಿಯನ್ನು ಹೆಚ್ಚಿಸುವ ಮತ್ತು ಸಾಮಾನ್ಯ ಮಗು ಮತ್ತು ತಾಯಿಯ ಕಾಯಿಲೆಗಳು ಮತ್ತು ರೋಗಕಾರಕಗಳನ್ನು ಕಡಿಮೆ ಮಾಡುವ ಗುರಿಯೊಂದಿಗೆ, ಈ ಗುರಿಯು ಆರೋಗ್ಯಕರ ಜೀವನವನ್ನು ಖಾತ್ರಿಪಡಿಸುತ್ತದೆ. ಎಲ್ಲಾ ವಯಸ್ಸಿನವರಿಗೆ ಯೋಗಕ್ಷೇಮವನ್ನು ಉತ್ತೇಜಿಸುತ್ತದೆ. ಜಾಗತಿಕ ಸಾಂಕ್ರಾಮಿಕವು ಆರೋಗ್ಯದ ಅಸಮಾನತೆಗಳನ್ನು ಹೆಚ್ಚು ಸ್ಪಷ್ಟವಾಗಿಸಿದೆ, ಜೀವಿತಾವಧಿಯ ಪ್ರಗತಿಯನ್ನು ನಿಲ್ಲಿಸುತ್ತದೆ ಮತ್ತು ಕಡಿಮೆ ಮಾಡುತ್ತದೆ.

ಎಸ್‌ಡಿಜಿಗುರಿ 3 ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದು ಇವುಗಳಿಗೆ ಸೀಮಿತವಾಗಿಲ್ಲ:




- ತಾಯಂದಿರ ಮರಣವನ್ನು ಕಡಿಮೆ ಮಾಡುವುದು,
- ನವಜಾತ ಶಿಶು ಮತ್ತು ಮಗುವಿನ ಮರಣವನ್ನು ಕೊನೆಗೊಳಿಸುವುದು,
- ಬಹು ರೋಗಗಳನ್ನು, ಸಾಂಕ್ರಾಮಿಕ ರೋಗಗಳನ್ನು ಕೊನೆಗೊಳಿಸುವುದು,
- ಅಕಾಲಿಕ ಮರಣವನ್ನು ಕಡಿಮೆ ಮಾಡುವುದು,
- ಮಾದಕದ್ರವ್ಯ ಸೇವನೆಯನ್ನು ತಡೆಗಟ್ಟುವುದು ಮತ್ತು ಚಿಕಿತ್ಸೆ ನೀಡುವುದು,


- ಸಂಚಾರ ಸಂಬಂಧಿತ ಸಾವು–ನೋವುಗಳನ್ನು ಕಡಿಮೆಮಾಡುವುದು.
- ಸಾರ್ವತ್ರಿಕ ಆರೋಗ್ಯ ರಕ್ಷಣೆ ಮಾಡುವುದು. ಮಾಲಿನ್ಯದಿಂದ ಉಂಟಾಗುವ ಸಾವುಗಳನ್ನು ಕಡಿಮೆ ಮಾಡುವುದು.

### 4. ಗುಣಮಟ್ಟದ ಶಿಕ್ಷಣ

ಈ ಗುರಿಯುಅಂತರ್ಗತ ಮತ್ತು ಸಮಾನಗುಣಮಟ್ಟದ ಶಿಕ್ಷಣವನ್ನು ಖಾತ್ರಿಗೊಳಿಸುತ್ತದೆ ಮತ್ತು ಎಲ್ಲರಿಗೂ ಜೀವಮಾನದ ಕಲಿಕೆಯನ್ನು ಉತ್ತೇಜಿಸುತ್ತದೆ. ದುಃಖಕರವೆಂದರೆ, COVID–19 ವರ್ಷಗಳ ಶಿಕ್ಷಣದ ಲಾಭಗಳನ್ನು ವ್ಯತಿರಿಕ್ತಗೊಳಿಸಿತು ಮತ್ತು ಅನೇಕ ದೇಶಗಳು ಮೂಲಭೂತ ಶಾಲಾ ಮೂಲಸೌಕರ್ಯಗಳನ್ನು ಹೊಂದಿರುವುದಿಲ್ಲ.

ಎಸ್.ಡಿ.ಜಿ ಗುರಿ 4 ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದು ಇವುಗಳಿಗೆ ಸೀಮಿತವಾಗಿಲ್ಲ:

- ಉಚಿತ ಮತ್ತು ಗುಣಮಟ್ಟದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣವನ್ನು ಖಚಿತಪಡಿಸುವುದು,
- ಬಾಲ್ಯದ ಉತ್ತಮ ಬೆಳವಣಿಗೆಗೆ ಮಕ್ಕಳನ್ನು ಅಣಿಗೊಳಿಸುವುದು.
- ಉನ್ನತ ಶಿಕ್ಷಣದ ಆಯ್ಕೆಗಳನ್ನು ಪಡೆಯಲು ಪುರುಷರು ಮತ್ತು ಮಹಿಳೆಯರಿಗೆ ಸಮಾನ ಅವಕಾಶ ನೀಡುವುದು.
- ಯುವಕರಲ್ಲಿ ಕೌಶಲಗಳನ್ನು ಹೆಚ್ಚಿಸುವುದು.
- ಲಿಂಗ ಸಮಾನತೆಯನ್ನು ಖಚಿತಪಡಿಸಿ, ಶಿಕ್ಷಣದಲ್ಲಿ ಸುಸ್ಥಿರ ಅಭಿವೃದ್ಧಿಯನ್ನು ಉತ್ತೇಜಿಸುವುದು.




| ಜಿಲ್ಲೆ | ಹೆಚ್.ಸಿಆರ್ | ಸರಾಸರಿ ತೀವ್ರತೆ | ಎಂಪಿಐ | ಎಂಪಿಐಗೆ ವಿವಿಧ ಆಯಮಾಗಳ ಸೇರ್ಪಡೆ | | | ರಾಜ್ಯ ದೊಳಗಿನ ಸ್ಥಾನ | ಭಾರತದ 640 ಜಿಲ್ಲೆಗಳಲ್ಲಿನ ಸ್ಥಾನ |
|---|---|---|---|---|---|---|---|---|
| | | | | ಶಿಕ್ಷಣ | ಆರೋಗ್ಯ | ಜೀವನ ಮಟ್ಟ | | |
| ಕೊಡಗು | 10.2 | 40.5 | 4.1 | 24.4 | 30.3 | 45.3 | 4 | 133 |
| ಮೈಸೂರು | 10.4 | 39.0 | 4.1 | 22.0 | 31.2 | 46.8 | 3 | 131 |
| ಚಾಮರಾಜನಗರ | 24.3 | 39.9 | 9.7 | 21.5 | 32.3 | 46.2 | 21 | 279 |
| ಕಲಬುರಗಿ | 35.6 | 39.8 | 14.2 | 20.3 | 34.6 | 45.1 | 28 | 389 |
| ಯಾದಗಿರಿ | 53.6 | 43.5 | 23.3 | 30.8 | 24.4 | 44.8 | 30 | 562 |
| ಕೋಲಾರ | 15.8 | 37.0 | 5.8 | 16.6 | 37.3 | 46.2 | 11 | 198 |
| ಚಿಕ್ಕಬಳ್ಳಾಪುರ | 21.3 | 38.8 | 8.3 | 19.2 | 33.9 | 46.9 | 17 | 249 |
| ಬೆಂಗಳೂರು ಗ್ರಾಮಾಂತರ | 11.9 | 37.5 | 4.5 | 17.2 | 38.7 | 44.2 | 6 | 144 |
| ರಾಮನಗರ | 12.8 | 38.1 | 4.9 | 21.5 | 34.1 | 44.4 | 8 | 165 |
| ರಾಜ್ಯ | 18.9 | 39.7 | 7.5 | 20.9 | 33.7 | 45.5 | | |

**ಮೂಲ:** ಎನ್ಎಫ್ಹೆಚ್ಎಸ್–4 (2015–16)

### 5.ಲಿಂಗ ಸಮಾನತೆ

SDG 5 ಲಿಂಗ ಸಮಾನತೆಯನ್ನು ಸಾಧಿಸಲು ಮತ್ತು ಎಲ್ಲಾ ಮಹಿಳೆಯರು ಮತ್ತು ಹುಡುಗಿಯರನ್ನು ಸಬಲೀಕರಣಗೊಳಿಸುವ ಗುರಿಯನ್ನು ಹೊಂದಿದೆ. ರಾಷ್ಟ್ರೀಯ ಸಂಸತ್ತುಗಳು, ಸ್ಥಳೀಯ ಸರ್ಕಾರಗಳು ಮತ್ತು ವ್ಯವಸ್ಥಾಪಕ ಸ್ಥಾನಗಳಲ್ಲಿ ಕೆಲಸ ಮಾಡುವ ಮಹಿಳೆಯರ ಶೇಕಡಾವಾರು ಪ್ರಮಾಣವು ಇನ್ನೂ ಪುರುಷರಿಗಿಂತ ಗಮನಾರ್ಹವಾಗಿ ಕಡಿಮೆಯಾಗಿದೆ. 3 ಮಹಿಳೆಯರಲ್ಲಿ ಓರ್ವ ಮಹಿಳೆಯಾದರೂ 15 ವರ್ಷ ವಯಸ್ಸಿನಿಂದಲೂ ಒಮ್ಮೆಯಾದರೂ ಹಿಂಸಾಚಾರಕ್ಕೆ ಒಳಗಾಗುತ್ತಾಳೆ ಮತ್ತು ಬಾಲ್ಯ ವಿವಾಹವು ಇನ್ನೂ ಜೀವಂತವಿದೆ.

ಎಸ್ಡಿಜಿ ಗುರಿ 5 ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದು ಇವುಗಳಿಗೆ ಸೀಮಿತವಾಗಿಲ್ಲ :

- ಮಹಿಳೆಯರ ವಿರುದ್ಧ ತಾರತಮ್ಯವನ್ನು ಕೊನೆಗೊಳಿಸುವುದು.
- ಮಹಿಳೆಯರ ಮೇಲಿನ ಎಲಾರೀತಿಯ ಹಿಂಸೆಯನ್ನುತೊಡೆದು ಹಾಕುವುದು.
- ಹಾನಿಕಾರಕ ಅಭ್ಯಾಸಗಳನ್ನು ತೊಡೆದು ಹಾಕುವುದು
- ಮನೆ ಕೆಲಸವನ್ನು ಮೌಲ್ಯೀಕರಿಸುವುದು, ನಾಯಕತ್ವಕ್ಕೆ ಸಮಾನ ಅವಕಾಶಗಳನ್ನು ಖಾತ್ರಿಪಡಿಸುವುದು

* ಸ್ತ್ರೀ ಆರೋಗ್ಯ ರಕ್ಷಣೆಗೆ ಆದ್ಯತೆ ನೀಡುವುದು. ಆದ್ಯತೆಯು ಸಮಾನ ಹಕ್ಕು ಆಗಿದೆ.

**6.ಶುದ್ಧ ನೀರು ಮತ್ತು ನೈರ್ಮಲ್ಯ**

ಶುದ್ಧನೀರು ಮತ್ತು ನೈರ್ಮಲ್ಯ ಅಪೇಕ್ಷಿತ ಉತ್ತಮ ನಿರ್ವಹಣೆಯು ಕುಡಿಯುವ, ಸುರಕ್ಷಿತ ನೀರನ್ನು ಒದಗಿಸುತ್ತದೆ ಆದರೂ 2.3 ಶತಕೋಟಿ ಜನರು ನೀರಿನ ಕೊರತೆ ಇರುವ ದೇಶಗಳಲ್ಲಿ ವಾಸಿಸುತ್ತಿದ್ದಾರೆ.




ಎಸ್.ಡಿ.ಜಿ ಗುರಿ 6 ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದು, ಇವುಗಳಿಗೆ ಸೀಮಿತವಾಗಿಲ್ಲ:


* ಸುರಕ್ಷಿತ ಕುಡಿಯುವ ನೀರು, ನೈರ್ಮಲ್ಯ ಸುಸ್ಥಿರ ಜೀವನಕ್ಕೆ ಸಹಾಯಕ.
* ಜಲ ಮಾಲಿನ್ಯವನ್ನು ಕಡಿಮೆ ಮಾಡುವುದು.
* ನೀರಿನ ಬಳಕೆಯ ದಕ್ಷತೆಯನ್ನು ಹೆಚ್ಚಿಸುವುದು.
* ಜಲಸಂಪನ್ಮೂಲ ನಿರ್ವಹಣೆಯನ್ನು ಸಂಯೋಜಿಸುವುದು ಮತ್ತು ನೀರಿನ ಮೇಲೆ ಅವಲಂಬಿತವಾಗಿರುವ ಪರಿಸರ ವ್ಯವಸ್ಥೆಗಳನ್ನು ಉತ್ತಮಪಡಿಸುವುದು.

7. **ಕೈಗೆಟುಕುವ ಮತ್ತು ಶುದ್ಧ ಇಂಧನ ಶಕ್ತಿ**

ಸುಮಾರು 800 ಮಿಲಿಯನ್‌ಜನರು ವಿದ್ಯುಚ್ಛಕ್ತಿಯ ವ್ಯವಸ್ಥೆ ಹೊಂದಿರುವುದಿಲ್ಲ ಮತ್ತು ಜನಸಂಖ್ಯೆಯ 1/3 ಜನರು ಅಪಾಯಕಾರಿ ಅಡುಗೆ ವ್ಯವಸ್ಥೆಯನ್ನು ಬಳಸುತ್ತಾರೆ. ಕೈಗೆಟುಕುವ, ವಿಶ್ವಾಸಾರ್ಹ, ಸಮರ್ಥನೀಯ ಮತ್ತು ಆಧುನಿಕ ಶಕ್ತಿಯನ್ನು ಖಚಿತಪಡಿಸಿಕೊಳ್ಳಲು ಈ ಗುರಿಯು ಹೊಂದಿದೆ.

ಎಸ್‌ಡಿಜಿ ಗುರಿ 7 ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದು ಇವುಗಳಿಗೆ ಸೀಮಿತವಾಗಿಲ್ಲ:

* ನವೀಕರಿಸಬಹುದಾದ ಶಕ್ತಿಯ ಬಳಕೆಯನ್ನು ಹೆಚ್ಚಿಸುವುದು,
* ಇಂಧನ ಬಳಕೆಯ ದಕ್ಷತೆಯನ್ನು ಸುಧಾರಿಸುವುದು,
* ಶುದ್ಧ ಇಂಧನ ಬಳಕೆ, ಸಂಶೋಧನೆ ಮತ್ತು ತಂತ್ರಜ್ಞಾನದ ಬಗ್ಗೆ ಅಂತಾರಾಷ್ಟ್ರೀಯ ಸಹಕಾರವನ್ನು ಹೆಚ್ಚಿಸುವುದು ಮತ್ತು ಸುಸ್ಥಿರ ಇಂಧನ ಸೇವೆಗಳಿಗಾಗಿ ಅಭಿವೃದ್ಧಿಶೀಲ ರಾಷ್ಟಗಳಲ್ಲಿ ತಂತ್ರಜ್ಞಾನವನ್ನು ನವೀಕರಿಸುವುದು.




8. **ಗೌರವಯುತ ಕೆಲಸ ಮತ್ತು ಆರ್ಥಿಕ ಬೆಳವಣಿಗೆ**

ವಿಶೇಷವಾಗಿ ಜಾಗತಿಕ ಸಾಂಕ್ರಾಮಿಕದ ನಂತರ, ನಿರುದ್ಯೋಗವು ಅತ್ಯಂತ ಪ್ರಚಲಿತವಾಗಿದೆ. ನಿರಂತರ, ಅಂತರ್ಗತ ಮತ್ತು ಸುಸ್ಥಿರ ಆರ್ಥಿಕ ಬೆಳವಣಿಗೆಯನ್ನು ಉತ್ತೇಜಿಸುವ ಈ ಗುರಿಯನ್ನು ಮತ್ತು ಉತ್ಪಾದಕ ಉದ್ಯೋಗ ಮತ್ತು ಯೋಗ್ಯವಾದ ಉದ್ಯೋಗವು ಹೆಚ್ಚು ಮಹತ್ವದ್ದಾಗಿದೆ.

ಎಸ್‌ಡಿಜಿಗುರಿ 8 ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದು ಇವುಗಳಿಗೆ ಸೀಮಿತವಾಗಿಲ್ಲ:

* ಆರ್ಥಿಕ ಬೆಳವಣಿಗೆಯನ್ನು ಉಳಿಸಿಕೊಳ್ಳುವುದು
* ಆರ್ಥಿಕ ಉತ್ಪಾದಕತೆಯನ್ನು ಹೆಚ್ಚಿಸುವುದು
* ಸಂಪನ್ಮೂಲ ದಕ್ಷತೆಯನ್ನು ಸುಧಾರಿಸುವುದು

- ಪೂರ್ಣ ಮತ್ತು ಉತ್ಪಾದಕ ಉದ್ಯೋಗವನ್ನು ಸಾಧಿಸುವುದು
- ದುಡಿಯುವ ಯುವ ಜನಸಂಖ್ಯೆಯನ್ನು ಹೆಚ್ಚಿಸುವುದು
- ಜೀತ ಕಾರ್ಮಿಕರನ್ನು ಮುಕ್ತಗೊಳಿಸುವುದು
- ಕಾರ್ಮಿಕ ಹಕ್ಕುಗಳನ್ನು ರಕ್ಷಿಸುವುದು
- ಪ್ರವಾಸೋದ್ಯಮವನ್ನು ಉತ್ತೇಜಿಸುವುದು ಮತ್ತು ಹಣಕಾಸಿನ ವಹಿವಾಟನ್ನು ಉತ್ತೇಜಿಸುವುದು

### 9. ಉದ್ಯಮ ಆವಿಷ್ಕಾರಮತ್ತು ಮೂಲಸೌಕರ್ಯ

ಮೂಲಸೌಕರ್ಯ, ಅಂತರ್ಗತ ಮತ್ತು ಸುಸ್ಥಿರ ಕೈಗಾರಿಕೀಕರಣ ಮತ್ತು ನಾವೀನ್ಯತೆ ಈ ಸುಸ್ಥಿರ ಅಭಿವೃದ್ಧಿ ಗುರಿಯ ಉದ್ದೇಶವಾಗಿದೆ. ಗ್ರಾಮೀಣ ರಸ್ತೆ ಸಂಪರ್ಕವನ್ನು ಹೆಚ್ಚಿಸುವುದು. ಸಂಶೋಧನೆ ಮತ್ತು ಅಭಿವೃದ್ಧಿ ಹೂಡಿಕೆಯನ್ನು ಹೆಚ್ಚಿಸುವುದು ಮತ್ತು ಹೈಟೆಕ್ ಉತ್ಪನ್ನಗಳನ್ನು ತಯಾರಿಸುವುದು, ಮೂಲಸೌಕರ್ಯವನ್ನು ಸ್ಥಿರಗೊಳಿಸಲು ಸಹಾಯ ಮಾಡುತ್ತದೆ.

ಎಸ್‌ಡಿಜಿಗುರಿ 9 ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದು ಇವುಗಳಿಗೆ ಸೀಮಿತವಾಗಿಲ್ಲ:

- ಎಲ್ಲರಿಗೂ ವಿಶ್ವಾಸಾರ್ಹ ಮೂಲಸೌಕರ್ಯ
- ಸುಸ್ಥಿರ ಕೈಗಾರಿಕೀಕರಣ
- ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿ ಸಣ್ಣ ಪ್ರಮಾಣದ ಕೈಗಾರಿಕೆಗಳು ಮತ್ತು ಉದ್ಯಮಗಳ ಸಂಖ್ಯೆಯನ್ನು ಹೆಚ್ಚಿಸುವುದು
- ಕೈಗಾರಿಕೆಗಳನ್ನು ಸಮರ್ಥನೀಯವಾಗಿಸುವುದು ಮತ್ತು ಎಲ್ಲಾ ಕೈಗಾರಿಕೆಗಳಲ್ಲಿ ತಂತ್ರಜ್ಞಾನವನ್ನು ಸುಧಾರಿಸುವುದು.

### 10. ಅಸಮಾನತೆಗಳ ಇಳಿಕೆ

ಈ ಸುಸ್ಥಿರ ಅಭಿವೃದ್ಧಿ ಗುರಿಯು ದೇಶಗಳಲ್ಲಿ ಮತ್ತು ದೇಶಗಳ ನಡುವಿನ ಅಸಮಾನತೆಗಳನ್ನು ಕಡಿಮೆ ಮಾಡುವುದರ ಮೇಲೆ ಕೇಂದ್ರೀಕರಿಸುತ್ತದೆ. ಆದಾಯದ ಅಸಮಾನತೆ, ನಿರಾಶ್ರಿತರ ಬಿಕ್ಕಟ್ಟುಗಳು ಮತ್ತು ಅಸಮಾನತೆಯ ಸೂಚ್ಯಂಕಗಳು ಸುಧಾರಣೆಗೆ ಪ್ರಯೋಜನಕಾರಿ ಎಂದು ತೋರಿಸುತ್ತವೆ. ದೇಶಗಳ ನಡುವಿನ ಜೀವನ ಮಟ್ಟವು ತುಂಬಾ ಅಸಮತೋಲಿತವಾಗಿದೆ.

ಎಸ್.ಡಿ.ಜಿ ಗುರಿ 10 ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದು ಇವುಗಳಿಗೆ ಸೀಮಿತವಾಗಿಲ್ಲ:

- ಕಡಿಮೆ ಜನಸಂಖ್ಯೆ ಹೊಂದಿದ ರಾಷ್ಟ್ರಗಳಲ್ಲಿನ ಆದಾಯದ ಬೆಳವಣಿಗೆಯು ರಾಷ್ಟ್ರೀಯ ಸರಾಸರಿ ದರಕ್ಕಿಂತ ಹೆಚ್ಚಾಗಿರುತ್ತದೆ
- ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸುಧಾರಣೆಯು, ಅಸಮಾನತೆ, ವೇತನ ಮತ್ತು ಹಣಕಾಸಿನ ಅಸಮಾನತೆಯನ್ನು ಕಡಿಮೆ ಮಾಡಲು ಸೂಕ್ತವಾದ ಶಾಸನ ನೀತಿಗಳೆನಿಸಿವೆ.
- ಉತ್ತಮ ಹಣಕಾಸು, ಮಾರುಕಟ್ಟೆ ಮತ್ತು ಸಂಸ್ಥೆಯ ನಿಯಂತ್ರಣ
- ಜಾಗತಿಕ ನಿರ್ಧಾರಗಳಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳನ್ನು ಪ್ರತಿನಿಧಿಸುವ ಕಾನೂನು ಬದ್ಧ ಸಂಸ್ಥೆಗಳು ಪಾತ್ರ.

### 11. ಸುಸ್ಥಿರ ನಗರಗಳು ಮತ್ತು ಸಮುದಾಯಗಳು

ಈ ಗುರಿಯು ರಾಷ್ಟ್ರೀಯ ನಗರ ನೀತಿಗಳ ಬಳಕೆ, ಸಾರ್ವಜನಿಕ ಸ್ಥಳಗಳಿಗೆ ಹೆಚ್ಚಿನ ಪ್ರವೇಶ, ಅನುಕೂಲಕರ ಸಾರ್ವಜನಿಕ ಸಾರಿಗೆ ಮತ್ತು ಕೊಳೆಗೇರಿಗಳನ್ನು ಕಡಿಮೆ ಮಾಡುವ ಮೂಲಕ ನಗರಗಳು ಮತ್ತು ಮಾನವ ವಸಾಹತುಗಳನ್ನು ಸುರಕ್ಷಿತ, ಸ್ಥಿತಿಸ್ಥಾಪಕ ಮತ್ತು ಸಮರ್ಥನೀಯವಾಗಿಸಲು ಉತ್ತೇಜಿಸುತ್ತದೆ.

ಎಸ್.ಡಿ.ಜಿ ಗುರಿ 11 ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದು ಇವುಗಳಿಗೆ ಸೀಮಿತವಾಗಿಲ್ಲ:

- ಎಲ್ಲರಿಗೂ ಸುರಕ್ಷಿತ ಮತ್ತು ಕೈಗೆಟುಕುವ ವಸತಿ, ಎಲ್ಲರಿಗೂ ಸುರಕ್ಷಿತ ಮತ್ತು ಕೈಗೆಟುಕುವ ಸಾರಿಗೆ
- ಸುಸ್ಥಿರ ನಗರೀಕರಣ ಮತ್ತು ಮಾನವ ವಸಾಹತು ಯೋಜನೆ
- ಪ್ರಪಂಚದಾದ್ಯಂತ ಸಂಸ್ಕೃತಿಗಳನ್ನು ರಕ್ಷಿಸುವುದು
- ನೈಸರ್ಗಿಕ ವಿಕೋಪಗಳಿಂದ ಉಂಟಾಗುವಸಾವಿನಿಂದ ಜನರನ್ನು ರಕ್ಷಿಸುವುದು
- ನಗರದ ಋಣಾತ್ಮಕ ಪರಿಣಾಮವನ್ನುಕಡಿಮೆ ಮಾಡಲು ಮತ್ತು ಹಸಿರು ಸಾರ್ವಜನಿಕ ಸ್ಥಳವನ್ನು ಒದಗಿಸಲು ಮೇಲ್ವಿಚಾರಣೆ ಅಗತ್ಯ. ಗಾಳಿಯ ಗುಣಮಟ್ಟ ಕಾಪಾಡಲು ಮತ್ತು ತ್ಯಾಜ್ಯ ನಿರ್ವಹಣೆ ಮಾಡಲೂ ಸಹ ಮೇಲ್ವಿಚಾರಣೆ ಸಹಾಯಕ.

**12. ಸುಸ್ಥಿರ ಬಳಕೆ ಮತ್ತು ಉತ್ಪಾದನೆ**

ಸಮರ್ಥನೀಯ ಬಳಕೆ ಮತ್ತು ಉತ್ಪಾದನಾ ಮಾದರಿಗಳನ್ನು ಖಚಿತಪಡಿಸಿಕೊಳ್ಳುವುದು. ಹವಾಮಾನ ಬದಲಾವಣೆ ಮತ್ತು ಋಣಾತ್ಮಕ ಪರಿಸರ ಪರಿಣಾಮಗಳನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿದೆ.

ಎಸ್‌ಡಿಜಿ ಗುರಿ 12 ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದು ಇವುಗಳಿಗೆ ಸೀಮಿತವಾಗಿಲ್ಲ:

- ಸುಸ್ಥಿರ ಅಭಿವೃದ್ಧಿ ಮತ್ತು ಬಳಕೆಗಾಗಿ 10 ವರ್ಷದ ಚೌಕಟ್ಟಿನ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವುದು.
- ಸುಸ್ಥಿರ ನಿರ್ವಹಣೆಯನ್ನು ಸಾಧಿಸುವುದು.
- ಆಹಾರ ಪೋಲಾಗದಂತೆ ನೋಡಿಕೊಳ್ಳುವುದು.
- ರಾಸಾಯನಿಕಗಳು ಮತ್ತು ತ್ಯಾಜ್ಯವನ್ನು ಜವಾಬ್ದಾರಿಯುತ ರೀತಿಯಲ್ಲಿ ನಿರ್ವಹಿಸುವುದು.
- ತ್ಯಾಜ್ಯವನ್ನು ಕಡಿಮೆ ಮಾಡುವುದು.
- ಸುಸ್ಥಿರ ಅಭ್ಯಾಸಗಳನ್ನು ಉತ್ತೇಜಿಸುವುದು

**13. ಹವಾಮಾನ ಕ್ರಮ**

ಹವಾಮಾನ ಕ್ರಿಯೆಯು ಹವಾಮಾನ ಬದಲಾವಣೆ ಮತ್ತು ಅದರ ಪರಿಣಾಮಗಳ ವಿರುದ್ಧದ ಹೋರಾಟವನ್ನು ಒಳಗೊಂಡಿರುವ ಗುರಿಯಾಗಿದೆ. ಹೆಚ್ಚುತ್ತಿರುವ ಹಸಿರುಮನೆ ಅನಿಲ ಹೊರಸೂಸುವಿಕೆ, ಸರಾಸರಿ ಜಾಗತಿಕ ತಾಪಮಾನ ಹೆಚ್ಚಳ ಮತ್ತು ಹವಾಮಾನ ಬದಲಾವಣೆಯಿಂದಾಗಿ ಹೆಚ್ಚಿದ ಖರ್ಚು ಇವೆಲ್ಲವೂ ಹವಾಮಾನ ಬದಲಾವಣೆಯ ಋಣಾತ್ಮಕ ಫಲಿತಾಂಶಗಳಾಗಿವೆ.

ಎಸ್.ಡಿ.ಜಿ ಗುರಿ 13 ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದು ಇವುಗಳಿಗೆ ಸೀಮಿತವಾಗಿಲ್ಲ:

- ಹವಾಮಾನ ಸಂಬಂಧಿತ ವಿಪತ್ತುಗಳಿಗೆ ಸಿದ್ಧತೆ.
- ರಾಷ್ಟ್ರೀಯ ನೀತಿಗಳಲ್ಲಿ ಹವಾಮಾನ ನೀತಿಗಳನ್ನು ಸಂಯೋಜಿಸುವುದು ಮತ್ತು ಹವಾಮಾನ ಜಾಗೃತಿ ಮೂಡಿಸುವುದು.

**14. ಜಲದಡಿಯ ಜೀವ ರಾಶಿ**

‘ಜಲದಡಿಯ ಜೀವರಾಶಿ ಗುರಿಯು ಸುಸ್ಥಿರ ಅಭಿವೃದ್ಧಿಗಾಗಿ ನಮ್ಮ ಸಾಗರಗಳು, ಸಮುದ್ರಗಳು ಮತ್ತು ಸಮುದ್ರ ಸಂಪನ್ಮೂಲಗಳನ್ನು ಸಂರಕ್ಷಿಸಲು ಮತ್ತು ಸಮರ್ಥವಾಗಿ ಬಳಸಿಕೊಳ್ಳುವುದರ ಮೇಲೆ ಕೇಂದ್ರೀಕರಿಸುತ್ತದೆ. ಆಹಾರ, ಪ್ರವಾಸೋದ್ಯಮ, ಮನರಂಜನಾ ಚಟುವಟಿಕೆಗಳು ಮತ್ತು ಜಾಗತಿಕ ವ್ಯಾಪಾರಕ್ಕಾಗಿ ನಮ್ಮ ಸಾಗರಗಳ ಮೇಲೆ ಹೆಚ್ಚು

ಅವಲಂಬಿತರಾಗಿದ್ದೇವೆ. ವಾಸ್ತವವಾಗಿ ಮೂರು ಬಿಲಿಯನ್ ಜನರು ತಮ್ಮ ಜೀವನೋಪಾಯಕ್ಕಾಗಿ ಸಾಗರವನ್ನು ಅವಲಂಬಿಸಿದ್ದಾರೆ. ಆದಾಗ್ಯೂ ನಮ್ಮ ಸಾಗರಗಳು ತೀವ್ರ ಅಪಾಯದಲ್ಲಿವೆ. ಪ್ರಮುಖ ಸಮುದ್ರ ಜೀವವೈವಿಧ್ಯದ ಅರ್ಧದಷ್ಟು ಪ್ರದೇಶಗಳು ಅಸುರಕ್ಷಿತವಾಗಿವೆ  ಸಮುದ್ರ ಜೀವಿಗಳನ್ನು ಬೆಂಬಲಿಸಲು ಆಮ್ಲಜನಕದ ಕೊರತೆಯ ವಲಯಗಳು ಹೆಚ್ಚುತ್ತಿವೆ. ಆದ್ದರಿಂದ ನಾವು ನಮ್ಮ ಸಾಗರಗಳನ್ನು ಉತ್ತಮವಾಗಿ ರಕ್ಷಿಸಿಕೊಳ್ಳುವುದು ಅತ್ಯಗತ್ಯ.

ಎಸ್.ಡಿ.ಜಿ ಗುರಿ 14 ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದು ಇವುಗಳಿಗೆ ಸೀಮಿತವಾಗಿಲ್ಲ:




- ಸಮುದ್ರ ಮಾಲಿನ್ಯವನ್ನು ತಡೆಗಟ್ಟುವುದು.
- ಸಮುದ್ರ ಮತ್ತು ಕರಾವಳಿ ಪರಿಸರ ವ್ಯವಸ್ಥೆಗಳನ್ನು ರಕ್ಷಿಸುವುದು.
- ವಿವಿಧ ಕ್ರಮಗಳ ಮೂಲಕ ಸಾಗರ ಆಮ್ಲೀಕರಣವನ್ನು ಕಡಿಮೆ ಮಾಡುವುದು.
- ಮೀನುಗಾರಿಕೆ ಮಾರುಕಟ್ಟೆಯನ್ನು ರಕ್ಷಿಸುವುದು.
- ಸಮುದ್ರ ಮತ್ತು ಕರಾವಳಿ ಪ್ರದೇಶಗಳನ್ನು ಸಂರಕ್ಷಿಸುವುದು ಮತ್ತು ಅತಿಯಾದ ಮೀನುಗಾರಿಕೆ ನಿಯಂತ್ರಣ.

**15. ಭೂಮಿ ಮೇಲಿನ ಜೀವಜಾಲ**

ಈ ಗುರಿಯು ಒಟ್ಟಾರೆಯಾಗಿ ಭೂಮಿ ಜೀವನದ ಆರೋಗ್ಯವನ್ನು ಉತ್ತೇಜಿಸುತ್ತದೆ. ಇದು ಭೂ ಪರಿಸರ ವ್ಯವಸ್ಥೆಗಳನ್ನು ರಕ್ಷಿಸುವುದು, ಮರುಸ್ಥಾಪಿಸುವುದು ಮತ್ತು ಉತ್ತೇಜಿಸುವುದು, ಅರಣ್ಯಗಳನ್ನು ಸುಸ್ಥಿರವಾಗಿ ನಿರ್ವಹಿಸುವುದನ್ನು ಒಳಗೊಂಡಿದೆ. ಮರುಭೂಮೀಕರಣ ವಿರುದ್ಧ ಹೋರಾಡುವುದು ಮತ್ತು ಭೂಮಿಯ ಅವನತಿ ಮತ್ತು ಜೀವ ವೈವಿಧ್ಯದ ನಷ್ಟವನ್ನು ನಿಲ್ಲಿಸುವುದು ಮತ್ತು ಹಿಮ್ಮೆಟ್ಟಿಸುವುದು. ಅನೇಕ ಪ್ರಭೇದಗಳು ಅಪಾಯದಲ್ಲಿವೆ ಮತ್ತು ನಿರಂತರವಾಗಿ ಹೆಚ್ಚುತ್ತಿರುವ ಜೀವ ವೈವಿಧ್ಯತೆಯ ನಷ್ಟದೊಂದಿಗೆ, ನಾವು ಭೂ ಪರಿಸರ ವ್ಯವಸ್ಥೆಗಳ ಬಗ್ಗೆ ಉತ್ತಮ ಕಾಳಜಿ ವಹಿಸುವುದು ಅತ್ಯಗತ್ಯ.

ಎಸ್.ಡಿ.ಜಿ ಗುರಿ 15 ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದು ಇವುಗಳಿಗೆ ಸೀಮಿತವಾಗಿಲ್ಲ:

- ಸಿಹಿನೀರಿನ ಪರಿಸರ ವ್ಯವಸ್ಥೆಯ ಆರೋಗ್ಯ, ಅರಣ್ಯಗಳ ಸುಸ್ಥಿರ ನಿರ್ವಹಣೆ.
- ಪರ್ವತ ಪರಿಸರ ವ್ಯವಸ್ಥೆಯ ಆರೋಗ್ಯವನ್ನು ಖಾತರಿಪಡಿಸುವುದು.
- ನೈಸರ್ಗಿಕ ಆವಾಸ ಸ್ಥಾನಗಳನ್ನು ಸಂರಕ್ಷಿಸುವುದು
- ಅನುವಂಶೀಕ ಸಂಪನ್ಮೂಲಗಳ ಬಳಕೆಯ ಹಂಚಿಕೆಯ ಪ್ರಯೋಜನಗಳು
- ಬೇಟೆಯಾಡುವುದು ಮತ್ತು ಸಂರಕ್ಷಿತ ತಳಿಗಳ ಕಳ್ಳಸಾಗಣೆಯನ್ನು ಕೊನೆಗೊಳಿಸುವುದು ಮತ್ತು ಜೀವವೈವಿಧ್ಯ ಮೌಲ್ಯಗಳನ್ನು ಉಳಿಸಿಕೊಳ್ಳುವ ಯೋಜನೆ.

**16. ಶಾಂತಿ, ನ್ಯಾಯ ಮತ್ತು ದೃಢ ಸಂಸ್ಥೆಗಳು**

ಸುಸ್ಥಿರ ಅಭಿವೃದ್ಧಿ ಮತ್ತು ಎಲ್ಲರಿಗೂ ನ್ಯಾಯಕ್ಕಾಗಿ ಶಾಂತಿ ಮತ್ತು ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ಮೂಲಕ ಸಂಘರ್ಷ, ಅಭದ್ರತೆ ಮತ್ತು ದುರ್ಬಲ ಸಂಸ್ಥೆಗಳನ್ನು ಕಡಿಮೆ ಮಾಡುವುದು ಈ ಗುರಿಯನ್ನು ಒಳಗೊಂಡಿರುತ್ತದೆ.

ಎಸ್.ಡಿ.ಜಿ ಗುರಿ 16 ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದು ಇವುಗಳಿಗೆ ಸೀಮಿತವಾಗಿಲ್ಲ:

- ಹಿಂಸಾಚಾರ ಮತ್ತು ಸಾವಿನ ಪ್ರಮಾಣವನ್ನು ಕಡಿಮೆ ಮಾಡುವುದು
- ಮಕ್ಕಳ ಮೇಲಿನ ಎಲ್ಲಾ ರೀತಿಯ ಹಿಂಸಾಚಾರವನ್ನು ಕೊನೆಗೊಳಿಸುವುದು
- ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಕಾನೂನನ್ನು ಉತ್ತೇಜಿಸುವುದು
- ಆರ್ಥಿಕ ಅಪರಾಧವನ್ನು ಕಡಿಮೆ ಮಾಡುವುದು, ಭ್ರಷ್ಟಾಚಾರವನ್ನು ಕಡಿಮೆ ಮಾಡುವುದು
- ಪಾರದರ್ಶಕ ವ್ಯವಸ್ಥೆ ಅಭಿವೃದ್ಧಿಪಡಿಸುವುದು

- ಜಾಗತಿಕ ಆಡಳಿತದಲ್ಲಿ ಅಭಿವೃದ್ಧಿಶೀಲ ರಾಷ್ಟದ ಭಾಗವಹಿಸುವಿಕೆ ಹೆಚ್ಚಿಸುವುದು, ಎಲ್ಲರಿಗೂ ಕಾನೂನು, ಮಾಹಿತಿ ಮತ್ತು ಸ್ವಾತಂತ್ರ್ಯ ಹಕ್ಕುಗಳಿಗೆ ಸಾರ್ವಜನಿಕರಿಗೆ ಮುಕ್ತವಾಗಿಸುವುದು.

**17. ಗುರಿಗಳಿಗಾಗಿ ಸಹಭಾಗಿತ್ವ**

ಈ ಕೊನೆಯ ಗುರಿಯು SDG ಗಳಿಗೆ ಬಲವಾದ ಪಾಲುದಾರಿಕೆ ಮತ್ತು ಜಾಗತಿಕ ಸಹಕಾರವನ್ನು ಸಾಧಿಸಲು ಸಹಾಯ ಮಾಡುವ ಗುರಿಯನ್ನು ಹೊಂದಿದೆ.

ಎಸ್.ಡಿ.ಜಿ ಗುರಿ 17 ಉದ್ದೇಶಗಳು ಇವುಗಳನ್ನು ಒಳಗೊಂಡಿದ್ದು, ಇವುಗಳಿಗೆ ಸೀಮಿತವಾಗಿಲ್ಲ:

- ಅಭಿವೃದ್ಧಿಶೀಲ ರಾಷ್ಟದ ಅಂತಾರಾಷ್ಟ್ರೀಯ ಬೆಂಬಲವನ್ನು ಹೆಚ್ಚಿಸುವುದು
- ಅಂತಾರಾಷ್ಟ್ರೀಯ ಸಹಕಾರವನ್ನು ಹೆಚ್ಚಿಸುವುದು
- ಪರಿಸರದ ಉತ್ತಮ ತಂತ್ರಜ್ಞಾನಗಳನ್ನು ಉತ್ತೇಜಿಸುವುದು
- ನಿಯಮ ಆಧಾರಿತ ಮತ್ತು ಸಮಾನ ಬಹುಪಕ್ಷೀಯ ವ್ಯಾಪಾರ ವ್ಯವಸ್ಥೆ
- ಅಭಿವೃದ್ಧಿ ಹೊಂದುತ್ತಿರುವ ದೇಶದ ರಫ್ತುಗಳನ್ನು ಹೆಚ್ಚಿಸುವುದು
- ಜಾಗತಿಕ ಆರ್ಥಿಕ ಸ್ಥಿರತೆಯನ್ನು ಹೆಚ್ಚಿಸುವುದು ಮತ್ತು ಸುಸಂಬದ್ಧವಾದ ಸುಸ್ಥಿರ ಅಭಿವೃದ್ಧಿ ನೀತಿಯನ್ನು ಹೊರತರುವುದು.

**ಮಾಹಿತಿ ಮೂಲ: ಸುಸ್ಥಿರ ಅಭಿವೃದ್ಧಿ ಗುರಿಗಳ ಮುನ್ನೋಟ 2030 – ಕರ್ನಾಟಕದ ಕಾರ್ಯತಂತ್ರಗಳು ಮತ್ತು ಕ್ರಿಯಾ ಯೋಜನೆ. ಕರ್ನಾಟಕ ಸರಕಾರ.**

# ಅಧ್ಯಾಯ –4

## ಶಿಕ್ಷಣಕ್ಕೆ ಸಂಬಂಧಿಸಿದಂತೆ ಗುರಿಗಳು ಮತ್ತು ಅವುಗಳ ಆಶಯ

2015 ರಲ್ಲಿ ವಿಶ್ವಸಂಸ್ಥೆಯು ಅಳವಡಿಸಿಕೊಂಡ ಸುಸ್ಥಿರ ಅಭಿವೃದ್ಧಿ ಗುರಿಗಳು (SDGs), ಬಡತನವನ್ನು ಕೊನೆಗೊಳಿಸುವ, ಭೂಮಿಯನ್ನು ರಕ್ಷಿಸುವ ಮತ್ತು 2030 ರ ವೇಳೆಗೆ ಎಲ್ಲಾ ಜನರು ಶಾಂತಿ ಮತ್ತು ಸಮೃದ್ಧಿಯನ್ನು ಆನಂದಿಸುವ ಗುರಿಯನ್ನು ಹೊಂದಿರುವ ಕ್ರಮಕ್ಕೆ ಸಾರ್ವತ್ರಿಕ ಕರೆಯನ್ನು ಪ್ರತಿನಿಧಿಸುತ್ತದೆ. ಈ 17 ಗುರಿಗಳು ಸಮಗ್ರ ನೀಲನಕ್ಷೆಯನ್ನು ಒದಗಿಸುತ್ತವೆ. ಹೆಚ್ಚು ಸಮಾನ ಮತ್ತು ಸಮರ್ಥನೀಯ ಜಗತ್ತಿಗೆ, ಹವಾಮಾನ ಬದಲಾವಣೆ ಮತ್ತು ಪರಿಸರ ಸಂರಕ್ಷಣೆಯಿಂದ ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಬೆಳವಣಿಗೆಯವರೆಗೆ ವ್ಯಾಪಕ ಶ್ರೇಣಿಯ ಸಮಸ್ಯೆಗಳನ್ನು ಪರಿಹರಿಸಲು ಇದು ಗಮನ ಹರಿಸುತ್ತದೆ. ಶಿಕ್ಷಣ, ನಿರ್ದಿಷ್ಟವಾಗಿ, ಈ ಆಶಯಗಳನ್ನು ಸಾಧಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸುತ್ತದೆ. "ಗುಣಮಟ್ಟದ ಶಿಕ್ಷಣ"ದ ಮೇಲೆ ಕೇಂದ್ರೀಕರಿಸುವ SDG 4, ಎಲ್ಲರಿಗೂ ಒಳಗೊಳ್ಳುವ ಮತ್ತು ಸಮಾನ ಶಿಕ್ಷಣದ ಪ್ರಾಮುಖ್ಯತೆಯನ್ನು ಒತ್ತಿಹೇಳುತ್ತದೆ, ಆಜೀವ ಕಲಿಕೆಯ ಅವಕಾಶಗಳನ್ನು ಉತ್ತೇಜಿಸುತ್ತದೆ. ಆದಾಗ್ಯೂ, ಶಿಕ್ಷಣ ಮತ್ತು ವಿಶಾಲವಾದ SDG ಚೌಕಟ್ಟಿನ ನಡುವಿನ ಸಂಪರ್ಕವು ಈ ಏಕೈಕ ಗುರಿಯನ್ನು ಮೀರಿ ವಿಸ್ತರಿಸುತ್ತದೆ. ಶಿಕ್ಷಣವು ಸುಸ್ಥಿರ ಭವಿಷ್ಯವನ್ನು ರಚಿಸಲು ಅಗತ್ಯವಾದ ಜ್ಞಾನ, ಕೌಶಲಗಳು, ಮೌಲ್ಯಗಳು ಮತ್ತು ವರ್ತನೆಗಳ ಅಭಿವೃದ್ಧಿಯನ್ನು ಉತ್ತೇಜಿಸುವ, ಎಲ್ಲಾ SDG ಗಳ ಸಾಧನೆಯ ಮೇಲೆ ಪ್ರಭಾವ ಬೀರುವ ಮತ್ತು ಬೆಂಬಲಿಸುವ ಪ್ರಬಲ ಸಾಧನವಾಗಿದೆ.

### SDGಗಳನ್ನು ಸಾಧಿಸುವಲ್ಲಿ ಶಾಲಾ ಶಿಕ್ಷಣದ ಪಾತ್ರ:

ಈ ಪರಿವರ್ತನಾ ಪ್ರಕ್ರಿಯೆಯಲ್ಲಿ ಶಾಲೆಗಳು ಮುಂಚೂಣಿಯಲ್ಲಿವೆ. ಪಠ್ಯಕ್ರಮದಲ್ಲಿ SDG ಗಳನ್ನು ಸಂಯೋಜಿಸುವ ಮೂಲಕ, ಶಾಲಾ ಶಿಕ್ಷಣವು 21 ನೇ ಶತಮಾನದ ಸವಾಲುಗಳನ್ನು ನಿಭಾಯಿಸಲು ಸಜ್ಜುಗೊಂಡಿರುವ ಮಾಹಿತಿಯುಕ್ತ ಮತ್ತು ಜವಾಬ್ದಾರಿಯುತ ಜಾಗತಿಕ ನಾಗರಿಕರ ಪೀಳಿಗೆಯನ್ನು ಬೆಳೆಸಬಹುದು. ಈ ವಿಧಾನವು ವಿದ್ಯಾರ್ಥಿಗಳು ಜಾಗತಿಕ ಸಮಸ್ಯೆಗಳ ಬಗ್ಗೆ ವಿಮರ್ಶಾತ್ಮಕವಾಗಿ ಯೋಚಿಸಲು, ವಿವಿಧ ಅಭಿವೃದ್ಧಿ ಸವಾಲುಗಳ ಪರಸ್ಪರ ಸಂಬಂಧವನ್ನು ಅರ್ಥಮಾಡಿಕೊಳ್ಳಲು ಮತ್ತು ಅವರ ಸಮುದಾಯಗಳಲ್ಲಿ ಮತ್ತು ಅದರಾಚೆಗೆ ಅರ್ಥಪೂರ್ಣ ಕ್ರಮಗಳನ್ನು ತೆಗೆದುಕೊಳ್ಳಲು ಪ್ರೋತ್ಸಾಹಿಸುತ್ತದೆ.


ಶಾಲಾ ಶಿಕ್ಷಣದಲ್ಲಿ SDG ಗಳನ್ನು ಸೇರಿಸುವುದರಿಂದ ಅಂತರಶಿಸ್ತಿನ ಕಲಿಕೆಯನ್ನು ಉತ್ತೇಜಿಸುತ್ತದೆ, ಅಲ್ಲಿ ವಿದ್ಯಾರ್ಥಿಗಳು ವಿವಿಧ ವಿಷಯಗಳ ನಡುವಿನ ಸಂಪರ್ಕಗಳನ್ನು ಅನ್ವೇಷಿಸಬಹುದು – ಉದಾಹರಣೆಗೆ ವಿಜ್ಞಾನ, ಸಾಮಾಜಿಕ ಅಧ್ಯಯನಗಳು ಮತ್ತು ಅರ್ಥಶಾಸ್ತ್ರ ಈ ಸಮಗ್ರ ವಿಧಾನವು ವಿದ್ಯಾರ್ಥಿಗಳ ಶೈಕ್ಷಣಿಕ ಜ್ಞಾನವನ್ನು ಹೆಚ್ಚಿಸುವುದು ಮಾತ್ರವಲ್ಲದೆ ಸಮಸ್ಯೆ ಪರಿಹರಿಸುವುದು, ಸಹಯೋಗ ಮತ್ತು ನೈತಿಕ ನಿರ್ಧಾರ ಮಾಡುವಿಕೆಯಂತಹ ಅಗತ್ಯಜೀವನ ಕೌಶಲಗಳನ್ನು ಸಹ ನಿರ್ಮಿಸುತ್ತದೆ. ಇದಲ್ಲದೆ, ಶಾಲೆಗಳು ಸುಸ್ಥಿರತೆಗಾಗಿ ಜೀವಂತ ಪ್ರಯೋಗಾಲಯಗಳಾಗಿ ಕಾರ್ಯನಿರ್ವಹಿಸುತ್ತವೆ, ಅಲ್ಲಿ ವಿದ್ಯಾರ್ಥಿಗಳು SDG ಗಳನ್ನು ಪ್ರತಿಬಿಂಬಿಸುವ ಯೋಜನೆಗಳು ಮತ್ತು ಉಪಕ್ರಮಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳುತ್ತಾರೆ. ಇದು ತ್ಯಾಜ್ಯವನ್ನು ಕಡಿಮೆ ಮಾಡುವುದು, ಶಕ್ತಿಯನ್ನು ಉಳಿಸುವುದು ಅಥವಾ ಸಾಮಾಜಿಕ ನ್ಯಾಯಕ್ಕಾಗಿ ಪ್ರತಿಪಾದಿಸುವುದು, ಈ ಪ್ರಾಯೋಗಿಕ ಅನುಭವಗಳು ವಿದ್ಯಾರ್ಥಿಗಳಿಗೆ ಸುಸ್ಥಿರ ಅಭಿವೃದ್ಧಿಯ ತತ್ವಗಳನ್ನು ಆಂತರಿಕವಾಗಿಸಲು ಸಹಾಯ ಮಾಡುತ್ತದೆ ಮತ್ತು ತಮ್ಮದೇ ಆದ ರೀತಿಯಲ್ಲಿ ಬದಲಾವಣೆ ತಯಾರಕರಾಗಲು ಪ್ರೇರೇಪಿಸುತ್ತದೆ.

ನಾವು 2030 ರಗಡುವಿನತ್ತ ಸಾಗುತ್ತಿರುವಾಗ, ಸುಸ್ಥಿರ ಅಭಿವೃದ್ಧಿ ಗುರಿಗಳನ್ನು ಸಾಧಿಸುವಲ್ಲಿ ಶಿಕ್ಷಣದ ಪಾತ್ರವನ್ನು ಅತಿಯಾಗಿ ಹೇಳಲಾಗುವುದಿಲ್ಲ. ಶಾಲಾ ಶಿಕ್ಷಣದೊಳಗೆ SDG ಗಳನ್ನು ಸಂಯೋಜನೆ ಮಾಡುವ ಮೂಲಕ, ನಾವು ಭವಿಷ್ಯದ ನಾಯಕರ ಮನಸ್ಸನ್ನು ರೂಪಿಸುವುದು ಮಾತ್ರವಲ್ಲದೆ ಹೆಚ್ಚು ಸಮರ್ಥನೀಯ, ನ್ಯಾಯಯುತ ಮತ್ತು

ಸಮೃದ್ಧ ಜಗತ್ತಿಗೆ ಅಡಿಪಾಯವನ್ನು ಹಾಕುತ್ತೇವೆ. ಶಿಕ್ಷಣದ ಮೂಲಕವೇ ನಾವು ಮುಂದಿನ ಪೀಳಿಗೆಗೆ ಸವಾಲನ್ನು ಎದುರಿಸಲು ಮತ್ತು ಎಸ್.ಡಿ.ಜಿಗಳ ದೃಷ್ಟಿಯನ್ನು ಸಾಕಾರಗೊಳಿಸಲು ಪ್ರೇರೇಪಿಸಬಹುದು ಮತ್ತು ಅಧಿಕಾರ ನೀಡಬಹುದು. ಸುಸ್ಥಿರ ಅಭಿವೃದ್ಧಿಯ ಕೆಲವು ಗುರಿಗಳು ಶಿಕ್ಷಣಕ್ಕೆ ನಿಕಟವಾಗಿ ಸಂಬಂಧಿಸಿದವಾಗಿದ್ದು, ಶಿಕ್ಷಣದಲ್ಲಿ ಲಭ್ಯವಿರುವ ಕೆಲವು ಅವಕಾಶಗಳು ಮತ್ತು ಸಾಧ್ಯತೆಗಳ ಮೂಲಕ ಅವುಗಳ ಸಾಕಾರಕ್ಕೆ ಹೆಚ್ಚು ಕೊಡುಗೆ ನೀಡಲು ಸಾಧ್ಯವಾಗುವುದು. ಆ ನಿರ್ದಿಷ್ಟ ಗುರಿಗಳು ಯಾವ ರೀತಿ ಶಾಲಾ ಶಿಕ್ಷಣದ ಜೊತೆಗೆ ಸಂಬಂಧ ಹೊಂದಿವೆ, ಅವುಗಳ ಪರಿಣಾಮಕಾರಿ ಅನುಷ್ಠಾನದ ಕಾರ್ಯತಂತ್ರಗಳ ಬಗ್ಗೆ ಈ ಕೆಳಗೆ ಒಂದೊಂದಾಗಿ ವಿವರಿಸಲಾಗಿದೆ.


**1. ಬಡತನದಿಂದ ಮುಕ್ತ:**

ಮೊದಲ ಸುಸ್ಥಿರ ಅಭಿವೃದ್ಧಿ ಗುರಿ (SDG-1) ಬಡತನವನ್ನು ಎಲ್ಲೆಡೆಯೂ ಅದರ ಎಲ್ಲಾ ರೂಪಗಳಲ್ಲಿ ಕೊನೆಗೊಳಿಸುವ ಗುರಿಯನ್ನು ಹೊಂದಿದೆ. ಬಡತನದ ಚಕ್ರವನ್ನು ಮುರಿಯಲು ಶಿಕ್ಷಣವು ಅತ್ಯಂತ ಶಕ್ತಿಶಾಲಿ ಸಾಧನಗಳಲ್ಲಿ ಒಂದಾಗಿರುವುದರಿಂದ ಶಾಲಾ ಶಿಕ್ಷಣವು ಈ ಗುರಿಯೊಂದಿಗೆ ಅಂತರ್ಗತವಾಗಿ ಸಂಬಂಧಿಸಿದೆ. ಗುಣಮಟ್ಟದ ಶಿಕ್ಷಣದ ಪ್ರವೇಶವು ತಮ್ಮ ಆರ್ಥಿಕ ಭವಿಷ್ಯವನ್ನು ಸುಧಾರಿಸಲು ಮತ್ತು ಬಡತನದಿಂದ ಪಾರಾಗಲು ಅಗತ್ಯವಿರುವ ಜ್ಞಾನ, ಕೌಶಲ ಮತ್ತು ಅವಕಾಶಗಳೊಂದಿಗೆ ವ್ಯಕ್ತಿಗಳನ್ನು ಸಜ್ಜುಗೊಳಿಸುತ್ತದೆ. ಈ ಶಿಕ್ಷಣವನ್ನು ಒದಗಿಸುವಲ್ಲಿ ಶಾಲೆಗಳು ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ. ವಿಶೇಷವಾಗಿ ಕಡಿಮೆ ಆದಾಯದ ಕುಟುಂಬಗಳ ಮಕ್ಕಳಿಗೆ, ಉತ್ತಮ ಭವಿಷ್ಯವನ್ನು ಸುರಕ್ಷಿತವಾಗಿರಿಸಲು ಸಹಾಯ ಮಾಡುತ್ತದೆ. ಶಾಲಾ ಶಿಕ್ಷಣದ ಸಂದರ್ಭದಲ್ಲಿ, ಬಡತನವನ್ನು ಪರಿಹರಿಸುವುದು ಎಂದರೆ ಎಲ್ಲಾ ಮಕ್ಕಳು, ಅವರ ಸಾಮಾಜಿಕ, ಆರ್ಥಿಕ ಹಿನ್ನೆಲೆಯನ್ನು ಲೆಕ್ಕಿಸದೆ, ಗುಣಮಟ್ಟದ ಶಿಕ್ಷಣವನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳುವುದು. ಇದು ಶಾಲಾ ಶಿಕ್ಷಣ ಪಡೆಯುವುದು ಮಾತ್ರವಲ್ಲದೆ ಸಂಪನ್ಮೂಲಗಳು, ಬೆಂಬಲ ವ್ಯವಸ್ಥೆಗಳು ಮತ್ತು ಕಲಿಕೆಯ ಪರಿಸರಗಳನ್ನು ಒದಗಿಸುವುದನ್ನು ಒಳಗೊಂಡಿರುತ್ತದೆ. ಅದು ಹಿಂದುಳಿದ ವಿದ್ಯಾರ್ಥಿಗಳಿಗೆ ಶೈಕ್ಷಣಿಕವಾಗಿ ಯಶಸ್ವಿಯಾಗಲು ಅನುವು ಮಾಡಿಕೊಡುತ್ತದೆ. ಹಾಗೆ ಮಾಡುವುದರಿಂದ, ಬಡತನದಿಂದ ಹೊರಬರುವ ಮಾರ್ಗವಾಗಿ ಶಿಕ್ಷಣವು ಕಾರ್ಯನಿರ್ವಹಿಸುತ್ತದೆ. ವ್ಯಕ್ತಿಗಳು ಮತ್ತು ಸಮುದಾಯಗಳನ್ನು ಸಬಲಗೊಳಿಸುತ್ತದೆ.




ಬಡತನ ಮುಕ್ತವನ್ನಾಗಿ ಮಾಡಲು ಹಲವು ಕಾರ್ಯಕ್ರಮ ಮತ್ತು ಪ್ರಯತ್ನಗಳು ವಿವಿಧ ಹಂತದಲ್ಲಿ ಸರ್ಕಾರ ಮತ್ತು ಇತರೆ ಸಂಸ್ಥೆಗಳು ಮಾಡುತ್ತಿವೆ. ಆದರೆ ಬಡತನದ ಕಾರಣದಿಂದ ಮಕ್ಕಳು ಶಿಕ್ಷಣದಿಂದ ವಂಚಿತರಾಗಬಾರದು ಎಂದು ಹಲವು ಕಾರ್ಯಕ್ರಮ ಮತ್ತು ಸವಲತ್ತುಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿವೆ. ಜೊತೆಗೆ ಕೆಲವು ಅಂಶಗಳು ನೇರವಾಗಿ ಮಕ್ಕಳ ಕಲಿಕೆಯ ಮೇಲಾಗುತ್ತವೆ. ಆದ್ದರಿಂದ ಶಾಲಾ ಶಿಕ್ಷಣದ ಜೊತೆಗೆ ಬಡತನ ಮುಕ್ತ ಗುರಿ ಸಾಕಷ್ಟು ಸಂಬಂಧ ಹೊಂದಿದೆ. ಮೊದಲನೆಯದಾಗಿ ಬಡತನದಿಂದಾಗಿ ಶಿಕ್ಷಣದಿಂದ ವಂಚಿತರಾಗಬಾರದು, ಎರಡನೆಯದು ಶಿಕ್ಷಣದ ಮೂಲಕ ಮಕ್ಕಳು ಆರ್ಥಿಕವಾಗಿ ಸಬಲರಾಗಲು, ಉತ್ಪಾದಕರಾಗಲು ಸಹಾಯವಾಗಲು ಸಾಧ್ಯವಾಗಿಸುವುದು.

ಆದ್ದರಿಂದ ಈ ಕೆಳಗಿನ ಸವಲತ್ತುಗಳನ್ನು ವಿಶೇಷವಾಗಿ ಗಮನಿಸಬಹುದು ಮತ್ತು ಇವುಗಳ ಪರಿಣಾಮಕಾರಿಯಾದ ಅನುಷ್ಠಾನಕ್ಕೆ ಸಕ್ರಿಯವಾಗಿ ಕಾರ್ಯನಿಹಿಸುವುದು ನಮ್ಮೆಲ್ಲರ ಜವಾಬ್ದಾರಿ.




**ಕಾರ್ಯತಂತ್ರಗಳು/ವಿಶೇಷ ಸವಲತ್ತುಗಳ ಅನುಷ್ಠಾನ:**

- ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆ ಮೂಲಕ ಎಲ್ಲಾ ಮಕ್ಕಳಿಗೆ ಉಚಿತ ಶಿಕ್ಷಣ ದೊರಕಿಸಿಕೊಡುವುದು.
- ಉಚಿತ ಸಮವಸ್ತ್ರ.
- ಉಚಿತ ಶೂ.
- ಉಚಿತ ಪಠ್ಯಪುಸ್ತಕಗಳು.
- ಕ್ಷೀರ ಭಾಗ್ಯ ಮತ್ತು ಮೊಟ್ಟೆ/ಬಾಳೆಹಣ್ಣು/ಶೇಂಗಾ ಚಿಕ್ಕಿ.
- ಮಧ್ಯಾಹ್ನದ ಬಿಸಿ ಊಟ.
- ಶಿಷ್ಯವೇತನ.
- ಆಯ್ದ ಮಕ್ಕಳಿಗೆ ಉಚಿತ ಶಾಲಾ ಪ್ರವಾಸ ಇತ್ಯಾದಿ.




ಬಡತನವನ್ನು ಕೊನೆಗೊಳಿಸುವುದು ಶಿಕ್ಷಣದ ಪಾತ್ರದೊಂದಿಗೆ ಆಳವಾಗಿ ಸಂಪರ್ಕ ಹೊಂದಿದ ಮೂಲಭೂತ ಗುರಿಯಾಗಿದೆ. ಶಾಲೆಗಳಲ್ಲಿ ಈ ಕಾರ್ಯತಂತ್ರಗಳನ್ನು ಅಳವಡಿಸುವ ಮೂಲಕ, ಶಿಕ್ಷಣವು ವ್ಯಕ್ತಿಗಳು ಮತ್ತು ಸಮುದಾಯಗಳನ್ನು ಬಡತನದಿಂದ ಮೇಲೆತ್ತಲು ಪ್ರಬಲ ಸಾಧನವಾಗಿ ಕಾರ್ಯನಿರ್ವಹಿಸುತ್ತದೆ ಎಂದು ನಾವು ಖಚಿತಪಡಿಸಿಕೊಳ್ಳಬಹುದು. ಗುಣಮಟ್ಟದ ಶಿಕ್ಷಣಕ್ಕೆ ಸಮಾನವಾದ ಪ್ರವೇಶವನ್ನು ಒದಗಿಸುವುದು, ಅಗತ್ಯ ಬೆಂಬಲ

ಸೇವೆಗಳೊಂದಿಗೆ, ಬಡತನದ ಚಕ್ರವನ್ನು ಮುರಿಯಲು ಸಹಾಯ ಮಾಡುತ್ತದೆ ಮತ್ತು ಹೆಚ್ಚು ನ್ಯಾಯಯುತ ಮತ್ತು ಸಮೃದ್ಧ ಸಮಾಜಕ್ಕೆ ದಾರಿ ಮಾಡಿಕೊಡುತ್ತದೆ.

ಮಕ್ಕಳು ಬಡತನದಿಂದ ಎದುರಿಸುವ ಸವಾಲು ಮತ್ತು ಅದಕ್ಕೆ ಸರ್ಕಾರದಿಂದ ಇರುವ ಸವಲತ್ತು ಇವುಗಳ ಕುರಿತು ಕೆಲವು ಪ್ರಕರಣಗಳನ್ನು ಉದಾಹರಣೆಯಾಗಿ ಈ ಕೆಳಗೆ ಪ್ರತಿ ಗುರಿಗೂ ನೀಡಲಾಗಿದೆ. ಇವುಗಳನ್ನು ಚರ್ಚೆಗೆ, ಹೆಚ್ಚಿನ ಸ್ಪಷ್ಟತೆಗೆ ಬಳಸಬಹುದು.

**ಘಟನೆ –01.**

ಶಾಲೆಯಲ್ಲಿನ ಓರ್ವ ವಿದ್ಯಾರ್ಥಿನಿ ಶಾಲೆಗೆ ಬರುವುದನ್ನು ನಿಲ್ಲಿಸಿದ್ದಾಳೆ. ಅವಳ ಸಣ್ಣ ತಮ್ಮ ಮೂರು ತಿಂಗಳ ಹಿಂದೆ ಸತ್ತು ಹೋದನಂತೆ. ಅವಳ ಅಕ್ಕ ಕೂಡಾ ಶಾಲೆ ಬಿಟ್ಟು ಕೆಲಸಕ್ಕೆ ಹೊರಟಿದ್ದಾಳೆ. ಅವರ ಕುಟುಂಬಕ್ಕೆ ಇರಲು ಮನೆಯಿಲ್ಲ, ಅವರ ತಂದೆ – ತಾಯಿಗೆ ಕೂಲಿ ಸಿಗುತ್ತಿಲ್ಲ. ಅವರು ಊರು ಬಿಟ್ಟು ಕೆಲಸ ಹುಡುಕಿಕೊಂಡು ನಗರಕ್ಕೆ ಹೊರಟಿದ್ದಾರಂತೆ.

**ಘಟನೆ–02**

ವಿದ್ಯಾರ್ಥಿಯೊಬ್ಬನ ಮನೆಯವರಿಗೆ ಬಹಳ ಕಷ್ಟವಿತ್ತು. ಅವರ ದುಡಿಮೆ ಯಾವುದಕ್ಕೂ ಸಾಕಾಗುತ್ತಿರಲಿಲ್ಲ. ಆಗಲೇ ಅವರಿಗೆ ಮಹಾತ್ಮಾಗಾಂಧಿ ರಾಷ್ಟೀಯ ಉದ್ಯೋಗ ಖಾತರಿ ಯೋಜನೆ ಬಗ್ಗೆ ಗ್ರಾಮ ಪಂಚಾಯಿತಿಯವರು ಹೇಳಿದರು. ಅವನ ಮನೆಯ ಎಲ್ಲ ವಯಸ್ಕರು ಅದರಲ್ಲಿ ನೋಂದಾಯಿಸಿಕೊಂಡರು. ಈಗ ಅವರಿಗೆ ನಿಶ್ಚಿತ ಕೂಲಿ ಸಿಗುತ್ತಿದೆ. ಅವನು ನಗುಮುಖದಿಂದ ಶಾಲೆಗೆ ಬರುತ್ತಿದ್ದಾನೆ.

ಕುಟುಂಬಗಳಲ್ಲಿನ ಬಡತನದಿಂದಾಗಿ ಎಲ್ಲಿಯೂ ಯಾರಿಗೂ, ಅದರಲ್ಲೂ ಯಾವುದೇ ಮಗುವಿಗೆ ತೊಂದರೆ ಆಗಬಾರದು. ಬಡತನದಲ್ಲಿರುವ ಜನರಿಗೆ ಎಲ್ಲ ರೀತಿಯ ಸಹಾಯಗಳು ಸರ್ಕಾರದಿಂದ ಮತ್ತು ಸಮಾಜದಿಂದ ಸಿಗಬೇಕು. ಜನ ಬಡತನದಿಂದ ಹೊರಗೆ ಬರಲು ಎಲ್ಲರೂ ನೆರವಾಗಬೇಕು. ಬಡತನದ ಕುಟುಂಬಗಳಲ್ಲಿನ ಮಕ್ಕಳಿಗೆ ಶಿಕ್ಷಣ, ಆರೋಗ್ಯದ ಸೌಲಭ್ಯಗಳು, ಮಾಹಿತಿ ದೊರೆಯುವಂತಹ ವ್ಯವಸ್ಥೆ ಇರಬೇಕು.

**ಬಡತನ ಮುಕ್ತವನ್ನಾಗಿ ಮಾಡಲು ಸರ್ಕಾರಗಳು ಕೈಗೊಳ್ಳಲು ಒಪ್ಪಿರುವ ಕ್ರಮಗಳು:**

- ಯಾವ ಮಗುವೂ ತನ್ನ ಪೋಷಕರಿಗೆ ಉದ್ಯೋಗ ಇಲ್ಲ ಅಥವಾ ಆದಾಯ ಇಲ್ಲ ಎಂಬ ಕಾರಣದಿಂದ ತೊಂದರೆಗೆ ಈಡಾಗಬಾರದು. ಪೋಷಕರಿಗೆ ಉದ್ಯೋಗ ಮತ್ತು ಸಂಪಾದನೆ ಇರುವಂತೆ ಎಲ್ಲ ಹಂತದ ಸರ್ಕಾರಗಳು ಗಮನ ಕೊಡಲೇಬೇಕು, ಎಲ್ಲರಿಗೂ ಆರೋಗ್ಯ ಸೇವೆ ದೊರೆಯಲೇಬೇಕು. ಇದನ್ನೇ ಸಾಮಾಜಿಕ ರಕ್ಷಣೆ ಎನ್ನುವುದು. ಇದರ ಫಲ ಪ್ರತಿಯೊಂದು ಬಡಕುಟುಂಬಕ್ಕೂ, ವಿವಿಧ ಕಾರಣಗಳಿಂದ ತೊಂದರೆಗೆ ಈಡಾಗಬಹುದಾದ ಕುಟುಂಬಗಳಿಗೆ ಸಿಗಲೇಬೇಕು. ಎಂತಹದೇ ತಾರತಮ್ಯಕ್ಕೆ ಕುಟುಂಬಗಳು ಈಡಾಗಬಾರದು ಮತ್ತು ಅವರ ಮಕ್ಕಳಿಗೆ ತೊಂದರೆ ಆಗಬಾರದು.
- ಸಾಮಾಜಿಕವಾಗಿ ಎಲ್ಲರಿಗೂ ನೆರವಾಗುವಂತಹ ನೀತಿ, ನಿಯಮ, ಕಾನೂನುಗಳು ಜಾರಿಯಾಗುವಂತೆ ಸರ್ಕಾರಗಳು ತಮ್ಮ ಸಂಪನ್ಮೂಲಗಳನ್ನು ಹೂಡಬೇಕು. ಗ್ರಾಮೀಣ ಪ್ರದೇಶವಾಗಲೀ ನಗರವಾಗಲೀ ಅಥವಾ ಕಾಡು, ಕಣಿವೆ, ಬೆಟ್ಟ ಪ್ರದೇಶಗಳಾಗಲೀ, ಬಡವರೆಂದು ಹೇಳಿ ಜನರಿಗೆ ಸೇವೆಗಳು ಸಿಗದಿರುವಂತಹ ಪರಿಸ್ಥಿತಿ ಉಂಟಾಗಬಾರದು. ಜನರಿಗೆ ಉದ್ಯೋಗ ಖಾತರಿ, ಭೂಮಿ, ತಂತ್ರಜ್ಞಾನಗಳು ಸಿಗುವಂತಾಗಿ, ಸ್ವಂತ ಉದ್ಯೋಗ ಮಾಡಬಯಸುವವರಿಗೆ ಸಾಲ ಸೌಲಭ್ಯ, ಅನುದಾನಗಳನ್ನು ಕಲ್ಪಿಸಲಾಗುವುದು.
- ಇಂದಿನ ದಿನಗಳಲ್ಲಿ ಹವಾಮಾನ ಬದಲಾವಣೆಯಿಂದಾಗಿ ಮಳೆ ಪ್ರಮಾಣದಲ್ಲಿ ವಿಪರೀತವಾದ ಏರಿಳಿತ, ಬಿಸಿಲಿನ ಪ್ರಭಾವ, ಪ್ರವಾಹ, ಭೂಕಂಪ, ಬರ, ಪರಿಸರ ವಿನಾಶ, ಇತ್ಯಾದಿಗಳಿಂದಾಗಿ ಅನೇಕ ಕುಟುಂಬಗಳಿಗೆ ಆರ್ಥಿಕ, ಸಾಮಾಜಿಕ ತೊಂದರೆ ಉಂಟಾಗುತ್ತಿದೆ. ಅಂತಹ ಕುಟುಂಬಗಳಿಗೆ ಮತ್ತು ಮಕ್ಕಳಿಗೆ ಈ ಪ್ರತಿಕೂಲ ಪರಿಸ್ಥಿತಿಯನ್ನು ಎದುರಿಸಲು ಸರ್ಕಾರದ ನೆರವು ನೀಡಲಾಗುವುದು.

**ನಾವೇನು ಮಾಡಬಹುದು?**

ಬಡತನದಿಂದಾಗಿ ಮಕ್ಕಳು ಶಾಲೆ ಬಿಡುವುದು ಅಥವಾ ದುಡಿಮೆಗೆ ಹೋಗಿರುವ ಪ್ರಸಂಗಗಳು ಕಂಡುಬಂದರೆ, ಅದನ್ನು ವಿವಿಧ ಭಾಗೀದಾರರು ಅನುಸರಿಸುವ ಕ್ರಮಗಳ ಪಟ್ಟಿಮಾಡಿರಿ.

**2. ಹಸಿವು ಮುಕ್ತ:**

ಸುಸ್ಥಿರ ಅಭಿವೃದ್ಧಿ ಗುರಿ (SDG2) ಹಸಿವನ್ನು ಕೊನೆಗೊಳಿಸುವುದು, ಆಹಾರ ಭದ್ರತೆಯನ್ನು ಸಾಧಿಸುವುದು, ಪೌಷ್ಟಿಕಾಂಶವನ್ನು ಸುಧಾರಿಸುವುದು ಮತ್ತು ಸುಸ್ಥಿರ ಕೃಷಿಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಮಕ್ಕಳ ದೈಹಿಕ ಬೆಳವಣಿಗೆ, ಅರಿವಿನ ಬೆಳವಣಿಗೆ ಮತ್ತು ಒಟ್ಟಾರೆ ಯೋಗಕ್ಷೇಮಕ್ಕೆ ಅತ್ಯಗತ್ಯವಾಗಿರುವ ಪೌಷ್ಟಿಕಾಂಶದ ಊಟ ಪಡೆಯಲು ಶಾಲೆಗಳು ಅವಶ್ಯಕವಾಗಿರುವುದರಿಂದ ಶಾಲಾ ಶಿಕ್ಷಣವು ಈ ಗುರಿಯೊಂದಿಗೆ ನೇರವಾಗಿ ಸಂಪರ್ಕ ಹೊಂದಿದೆ. ಪರಿಣಾಮಕಾರಿ ಕಲಿಕೆಗೆ ಸಾಕಷ್ಟು ಪೌಷ್ಟಿಕಾಂಶವು ಮೂಲಭೂತ ಅವಶ್ಯಕತೆಯಾಗಿದೆ. ವಿದ್ಯಾರ್ಥಿಗಳು ಉತ್ತಮ ಪೋಷಣೆಯನ್ನು ಪಡೆದಾಗ, ಅವರು ಹೆಚ್ಚು ಗಮನಹರಿಸುತ್ತಾರೆ. ಉತ್ತಮ ಹಾಜರಾತಿಯನ್ನು ಹೊಂದಿರುತ್ತಾರೆ ಮತ್ತು ಶೈಕ್ಷಣಿಕವಾಗಿ ಉತ್ತಮವಾಗಿ ಕಾರ್ಯನಿರ್ವಹಿಸಬಹುದು.

ಶಾಲಾ ಶಿಕ್ಷಣದ ಸಂದರ್ಭದಲ್ಲಿ ಹಸಿವನ್ನು ಕೊನೆಗೊಳಿಸುವುದು ಎಂದರೆ ಎಲ್ಲಾ ವಿದ್ಯಾರ್ಥಿಗಳು ತಮ್ಮ ಕಲಿಕೆ ಮತ್ತು ಅಭಿವೃದ್ಧಿಯನ್ನು ಬೆಂಬಲಿಸಲು ಅಗತ್ಯವಾದ ಪೋಷಣೆಯನ್ನು ಪಡೆಯುವುದನ್ನು ಖಚಿತಪಡಿಸಿಕೊಳ್ಳುವುದು. ಇದು ಆಹಾರದ ಅಭದ್ರತೆ ಮತ್ತು ಅಪೌಷ್ಟಿಕತೆಯನ್ನು ಎದುರಿಸಲು ವಿದ್ಯಾರ್ಥಿಗಳಿಗೆ, ವಿಶೇಷವಾಗಿ ಅನನುಕೂಲಕರ ಹಿನ್ನೆಲೆಯಿಂದ ಬಂದವರಿಗೆ ನಿಯಮಿತ, ಆರೋಗ್ಯಕರ ಊಟವನ್ನು ಒದಗಿಸುವುದನ್ನು ಒಳಗೊಂಡಿರುತ್ತದೆ. ಆರೋಗ್ಯಕರ ಆಹಾರ ಪದ್ಧತಿಯನ್ನು ಉತ್ತೇಜಿಸುವಲ್ಲಿ ಮತ್ತು ಪೌಷ್ಟಿಕಾಂಶ ಮತ್ತು ಆಹಾರ ಭದ್ರತೆಯ ಬಗ್ಗೆ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವಲ್ಲಿ ಶಾಲೆಗಳು ಪ್ರಮುಖ ಪಾತ್ರವಹಿಸುತ್ತವೆ.

ಬಡತನ ಮುಕ್ತ ಗುರಿಯಲ್ಲಿ ಉಲ್ಲೇಖಿಸಿದಂತೆ, ಶಾಲಾ ಶಿಕ್ಷಣದಲ್ಲಿ ಹಸಿವಿನಿಂದ ಮಕ್ಕಳು ಕಲಿಕೆಯಲ್ಲಿ ಸರಿಯಾಗಿ ಪಾಲ್ಗೊಳ್ಳಲು ಸಾಧ್ಯವಾಗುವುದಿಲ್ಲ. ಹಸಿವಿಗೂ ಮತ್ತು ಮಿದುಳಿಗೆ ನೇರ ಸಂಬಂಧವಿದ್ದು, ಪೌಷ್ಟಿಕ ಆಹಾರದ ಕೊರತೆಯಿಂದ ಮಿದುಳಿನ ಬೆಳವಣಿಗೆ ಮತ್ತು ಅದರ ಕಾರ್ಯನಿರ್ವಹಿಸುವಿಕೆ ಸಮರ್ಪಕವಾಗಿ ಆಗುವುದಿಲ್ಲ. ಆದ್ದರಿಂದ ಶಾಲಾ ಶಿಕ್ಷಣದಲ್ಲಿ ಮಕ್ಕಳು ಹಸಿವಿನಿಂದ ಬಳಲದೆ ಮತ್ತು ಹಸಿವು ಅವರ ಶಿಕ್ಷಣವನ್ನು ಕುಂಠಿತಗೊಳಿಸಬಾರದೆಂದು ಕ್ಷೀರಭಾಗ್ಯದ ಮೂಲಕ ಮಕ್ಕಳಿಗೆ ಹಾಲು ಮತ್ತು ಮೊಟ್ಟೆಯನ್ನು ಒದಗಿಸಲಾಗುತ್ತದೆ. ಜೊತೆಗೆ ಮೊಟ್ಟೆತಿನ್ನದಿರುವ ಮಕ್ಕಳಿಗೆ ಬಾಳೆಹಣ್ಣು/ ಶೇಂಗಾಚಿಕ್ಕಿಯನ್ನು ಒದಗಿಸಲಾಗುತ್ತಿದೆ. ಜೊತೆಗೆ ಮಧ್ಯಾಹ್ನದ ಬಿಸಿಊಟದ ವ್ಯವಸ್ಥೆಯೂ ಕೂಡ ಹಸಿವಿನಿಂದ ಮುಕ್ತಗೊಳಿಸಲು ಪೂರಕವಾಗಿ ಕಾರ್ಯನಿರ್ವಹಿಸುತ್ತಿದೆ. ಜೊತೆಗೆ ಹಿರಿಯ/ಪ್ರೌಢ ಮಕ್ಕಳಿಗೆ ಕೌಶಲಗಳ ಅಭಿವೃದ್ಧಿಗೆ ಎಸ್.ಯು.ಪಿ.ಡಬ್ಲೂ ವಿಶೇಷ ತರಗತಿಗಳನ್ನು ನಡೆಸಿ ಅವರು ತಮ್ಮ ಜೀವನದಲ್ಲಿ ಉತ್ಪಾದಕರಾಗಲು ಮತ್ತು ಆರ್ಥಿಕವಾಗಿ ಸಬಲರಾಗಲು ಉತ್ತೇಜಿಸಲಾಗುತ್ತದೆ. ಜೊತೆಗೆ ವಸತಿಸಹಿತ ಶಾಲೆಗಳನ್ನು ನಡೆಸುವ ಮೂಲಕ ಮಕ್ಕಳು ಹಸಿವಿನಿಂದ ಬಳಲದೇ ಅವರು ತಮ್ಮ ಶಿಕ್ಷಣವನ್ನು ಮುಂದುವರಿಸಿಕೊಂಡು ಹೋಗಲು ಸಾಧ್ಯವಾಗುವುದು.

**ಶಾಲೆಗಳಲ್ಲಿ ಹಸಿವನ್ನು ಕೊನೆಗೊಳಿಸುವ ಕಾರ್ಯತಂತ್ರಗಳು:**

1. **ಶಾಲಾ ಊಟದ ಕಾರ್ಯಕ್ರಮಗಳು:** ವಿಶೇಷವಾಗಿ ಆಹಾರ ಅಭದ್ರತೆ ಪ್ರಚಲಿತವಿರುವ ಪ್ರದೇಶಗಳಲ್ಲಿ ವಿದ್ಯಾರ್ಥಿಗಳಿಗೆ ಪೌಷ್ಟಿಕ ಉಪಾಹಾರ ಮತ್ತು ಮಧ್ಯಾಹ್ನದ ಊಟವನ್ನು ಒದಗಿಸುವ ಶಾಲಾ ಊಟದ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಅಥವಾ ಬಲಪಡಿಸಿ. ಒದಗಿಸಿದ ಊಟವು ಆಹಾರದ ಮಾರ್ಗಸೂಚಿಗಳನ್ನು ಪೂರೈಸುತ್ತದೆ ಮತ್ತು ಪ್ರೋಟೀನ್, ಕಾರ್ಬೋಹೈಡ್ರೇಟ್, ವಿಟಮಿನ್ ಮತ್ತು ಖನಿಜಗಳಂತಹ ಅಗತ್ಯ ಪೋಷಕಾಂಶಗಳ ಸಮತೋಲನವನ್ನು ಒಳಗೊಂಡಿರುತ್ತದೆ ಎಂದು ಖಚಿತಪಡಿಸಿಕೊಳ್ಳುವುದು.
2. **ಆಹಾರ ಭದ್ರತೆ ಶಿಕ್ಷಣ:** ಶಾಲಾ ಪಠ್ಯಕ್ರಮದಲ್ಲಿ ಆಹಾರ ಭದ್ರತೆ, ಪೋಷಣೆ ಮತ್ತು ಸುಸ್ಥಿರ ಕೃಷಿಯ ಪಾಠಗಳನ್ನು ಸಂಯೋಜಿಸಿ. ಆರೋಗ್ಯಕರ ಆಹಾರದ ಪ್ರಾಮುಖ್ಯತೆ, ಆಹಾರ ಎಲ್ಲಿಂದ ಬರುತ್ತದೆ ಮತ್ತು ತಮ್ಮದೇ ಆದ ಆಹಾರವನ್ನು ಹೇಗೆ ಬೆಳೆಸುವುದು ಎಂಬುದರ ಕುರಿತು ವಿದ್ಯಾರ್ಥಿಗಳಿಗೆ ಕಲಿಸಿ, ತೋಟಗಾರಿಕೆ ಯೋಜನೆಗಳಂತಹ

ಪ್ರಾಯೋಗಿಕ ಚಟುವಟಿಕೆಗಳನ್ನು ಸೇರಿಸಿ, ಅಲ್ಲಿ ವಿದ್ಯಾರ್ಥಿಗಳು ತರಕಾರಿಗಳನ್ನು ಬೆಳೆಯಲು ಕಲಿಯಬಹುದು ಮತ್ತು ಆಹಾರ ಉತ್ಪಾದನೆಯ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಬಹುದು.

3. **ಸಮುದಾಯ ಮತ್ತು ಸರ್ಕಾರಿ ಸಹಭಾಗಿತ್ವ :** ಶಾಲಾ ಊಟದ ಕಾರ್ಯಕ್ರಮಗಳಿಗೆ ನಿಧಿ ಮತ್ತು ಸಂಪನ್ಮೂಲಗಳನ್ನು ಪಡೆಯಲು ಸ್ಥಳೀಯ ಸರ್ಕಾರಗಳು, NGOಗಳು ಮತ್ತು ಸಮುದಾಯ ಸಂಸ್ಥೆಗಳೊಂದಿಗೆ ಪಾಲುದಾರಿಕೆ.

   ಈ ಪಾಲುದಾರಿಕೆಗಳು ಶಾಲಾ ಸಮಯದ ಹೊರಗೆ ಆಹಾರದ ಅಭದ್ರತೆಯನ್ನು ಎದುರಿಸುತ್ತಿರುವ ಕುಟುಂಬಗಳಿಗೆ ಬೆಂಬಲವನ್ನು ನೀಡಬಹುದು. ಸಮುದಾಯದಲ್ಲಿ ಸುಸ್ಥಿರ ಕೃಷಿಯನ್ನು ಬೆಂಬಲಿಸುವ, ಶಾಲೆಯ ಊಟಕ್ಕೆ ತಾಜಾ, ಸ್ಥಳೀಯವಾಗಿ ಬೆಳೆದ ಉತ್ಪನ್ನಗಳನ್ನು ಮೂಲವಾಗಿಸಲು ಸ್ಥಳೀಯ ರೈತರು ಮತ್ತು ಆಹಾರ ಪೂರೈಕೆದಾರರೊಂದಿಗೆ ಸಹಕರಿಸುವುದು.

4. **ಪೌಷ್ಟಿಕ ಶಿಕ್ಷಣ:** ಸಮತೋಲಿತ ಆಹಾರದ ಪ್ರಾಮುಖ್ಯತೆಯ ಅರಿವನ್ನು ಹೆಚ್ಚಿಸಲು ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರಿಗೆ ಪೌಷ್ಟಿಕಾಂಶದ ಶಿಕ್ಷಣವನ್ನು ಒದಗಿಸಿ. ಆರೋಗ್ಯಕರ ಆಹಾರದ ಆಯ್ಕೆಗಳನ್ನು ಹೇಗೆ ಮಾಡಬೇಕೆಂದು ವಿದ್ಯಾರ್ಥಿಗಳಿಗೆ ಕಲಿಸಿ ಮತ್ತು ಅವರ ಆರೋಗ್ಯ ಮತ್ತು ಶೈಕ್ಷಣಿಕ ಕಾರ್ಯಕ್ಷಮತೆಯ ಮೇಲೆ ಪೌಷ್ಟಿಕಾಂಶದ ಪ್ರಭಾವವನ್ನು ಅರ್ಥಮಾಡಿಕೊಳ್ಳುವುದರ ಜೊತೆಗೆ ಮನೆಯಲ್ಲಿ ಆರೋಗ್ಯಕರ, ಕೈಗೆಟುಕುವ ಊಟವನ್ನು ಹೇಗೆ ತಯಾರಿಸಬೇಕೆಂದು ವಿದ್ಯಾರ್ಥಿಗಳು ಮತ್ತು ಅವರ ಕುಟುಂಬಗಳು ಕಲಿಯಬಹುದಾದ ಕಾರ್ಯಾಗಾರಗಳು ಅಥವಾ ಅಡುಗೆ ತರಗತಿಗಳನ್ನು ಆಯೋಜಿಸುವುದು.

5. **ಅಪೌಷ್ಠಿಕತೆಯನ್ನು ಮೇಲ್ವಿಚಾರಣೆ ಮಾಡುವುದು ಮತ್ತು ಪರಿಹರಿಸುವುದು :** ಆರೋಗ್ಯ ತಪಾಸಣೆ ಮತ್ತು ಸೂಕ್ಷ್ಮ ಗಮನಿಸುವಿಕೆ ಮೂಲಕ ವಿದ್ಯಾರ್ಥಿಗಳ ಪೌಷ್ಟಿಕಾಂಶದ ಸ್ಥಿತಿಯನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಿ, ಅಪೌಷ್ಟಿಕತೆಯ ಅಪಾಯದಲ್ಲಿರುವ ವಿದ್ಯಾರ್ಥಿಗಳನ್ನು ಗುರುತಿಸಿ ಮತ್ತು ಅಗತ್ಯವಿರುವಲ್ಲಿ ಹೆಚ್ಚುವರಿ ಬೆಂಬಲವನ್ನು ಒದಗಿಸಿ, ಪೂರಕ ಅಥವಾ ಬಲವರ್ಧಿತ ಆಹಾರವನ್ನು ಒದಗಿಸುವಂತಹ ಅಪೌಷ್ಠಿಕತೆ ಹೊಂದಿರುವ ವಿದ್ಯಾರ್ಥಿಗಳಿಗೆ ಮಧ್ಯಸ್ಥಿಕೆ ಕಾರ್ಯಕ್ರಮಗಳನ್ನು ಜಾರಿಗೊಳಿಸುವುದು.

6. **ಬೆಳಗಿನ ಉಪಾಹಾರ ಕಾರ್ಯಕ್ರಮಗಳು:** ಶಾಲೆಗೆ ಬರುವ ಮೊದಲು ಊಟ ಮಾಡದೇ ಬರುವ ವಿದ್ಯಾರ್ಥಿಗಳಿಗೆ ಉಪಾಹಾರ ಒದಗಿಸಿ ಎಲ್ಲಾ ವಿದ್ಯಾರ್ಥಿಗಳು ಕಲಿಕೆಗೆ ಅಗತ್ಯವಾದ ಶಕ್ತಿಯೊಂದಿಗೆ ತಮ್ಮ ದಿನವನ್ನು ಪ್ರಾರಂಭಿಸುತ್ತಾರೆ ಎಂದು ಖಚಿತಪಡಿಸಿಕೊಳ್ಳಲು ಇದು ನಿರ್ಣಾಯಕವಾಗಿದೆ. ತರಗತಿಗಳು ಪ್ರಾರಂಭವಾಗುವ ಮೊದಲು ವಿದ್ಯಾರ್ಥಿಗಳಿಗೆ ಸುಲಭವಾಗಿ ಕೊಡಬಹುದಾದ ಆರೋಗ್ಯಕರ ಉಪಾಹಾರವನ್ನು ಒದಗಿಸುವುದು.

7. **ಆಹಾರ ಮತ್ತು ಪೋಷಣೆ ನೀತಿಗಳು :** ಶಾಲಾ ಕ್ಯಾಂಟೀನ್‌ಗಳು, ವಿತರಣಾ ಯಂತ್ರಗಳು ಮತ್ತು ಶಾಲಾ ಕಾರ್ಯಕ್ರಮಗಳ ಸಮಯದಲ್ಲಿ ಲಭ್ಯವಿರುವ ಆಹಾರದ ಪ್ರಕಾರಗಳಿಗೆ ಮಾನದಂಡಗಳನ್ನು ನಿಗದಿಪಡಿಸುವ ಶಾಲಾ ಆಹಾರ ಮತ್ತು ಪೌಷ್ಟಿಕಾಂಶ ನೀತಿಗಳನ್ನು ಅಭಿವೃದ್ಧಿಪಡಿಸಿ ಮತ್ತು ಜಾರಿಗೊಳಿಸುವುದು. ಹಣ್ಣುಗಳು, ತರಕಾರಿಗಳು ಮತ್ತು ನೀರಿನಂತಹ ಆರೋಗ್ಯಕರ ಪರ್ಯಾಯಗಳನ್ನು ಉತ್ತೇಜಿಸುವ ಮೂಲಕ ಅನಾರೋಗ್ಯಕರ ತಿಂಡಿಗಳು ಮತ್ತು ಸಕ್ಕರೆ ಪಾನೀಯಗಳ ಲಭ್ಯತೆಯನ್ನು ಮಿತಿಗೊಳಿಸುವುದು.

8. **ಪೋಷಕರು ಮತ್ತು ಸಮುದಾಯವನ್ನು ತೊಡಗಿಸಿಕೊಳ್ಳುವುದು:** ಹಸಿವನ್ನು ಪರಿಹರಿಸಲು ಮತ್ತು ಪೋಷಣೆಯನ್ನು ಉತ್ತೇಜಿಸುವ ಪ್ರಯತ್ನಗಳಲ್ಲಿ ಪೋಷಕರು ಮತ್ತು ವಿಶಾಲ ಸಮುದಾಯವನ್ನು ತೊಡಗಿಸಿಕೊಳ್ಳುವುದು. ಸ್ಥಳೀಯ ಆಹಾರ ಅಭದ್ರತೆಯ ಸಮಸ್ಯೆಗಳನ್ನು ಪರಿಹರಿಸುವದು. ಶೈಕ್ಷಣಿಕ ಅವಧಿಗಳನ್ನು ಆಯೋಜಿಸಿ, ವಿದ್ಯಾರ್ಥಿಗಳ ಅಗತ್ಯತೆಗಳು ಮತ್ತು ಆದ್ಯತೆಗಳನ್ನು ಪೂರೈಸಲಾಗಿದೆಯೆ? ಎಂದು ಖಚಿತಪಡಿಸಿಕೊಳ್ಳಲು ಶಾಲಾ ಊಟ ಯೋಜನೆ ಸಮಿತಿಗಳಲ್ಲಿ ಭಾಗವಹಿಸಲು ಪೋಷಕರನ್ನು ಪ್ರೋತ್ಸಾಹಿಸುವುದು.

9. **ಆಹಾರ ತ್ಯಾಜ್ಯ ಕಡಿತ:** ಆಹಾರತ್ಯಾಜ್ಯವನ್ನು ಕಡಿಮೆ ಮಾಡುವ ಪ್ರಾಮುಖ್ಯತೆಯ ಬಗ್ಗೆ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿ ಮತ್ತು ಶಾಲಾ ಆವರಣದಲ್ಲಿ ತ್ಯಾಜ್ಯವನ್ನು ಕಡಿಮೆ ಮಾಡುವ ಅಭ್ಯಾಸಗಳನ್ನು ಅಳವಡಿಸಿ. ಉದಾಹರಣೆಗೆ ಉಳಿಕೆ ಆಹಾರದಿಂದ ಗೊಬ್ಬರ ಮಾಡುವುದು. ಆಹಾರತ್ಯಾಜ್ಯದ ಬಗ್ಗೆ ಜಾಗೃತಿ ಮೂಡಿಸಲು ವಿದ್ಯಾರ್ಥಿಗಳನ್ನು ಶಿಬಿರಗಳಲ್ಲಿ ತೊಡಗಿಸಿಕೊಳ್ಳುವುದು ಮತ್ತು ಶಾಲೆಯಲ್ಲಿ ಹಾಗೂ ಮನೆಯಲ್ಲಿ ಕ್ರಮ ಕೈಗೊಳ್ಳಲು ಪ್ರೋತ್ಸಾಹಿಸುವುದು.

10. **ಸುರಕ್ಷಿತ ಕುಡಿಯುವ ನೀರಿನ ಸೌಕರ್ಯ:** ದಿನವಿಡೀ ಶಾಲಾ ವಿದ್ಯಾರ್ಥಿಗಳಿಗೆ ಶುದ್ಧ, ಸುರಕ್ಷಿತ ಕುಡಿಯುವ ನೀರಿನಸೌಕರ್ಯ ಇದೆ ಎಂಬುದನ್ನು ಖಚಿತಪಡಿಸಿಕೊಳ್ಳುವುದು. ಏಕಾಗ್ರತೆ ಮತ್ತು ವಿದ್ಯಾಭ್ಯಾಸಕ್ಕೆ ಜಲಸಂಚಯನ ಅತ್ಯಗತ್ಯ ಮತ್ತು ನೀರಿನಸೌಕರ್ಯವು ಶಾಲೆಗಳಲ್ಲಿ ಸುಲಭವಾಗಿ ಲಭ್ಯವಿರಬೇಕು. ಕೃತಕ ತಂಪು ಪಾನೀಯಗಳ

11. ಬದಲಾಗಿ ನೀರಿನ ಬಳಕೆಯನ್ನು ಉತ್ತೇಜಿಸಿ ಮತ್ತು ವಿದ್ಯಾರ್ಥಿಗಳಿಗೆ ತಮ್ಮ ಆರೋಗ್ಯ ಮತ್ತು ಕಲಿಕೆಗಾಗಿ ಜಲೀಕರಣದ ಪ್ರಾಮುಖ್ಯತೆಯ ಕುರಿತು ಶಿಕ್ಷಣ ನೀಡುವುದು.

**ಘಟನೆ–01.**

ಕುಡಿಯುವ ನೀರು ತರಲು ಸುಮಾರು ಮೂರು ಕಿಲೋಮೀಟರ್ ದಿನಾ ನಡೆಯುವ ತಾಯವ್ವ ಮಕ್ಕಳ ಹೊಟ್ಟೆತುಂಬಿಸಲು ಬಹಳ ಕಷ್ಟ ಪಡುತ್ತಾಳೆ. ಹುಟ್ಟಿದ ಆರು ತಿಂಗಳವರೆಗೆ ಮಕ್ಕಳಿಗೆ ತಾಯಿಯ ಹಾಲು ಕುಡಿಸಲೇಬೇಕು ಎಂದು ಆರೋಗ್ಯ ಕಾರ್ಯಕರ್ತೆ ಹೇಳಿದ್ದನ್ನು ತಾಯವ್ವ ಅವಳಿಗೇ ತಿನ್ನಲು ಸರಿಯಾಗಿರದಿದ್ದರೂ ಪಾಲಿಸಿದ್ದಾಳೆ. ಅವಳ ಮೂರು ಮಕ್ಕಳಿಗೆ ಈಗ 2, 4 ಮತ್ತು 6 ವರ್ಷ. ಅವರಾರೂ ಸರಿಯಾಗಿ ಬೆಳೆದಿಲ್ಲ, ಎತ್ತರವೂ ಇಲ್ಲ, ತೂಕವೂ ಇಲ್ಲ. ಮಕ್ಕಳಿಗೆ ರಕ್ತಹೀನತೆ ಎಂದು ಆಶಾ ಅಕ್ಕ ಹೇಳಿದ್ದಾರೆ. ಅವರ ಹಳ್ಳಿಯಲ್ಲಿ ತುಂಬಾ ಮಕ್ಕಳಿಗೆ ಹೀಗೆ ಆಗಿದ್ದು, ಅಂಗನವಾಡಿ ಕಾರ್ಯಕರ್ತೆ ಆಗಾಗ್ಗೆ ಮನೆಮನೆಗೆ ಬಂದು ಬೇಳೆ, ಮೊಟ್ಟೆಕೊಡುತ್ತಾರೆ. ಮಕ್ಕಳನ್ನು ಅಂಗನವಾಡಿಗೆ ಕಳಿಸಲು ಹೇಳುತ್ತಾಳೆ. ಅಲ್ಲಿ ಮಕ್ಕಳಿಗೆ ಮೊಟ್ಟೆ, ಹಾಲು ಮತ್ತು ತರಕಾರಿಯಿರುವ ಪೌಷ್ಟಿಕಾಂಶವಿರುವ ಆಹಾರ ಪ್ರತಿದಿನ ಕೊಡುತ್ತಾರಂತೆ. ಎಲ್ಲ ಜನರಿಗೆ ಮಕ್ಕಳು, ಹದಿಹರೆಯದವರು,ಗರ್ಭಿಣಿಯರು, ಮಕ್ಕಳಿಗೆ ಹಾಲುಣಿಸುತ್ತಿರುವ ತಾಯಂದಿರರು, ದುಡಿಮೆಯಲ್ಲಿರುವ ವಯಸ್ಕರು ಮತ್ತು ವೃದ್ಧರು, ರೋಗಿಗಳು ಎಲ್ಲರಿಗೂ ಕಾಲಕಾಲಕ್ಕೆ ಸರಿಯಾದ ಆಹಾರ ದೊರಕಲೇಬೇಕು. ಆಹಾರ ಪೌಷ್ಠಿಕಾಂಶಗಳನ್ನು ಹೊಂದಿರಬೇಕು. ದೇಹಕ್ಕೆ ಬೇಕಾದ ಶಕ್ತಿ ಕೊಡುವಂತಿರಬೇಕು. ಬೆಳವಣಿಗೆಗೆ ಸಹಾಯಮಾಡಬೇಕು. ಹೀಗಾಗಿ, ಎಲ್ಲಜನರಿಗೆ ಆಹಾರ ದೊರಕಲು ಸುಸ್ಥಿರ ಕೃಷಿಗೆ, ಹೈನುಗಾರಿಕೆ, ಮೀನುಗಾರಿಕೆಗೆ ಪ್ರೋತ್ಸಾಹ ಕೊಡಬೇಕು. ಪ್ರಾಣಿ, ಪಕ್ಷಿಗಳು ಮತ್ತು ಸಸ್ಯಗಳ ಪ್ರಭೇದಗಳನ್ನು ಉಳಿಸಿಕೊಳ್ಳಬೇಕು. ಇದಕ್ಕಾಗಿ ನೀರು, ಕಾಡು, ಬೆಟ್ಟ ಮತ್ತು ಭೂಮಿಯನ್ನೂ ರಕ್ಷಿಸಬೇಕು.

**ಹಸಿವು ಮುಕ್ತವನ್ನಾಗಿಸಲು ಸರ್ಕಾರಗಳು ಕೈಗೊಳ್ಳಲು ಒಪ್ಪಿರುವ ಕ್ರಮಗಳು:**

- ಮಕ್ಕಳು, ತಾಯಂದಿರು ಮತ್ತು ವೃದ್ಧರಿಗಾಗಿ ಸಾಮಾಜಿಕ ಕಾರ್ಯಕ್ರಮಗಳನ್ನು ಕೈಗೊಂಡು ಅವರಲ್ಲಿ ಅಪೌಷ್ಟಿಕತೆಯನ್ನು ಕಡಿಮೆಗೊಳಿಸಲಾಗುವುದು. ವರ್ಷದುದ್ದಕ್ಕೂ ಇವರಿಗೆ ಪೌಷ್ಟಿಕತೆಯುಳ್ಳ ಸಾಕಷ್ಟು ಆಹಾರವನ್ನು ಒದಗಿಸುವುದನ್ನು ಖಾತರಿ ಮಾಡಲಾಗುವುದು.
- ಕೃಷಿ ಉತ್ಪನ್ನಗಳನ್ನು ಹೆಚ್ಚಿಸುವುದು ಮತ್ತು ಸಣ್ಣ ಕೃಷಿಕರ ಆದಾಯ ಹೆಚ್ಚಿಸುವುದು. ಅದರಲ್ಲೂ ಮಹಿಳೆಯರು ಮತ್ತು ಮೂಲ ನಿವಾಸಿಗಳ ಆದಾಯ ಹೆಚ್ಚಳಕ್ಕೆ ಗಮನ ನೀಡಲಾಗುತ್ತದೆ. ಪರಿಸರವನ್ನು ಗೌರವಿಸಿ, ಪ್ರತಿ ವಿಭಾಗದಲ್ಲಿನ ಜೀವವೈವಿಧ್ಯವನ್ನು ಕಾಪಾಡಿ, ಅಲ್ಲಿನ ಸಂಪನ್ಮೂಲಗಳ ಕೊಳ್ಳೆಯನ್ನು ತಡೆಯಲಾಗುವುದು.
- ಅಕಾಲಿಕ ಮಳೆ, ಪ್ರವಾಹ, ಬರ ಇತ್ಯಾದಿ ವೈಪರೀತ್ಯಗಳನ್ನು ಮತ್ತು ಅವುಗಳ ಕೆಟ್ಟ ಪರಿಣಾಮ ತಡೆಯಲು ಎಲ್ಲ ಪ್ರಯತ್ನಗಳನ್ನು ಮಾಡಲಾಗುವುದು.
- ನಮ್ಮ ಪರಿಸರದಲ್ಲಿರುವ ವೈವಿಧ್ಯಮಯವಾದ ಬೀಜ, ಸಸ್ಯಸಂಕುಲ, ಬೆಳೆಗಳನ್ನು ಮತ್ತು ಪ್ರಾಣಿ ವೈವಿಧ್ಯ (ಕಾಡು ಮತ್ತು ನಾಡಿನಲ್ಲಿರುವ ಪ್ರಾಣಿಗಳು)ವನ್ನು ಉಳಿಸಿ, ನಮ್ಮ ಪರಿಸರದಲ್ಲಿ ದೊರೆಯುವ ಎಲ್ಲ ಉತ್ಪನ್ನಗಳು, ಸಂಪನ್ಮೂಲಗಳನ್ನು ಕಾಳಜಿಯಿಂದ ಎಲ್ಲರಿಗೂ ದೊರೆಯುವಂತೆ ಬಳಸಲಾಗುವುದು.

– ರಾಜ್ಯದಲ್ಲಿ ಮಹಿಳೆ ಮತ್ತು ಮಕ್ಕಳ ಅಪೌಷ್ಠಿಕತೆಯ ಪ್ರಮಾಣ ಪಟ್ಟಿ ಮಾಡಿ ಚರ್ಚಿಸಿ
– ರಕ್ತಹೀನತೆಯಿಂದ ಬಳಲುತ್ತಿರುವ 6 ತಿಂಗಳಿನಿಂದ–4 ವರ್ಷ 11 ತಿಂಗಳ ಮಕ್ಕಳು
– ರಕ್ತಹೀನತೆಯಿಂದ ಬಳಲುತ್ತಿರುವ 15 ವರ್ಷ – 49 ವರ್ಷದ ಗರ್ಭಿಣಿ ಮಹಿಳೆಯರು
– ವಯಸ್ಸಿಗೆ ತಕ್ಕ ತೂಕವಿಲ್ಲದ 5 ವರ್ಷದೊಳಗಿನ ಮಕ್ಕಳು
– ತೂಕಕ್ಕೆ ತಕ್ಕ ಎತ್ತರವಿಲ್ಲದ 5 ವರ್ಷದೊಳಗಿನ ಮಕ್ಕಳು
– ವಯಸ್ಸಿಗೆ ತಕ್ಕ ಎತ್ತರವಿಲ್ಲದ 5 ವರ್ಷದೊಳಗಿನ ಮಕ್ಕಳು

**ನಾವೇನು ಮಾಡಬಹುದು?**

ಶಾಲೆಗಳಲ್ಲಿ ಅಕ್ಷರದಾಸೋಹ ಕಾರ್ಯಕ್ರಮದ ಸದುಪಯೋಗ ಮಾಡಿಕೊಳ್ಳಲು ಎಲ್ಲರಿಗೂ ತಿಳಿಸುವುದು. ಆಹಾರದ ಗುಣಮಟ್ಟ ಮತ್ತು ಪ್ರಮಾಣದ ಬಗ್ಗೆ ನಿಮ್ಮ ಅಭಿಪ್ರಾಯವನ್ನು ಶಾಲಾ ಅಭಿವೃದ್ಧಿ ಮೇಲುಸ್ತುವಾರಿ ಸಮಿತಿಗೆ ಗಮನಕ್ಕೆ ತರುವುದು.

3. **ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮ :** ಸಸ್ಟೈನೇಬಲ್ ಡೆವಲಪ್‌ಮೆಂಟ್ ಗೋಲ್ (SDG 3) ಆರೋಗ್ಯಕರ ಜೀವನವನ್ನು ಖಚಿತಪಡಿಸಿಕೊಳ್ಳಲು ಮತ್ತು ಎಲ್ಲಾ ವಯಸ್ಸಿನ ಎಲ್ಲರಿಗೂ ಯೋಗಕ್ಷೇಮವನ್ನು ಉತ್ತೇಜಿಸಲು ಕೇಂದ್ರೀಕರಿಸುತ್ತದೆ. ಆರೋಗ್ಯ ಮತ್ತು ಸ್ವಾಸ್ಥ್ಯವು ಶಾಲಾ ಶಿಕ್ಷಣದೊಂದಿಗೆ ಅಂತರ್ಗತವಾಗಿ ಸಂಪರ್ಕ ಹೊಂದಿದೆ,

ಏಕೆಂದರೆ ಆರೋಗ್ಯವಂತ ವಿದ್ಯಾರ್ಥಿಯು ತಮ್ಮ ಅಧ್ಯಯನದಲ್ಲಿ ಕಲಿಯಲು, ತೊಡಗಿಸಿಕೊಳ್ಳಲು ಮತ್ತು ಯಶಸ್ವಿಯಾಗಲು ಸಾಧ್ಯವಾಗುತ್ತದೆ. ಶಾಲೆಗಳು ಆರೋಗ್ಯ ಮತ್ತು ಕ್ಷೇಮದ ಅಭ್ಯಾಸಗಳನ್ನು ಜೀವನ ಪರ್ಯಂತ ರೂಪಿಸುವ ನಿರ್ಣಾಯಕ ಪರಿಸರಗಳಾಗಿವೆ. ಶಾಲಾ ಪಠ್ಯಕ್ರಮದಲ್ಲಿ ಆರೋಗ್ಯ ಮತ್ತು ಕ್ಷೇಮವನ್ನು ಸಂಯೋಜಿಸುವ ಮೂಲಕ, ವೈಯಕ್ತಿಕ ಮತ್ತು ಶೈಕ್ಷಣಿಕ ಯಶಸ್ಸಿಗೆ ಅಗತ್ಯವಾದ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಯೋಗಕ್ಷೇಮವನ್ನು ಅಭಿವೃದ್ಧಿಪಡಿಸಲು ಶಾಲೆಗಳು ವಿದ್ಯಾರ್ಥಿಗಳಿಗೆ ಸಹಾಯ ಮಾಡಬಹುದು. ಶಾಲಾ ಶಿಕ್ಷಣದ ಸಂದರ್ಭದಲ್ಲಿ ಆರೋಗ್ಯ ಮತ್ತು ಕ್ಷೇಮವು, ದೈಹಿಕ ಆರೋಗ್ಯ, ಮಾನಸಿಕ ಮತ್ತು ಭಾವನಾತ್ಮಕ ಯೋಗಕ್ಷೇಮ ಮತ್ತು ಆರೋಗ್ಯಕರ ಜೀವನಶೈಲಿಯ ಅಭ್ಯಾಸಗಳ ಬೆಳವಣಿಗೆಯನ್ನು ಒಳಗೊಂಡಿರುವ ಸಮಗ್ರ ವಿಧಾನವನ್ನು ಉಲ್ಲೇಖಿಸುತ್ತದೆ. ಇದು ವಿದ್ಯಾರ್ಥಿಗಳು ದೈಹಿಕವಾಗಿ ಮತ್ತು ಮಾನಸಿಕವಾಗಿ ಅಭಿವೃದ್ಧಿ ಹೊಂದುವ ವಾತಾವರಣವನ್ನು ರಚಿಸುವುದನ್ನು ಒಳಗೊಂಡಿರುತ್ತದೆ. ಅವರ ಆರೋಗ್ಯವು ಅವರ ಶೈಕ್ಷಣಿಕ ಕಾರ್ಯಕ್ಷಮತೆ ಮತ್ತು ಒಟ್ಟಾರೆ ಅಭಿವೃದ್ಧಿಗೆ ಅಡ್ಡಿಯಾಗುವುದಿಲ್ಲ ಎಂದು ಖಚಿತಪಡಿಸುತ್ತದೆ.

ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ವಿಶೇಷ ಒತ್ತನ್ನು ಕೊಟ್ಟಿರುವುದನ್ನು ಹೊಸ ಶಿಕ್ಷಣ ನೀತಿಯಲ್ಲಿ ಗಮನಿಸಬಹುದು. ಎಲ್ಲರಿಗೂ ಎಲ್ಲ ವಯೋಮಾನದಲ್ಲೂ ಆರೋಗ್ಯಕರ ಜೀವನವನ್ನು ಖಾತರಿಪಡಿಸಿ ಯೋಗಕ್ಷೇಮವನ್ನು ಉತ್ತೇಜಿಸುವುದು. ಇದು ಶಾಲಾ ಶಿಕ್ಷಣದಲ್ಲಿ ಆರೋಗ್ಯ ಮತ್ತು ಯೋಗಕ್ಷೇಮದ ಮಹತ್ವವನ್ನು ವಿವರಿಸುವುದು. ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಸಂಬಂಧಿಸಿದಂತೆ ಪಠ್ಯಕ್ರಮದಲ್ಲಿ ವಿಷಯ ಮತ್ತು ಅದರ ಸಾಕಾರಕ್ಕೆ ಚಟುವಟಿಕೆಗಳನ್ನು ಸೇರಿಸಲಾಗಿದೆ. ತರಗತಿ ಪ್ರಕ್ರಿಯೆಯಲ್ಲಿ ಶಿಕ್ಷಕರು ಮಕ್ಕಳಿಗೆ ಬೇರೆ ಬೇರೆ ಚಟುವಟಿಕೆಗಳನ್ನು ಮಾಡುವುದರ ಮೂಲಕ ಆರೋಗ್ಯ ಮತ್ತು ಯೋಗಕ್ಷೇಮಕ್ಕೆ ಪೂರಕ ಅಭ್ಯಾಸಗಳನ್ನು ಮೈಗೂಡಿಸಿಕೊಳ್ಳಲು ಸಹಾಯ ಮಾಡುವುದು. ಜೊತೆಗೆ ಮಧ್ಯಾಹ್ನದ ಬಿಸಿ ಊಟ, ಮೊಟ್ಟೆ ನೀಡುವಿಕೆ, ಕ್ಷೀರ ಭಾಗ್ಯ ಇತ್ಯಾದಿ ಇದಕ್ಕೆ ಪೂರಕವಾಗಿವೆ. ಆರೋಗ್ಯ ತಪಾಸಣೆ ಕೂಡ ಇದರ ಭಾಗವಾಗಿರುತ್ತದೆ. ಆದ್ದರಿಂದ ಪಠ್ಯಕ್ರಮ ಮತ್ತು ಅದಕ್ಕೆ ಪೂರಕವಾಗಿ ಮಾಡುವ ಪ್ರತಿಯೊಂದು ಪ್ರಕ್ರಿಯೆಯನ್ನು ಅರ್ಥಪೂರ್ಣವಾಗಿ ಮಾಡುವುದರ ಮೂಲಕ ಇದರ ಪ್ರಯೋಜನವನ್ನು ಪಡೆದುಕೊಳ್ಳಬಹುದು.

**ಶಾಲೆಗಳಲ್ಲಿ ಆರೋಗ್ಯ ಮತ್ತು ಸ್ವಾಸ್ಥ್ಯವನ್ನು ಕಾರ್ಯಗತಗೊಳಿಸುವ ತಂತ್ರಗಳು:**

1. **ಆರೋಗ್ಯ ಶಿಕ್ಷಣ ಪಠ್ಯಕ್ರಮ:** ಪೌಷ್ಟಿಕಾಂಶ, ದೈಹಿಕ ಚಟುವಟಿಕೆ, ಮಾನಸಿಕ ಆರೋಗ್ಯ, ಮಾದಕ ದ್ರವ್ಯ ಸೇವನೆ ತಡೆಗಟ್ಟುವಿಕೆ, ಲೈಂಗಿಕ ಮತ್ತು ಸಂತಾನೋತ್ಪತ್ತಿ ಆರೋಗ್ಯ ಮತ್ತು ನೈರ್ಮಲ್ಯದಂತಹ ವಿಷಯಗಳನ್ನು ಒಳಗೊಂಡಿರುವ ಸಮಗ್ರ ಆರೋಗ್ಯ ಶಿಕ್ಷಣ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸಿ. ಕಲಿಕೆಯ ಎಲ್ಲಾ ಕ್ಷೇತ್ರಗಳಲ್ಲಿ ಆರೋಗ್ಯಕರ ಜೀವನದ ಪ್ರಾಮುಖ್ಯತೆಯನ್ನು ಬಲಪಡಿಸಲು ಆರೋಗ್ಯ ಶಿಕ್ಷಣವನ್ನು ವಿವಿಧ ವಿಷಯಗಳಲ್ಲಿ ಸಂಯೋಜಿಸುವುದು.
2. **ದೈಹಿಕ ಶಿಕ್ಷಣ ಮತ್ತು ಚಟುವಟಿಕೆ :** ವಿದ್ಯಾರ್ಥಿಗಳು ಫಿಟ್‌ನೆಸ್, ಸಮನ್ವಯ ಮತ್ತು ಟೀಮ್‌ವರ್ಕ್ ಅನ್ನು ಉತ್ತೇಜಿಸುವ ನಿಯಮಿತ ದೈಹಿಕ ಶಿಕ್ಷಣ (PE) ತರಗತಿಗಳನ್ನು ಹೊಂದಿದ್ದಾರೆ ಎಂದು ಖಚಿತಪಡಿಸಿಕೊಳ್ಳಿ. ಕ್ರೀಡೆ ಮತ್ತು ಇತರ ದೈಹಿಕ ಚಟುವಟಿಕೆಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಿ, ದಿನನಿತ್ಯದ ದೈಹಿಕ ಚಟುವಟಿಕೆಗಳಿಗೆ ಅವಕಾಶಗಳನ್ನು ರಚಿಸಿ. ಉದಾಹರಣೆಗೆ ಸಕ್ರಿಯ ಬಿಡುವು, ವಾಕಿಂಗ್ ಕ್ಲಬ್‌ಗಳು ಅಥವಾ ಶಾಲೆಯ

ಮೊದಲು/ನಂತರದ ಕಾರ್ಯಕ್ರಮಗಳು, ವಿದ್ಯಾರ್ಥಿಗಳಿಗೆ ಶಿಫಾರಸ್ಸು ಮಾಡಲಾದ ದೈಹಿಕ ಚಟುವಟಿಕೆಯನ್ನು ಪೂರೈಸಲು ಸಹಾಯ ಮಾಡುತ್ತದೆ.

3. **ಮಾನಸಿಕ ಆರೋಗ್ಯ ಬೆಂಬಲ :** ಒತ್ತಡ, ಆತಂಕ, ಖಿನ್ನತೆ ಅಥವಾ ಇತರ ಮಾನಸಿಕ ಆರೋಗ್ಯ ಸಮಸ್ಯೆಗಳೊಂದಿಗೆ ವ್ಯವಹರಿಸುವ ವಿದ್ಯಾರ್ಥಿಗಳನ್ನು ಅದರಿಂದ ಹೊರತರಲು ಶಾಲಾ ಸಲಹೆಗಾರರು, ಮನಶ್ಶಾಸ್ತ್ರಜ್ಞರು ಮತ್ತು ಸಾಮಾಜಿಕ ಕಾರ್ಯಕರ್ತರಂತಹ ಮಾನಸಿಕ ಆರೋಗ್ಯ ಸಂಪನ್ಮೂಲಗಳನ್ನು ಒದಗಿಸಿ, ನಿಭಾಯಿಸುವ ಕೌಶಲ, ಒತ್ತಡ ನಿರ್ವಹಣೆ, ಭಾವನಾತ್ಮಕ ನಿಯಂತ್ರಣ ಮತ್ತು ಸ್ಥಿತಿಸ್ಥಾಪಕತ್ವವನ್ನು ಕಲಿಸುವ ಕಾರ್ಯಕ್ರಮಗಳನ್ನು ಅಳವಡಿಸಿ, ಮಾನಸಿಕ ಆರೋಗ್ಯದ ಕಾಳಜಿಯನ್ನು ಚರ್ಚಿಸಲು ವಿದ್ಯಾರ್ಥಿಗಳಿಗೆ ಆರಾಮದಾಯಕವಾಗುವಂತಹ ಬೆಂಬಲ ವಾತಾವರಣವನ್ನು ರಚಿಸುವುದು.
4. **ಆರೋಗ್ಯಕರ ಆಹಾರ ಮತ್ತು ಪೋಷಣೆ:** ಶಾಲೆಯ ಉಪಾಹಾರ ಗೃಹದಲ್ಲಿ ಪೌಷ್ಟಿಕಾಂಶದ ಊಟ ಮತ್ತು ತಿಂಡಿಗಳನ್ನು ಒದಗಿಸುವ ಮೂಲಕ ಆರೋಗ್ಯಕರ ಆಹಾರ ಪದ್ಧತಿಯನ್ನು ಉತ್ತೇಜಿಸುವುದು. ಹಣ್ಣುಗಳು, ತರಕಾರಿಗಳು, ಧಾನ್ಯಗಳು ಮತ್ತು ಇತರ ಆರೋಗ್ಯಕರ ಆಯ್ಕೆಗಳ ಸೇವನೆಯನ್ನು ಪ್ರೋತ್ಸಾಹಿಸುವುದು. ಸಮತೋಲಿತ ಆಹಾರದ ಪ್ರಯೋಜನಗಳು, ಆರೋಗ್ಯಕರ ಆಹಾರ ಆಯ್ಕೆಗಳನ್ನು ಹೇಗೆ ಮಾಡುವುದು ಮತ್ತು ಜಲೀಕರಣದ ಪ್ರಾಮುಖ್ಯತೆಯ ಬಗ್ಗೆ ವಿದ್ಯಾರ್ಥಿಗಳಿಗೆ ಕಲಿಸುವ ಪೌಷ್ಟಿಕಾಂಶ ಶಿಕ್ಷಣ ಕಾರ್ಯಕ್ರಮಗಳನ್ನು ಅಳವಡಿಸುವುದು.
5. **ಸುರಕ್ಷಿತ ಮತ್ತು ಸ್ವಚ್ಛ ಪರಿಸರ:** ಶಾಲಾ ಪರಿಸರವು ಸ್ವಚ್ಛವಾಗಿದೆ, ಸುರಕ್ಷಿತವಾಗಿದೆ ಹಾಗೂ ಆರೋಗ್ಯ ಮತ್ತು ಕ್ಷೇಮಕ್ಕೆ ಅನುಕೂಲಕರವಾಗಿದೆ ಎಂದು ಖಚಿತಪಡಿಸಿಕೊಳ್ಳಿ. ಇದು ತರಗತಿ ಕೊಠಡಿಗಳು, ವಿಶ್ರಾಂತಿ ಕೊಠಡಿಗಳು ಮತ್ತು ಊಟದ ಪ್ರದೇಶಗಳಲ್ಲಿ ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದು, ಜೊತೆಗೆ ಶುದ್ಧ ಕುಡಿಯುವ ನೀರನ್ನು ಒದಗಿಸುವುದು. ಸಾಂಕ್ರಾಮಿಕ ರೋಗಗಳ ಹರಡುವಿಕೆಯನ್ನು ತಡೆಗಟ್ಟಲು ಕೈ ತೊಳೆಯುವ ಕೇಂದ್ರಗಳು ಮತ್ತು ನಿಯಮಿತ ಶುಚಿಗೊಳಿಸುವ ವೇಳಾಪಟ್ಟಿಗಳಂತಹ ನೈರ್ಮಲ್ಯ ಅಭ್ಯಾಸಗಳನ್ನು ಅಳವಡಿಸುವುದು.
6. **ಕ್ಷೇಮ ನೀತಿಗಳು:** ಪೌಷ್ಟಿಕಾಂಶದ ಮಾನದಂಡಗಳು, ದೈಹಿಕ ಚಟುವಟಿಕೆಯ ಅವಶ್ಯಕತೆಗಳು ಮತ್ತು ಮಾನಸಿಕ ಆರೋಗ್ಯ ಉಪಕ್ರಮಗಳು ಸೇರಿದಂತೆ ವಿದ್ಯಾರ್ಥಿಗಳ ಆರೋಗ್ಯದ ವಿವಿಧ ಅಂಶಗಳನ್ನು ತಿಳಿಸುವ ಶಾಲಾ ಕ್ಷೇಮ ನೀತಿಗಳನ್ನು ಅಭಿವೃದ್ಧಿಪಡಿಸಿ ಮತ್ತು ಜಾರಿಗೊಳಿಸಿ. ಈ ನೀತಿಗಳ ಅಭಿವೃದ್ಧಿ ಮತ್ತು ಅನುಷ್ಠಾನದಲ್ಲಿ ವಿದ್ಯಾರ್ಥಿಗಳು ಮತ್ತು ಪೋಷಕರ ಪರಿಣಾಮಕಾರಿ ಒಳಗೊಳ್ಳುವುದನ್ನು ಖಚಿತಪಡಿಸಿಕೊಳ್ಳಲು ಪ್ರೋತ್ಸಾಹಿಸುವುದು.
7. **ಆರೋಗ್ಯ ತಪಾಸಣೆ ಮತ್ತು ಸೇವೆಗಳು:** ವಿದ್ಯಾರ್ಥಿಗಳಿಗೆ ಆರೋಗ್ಯ ಸಮಸ್ಯೆಗಳನ್ನು ಮೊದಲೇ ಗುರುತಿಸಲು ಮತ್ತು ಪರಿಹರಿಸಲು ದೃಷ್ಟಿ, ಶ್ರವಣ ಮತ್ತು ದಂತ ತಪಾಸಣೆಗಳಂತಹ ನಿಯಮಿತ ಆರೋಗ್ಯ ತಪಾಸಣೆಗಳನ್ನು ಒದಗಿಸುವುದು. ಶಾಲೆಯಲ್ಲಿ ಚುಚ್ಚುಮದ್ದು ಲಸಿಕೆಗಳು ನೀಡುವುದು, ಆರೋಗ್ಯ ತಪಾಸಣೆ ಮತ್ತು ಸಮಾಲೋಚನೆಯಂತಹ ಸೇವೆಗಳನ್ನು ನೀಡಲು ಸ್ಥಳೀಯ ಆರೋಗ್ಯ ಪೂರೈಕೆದಾರರೊಂದಿಗೆ ಪಾಲುದಾರರಾಗುವುದು.
8. **ಆರೋಗ್ಯಕರ ಅಭ್ಯಾಸಗಳನ್ನು ಉತ್ತೇಜಿಸುವುದು:** ಸಾಕಷ್ಟು ನಿದ್ರೆ ಪಡೆಯುವುದು, ವೈಯಕ್ತಿಕ ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದು ಮತ್ತು ಸಾವಧಾನತೆಯನ್ನು ಅಭ್ಯಾಸ ಮಾಡುವಂತಹ ಆರೋಗ್ಯಕರ ಅಭ್ಯಾಸಗಳನ್ನು ಪ್ರೋತ್ಸಾಹಿಸಿ, ಈ ಅಭ್ಯಾಸಗಳು ಒಟ್ಟಾರೆ ಯೋಗಕ್ಷೇಮಕ್ಕೆ ಕೊಡುಗೆ ನೀಡುತ್ತವೆ ಮತ್ತು ವಿದ್ಯಾರ್ಥಿಗಳು ಶೈಕ್ಷಣಿಕವಾಗಿ ಉತ್ತಮ ಸಾಧನೆ ಮಾಡಲು ಸಹಾಯ ಮಾಡುತ್ತವೆ. ಆರೋಗ್ಯಕರ ಜೀವನದ ಮಹತ್ವದ ಬಗ್ಗೆ ಜಾಗೃತಿ ಮೂಡಿಸಲು ಮತ್ತು ಸಕಾರಾತ್ಮಕ ನಡವಳಿಕೆಗಳನ್ನು ಬಲಪಡಿಸಲು ಪ್ರಚಾರಗಳು, ಪೋಸ್ಟರ್‌ಗಳು ಮತ್ತು ಕಾರ್ಯಾಗಾರಗಳನ್ನು ಬಳಸುವುದು.
9. **ಭಾವನಾತ್ಮಕ ಮತ್ತು ಸಾಮಾಜಿಕ ಕಲಿಕೆ (SEL):** ವಿದ್ಯಾರ್ಥಿಗಳು ಸ್ವಯಂ–ಅರಿವು, ಸ್ವಯಂ ನಿರ್ವಹಣೆ, ಸಾಮಾಜಿಕ ಅರಿವು, ಸಂಬಂಧ ಕೌಶಲಗಳು ಮತ್ತು ಜವಾಬ್ದಾರಿಯುತ ನಿರ್ಧಾರವನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡಲು ಪಠ್ಯಕ್ರಮದಲ್ಲಿ ಸಾಮಾಜಿಕ ಮತ್ತು ಭಾವನಾತ್ಮಕ ಕಲಿಕೆಯನ್ನು (SEL), (ಸಿ.ಸಿ.ಈ) ಅಳವಡಿಸಿಕೊಳ್ಳುವುದು ಮತ್ತು ಸಹಾನುಭೂತಿ, ಗೌರವ ಮತ್ತು ಸಹಕಾರವನ್ನು ಗೌರವಿಸುವ ಶಾಲಾ ಸಂಸ್ಕೃತಿಯನ್ನು ರಚಿಸಿ. ವಿದ್ಯಾರ್ಥಿಗಳು ತಮ್ಮ ಗೆಳೆಯರೊಂದಿಗೆ ಮತ್ತು ಶಿಕ್ಷಕರೊಂದಿಗೆ ಬಲವಾದ ಸಂಬಂಧವನ್ನು ನಿರ್ಮಿಸಲು ಸಹಾಯ ಮಾಡುತ್ತಾರೆ.
10. **ಪೋಷಕರ ಮತ್ತು ಸಮುದಾಯದ ಒಳಗೊಳ್ಳುವಿಕೆ:** ಆರೋಗ್ಯ ಮತ್ತು ಕ್ಷೇಮವನ್ನು ಉತ್ತೇಜಿಸುವಲ್ಲಿ ಪೋಷಕರು ಮತ್ತು ಸಮುದಾಯವನ್ನು ತೊಡಗಿಸಿಕೊಳ್ಳಿ. ಮನೆಯಲ್ಲಿ ಅವರ ಮಕ್ಕಳ ಆರೋಗ್ಯವನ್ನು ಹೇಗೆ ಬೆಂಬಲಿಸುವುದು

ಎಂಬುದರ ಕುರಿತು ಸಂಪನ್ಮೂಲಗಳು ಮತ್ತು ಮಾಹಿತಿಯನ್ನು ಅವರಿಗೆ ಒದಗಿಸಿ, ಆರೋಗ್ಯಕರ ಜೀವನ ಶೈಲಿಯನ್ನು ಪ್ರೋತ್ಸಾಹಿಸಲು ಮತ್ತು ಶಾಲೆ ಮತ್ತು ವಿಶಾಲ ಸಮುದಾಯದ ನಡುವಿನ ಸಂಪರ್ಕವನ್ನು ಬಲಪಡಿಸಲು ಆರೋಗ್ಯ ಮೇಳಗಳು ಅಥವಾ ಫಿಟ್‌ನೆಸ್ ದಿನಗಳಂತಹ ಸಮುದಾಯ ಕಾರ್ಯಕ್ರಮಗಳನ್ನು ಆಯೋಜಿಸುವುದು.ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಯನ್ನು ಉತ್ತೇಜಿಸಲು, ಶಾಲಾ ಶಿಕ್ಷಣದಲ್ಲಿ ಆರೋಗ್ಯ ಮತ್ತು ಸ್ವಾಸ್ಥ್ಯವನ್ನು ಸಂಯೋಜಿಸುವುದು ಅತ್ಯಗತ್ಯ. ಈ ತಂತ್ರಗಳನ್ನು ಕಾರ್ಯಗತಗೊಳಿಸುವ ಮೂಲಕ, ಶಾಲೆಗಳು ವಿದ್ಯಾರ್ಥಿಗಳ ದೈಹಿಕ, ಮಾನಸಿಕ ಮತ್ತು ಭಾವನಾತ್ಮಕ ಯೋಗಕ್ಷೇಮವನ್ನು ಬೆಂಬಲಿಸುವ ವಾತಾವರಣವನ್ನು ರಚಿಸಬಹುದು. ಆರೋಗ್ಯಕರ ಮತ್ತು ಯಶಸ್ವಿ ಜೀವನವನ್ನು ನಡೆಸಲು ಅವರಿಗೆ ಅಗತ್ಯವಿರುವ ಸಾಧನಗಳೊಂದಿಗೆ ಅವುಗಳನ್ನು ಸಜ್ಜುಗೊಳಿಸಬಹುದು. ಹಾಗೆ ಮಾಡುವುದರಿಂದ, ಶಾಲೆಗಳು ತಮ್ಮ ವಿದ್ಯಾರ್ಥಿಗಳ ವೈಯಕ್ತಿಕ ಬೆಳವಣಿಗೆಗೆ ಮಾತ್ರವಲ್ಲದೆ ವಿಶಾಲವಾದ ಸಾರ್ವಜನಿಕ ಆರೋಗ್ಯ ಗುರಿಗಳ ಸಾಧನೆಗೆ ಮತ್ತು ಎಲ್ಲರಿಗೂ ಯೋಗಕ್ಷೇಮದ ಪ್ರಚಾರಕ್ಕೆ ಕೊಡುಗೆ ನೀಡುತ್ತವೆ.

**ಘಟನೆ–01.**

ಪ್ರೌಢಶಾಲೆಯ ಕೆಲವು ಮಕ್ಕಳು ದಿನಾಲು ಶಾಲೆ ಬಿಟ್ಟೊಡನೆ ಓಡಿ ಹೋಗಿ ಕೆರೆಯ ಪಕ್ಕದ ಪಾಳು ಗುಡಿ ಹತ್ತಿರ ಸೇರಿಕೊಳ್ಳುತ್ತಾರೆ. ಅದೇನೋ ತಿನ್ನೋದೋ, ಅಗಿಯೋದೋ, ಸೇದೋದೋ ಮಾಡ್ತಾರಂತೆ. ಮೊದಮೊದಲು ಇದೆಲ್ಲಾ ತಮಾಷೆಯಾಗಿ ಕಂಡಿತ್ತು. ಆದರೆ ಈ ಗುಂಪಿನಲ್ಲಿದ್ದ 13 ವರ್ಷದ ಹುಡುಗನೊಬ್ಬ ರಕ್ತಕಾರಿಕೊಂಡು ಸತ್ತು ಹೋದಾಗ ಎಲ್ಲರೂ ಗಾಬರಿಯಾದರು.

**ಘಟನೆ–02**

ಶಾಲೆ ಕಲಿಯುತ್ತಿದ್ದ ಚೂಟಿ ಹುಡುಗಿಗೆ ಮದುವೆ ಯಾಯಿತು. ಊರಲ್ಲೆಲ್ಲಾ ಸಂಭ್ರಮ. ವರ್ಷದಲ್ಲೇ ಆಕೆ ಹೆರಿಗೆಗೆ ಬಂದಳು. ಚಟುವಟಿಕೆಯಿಂದ ಇದ್ದ ಹುಡುಗಿ ತುಂಬಾ ನಿಶ್ಯಕ್ತಳಾಗಿದ್ದಳು. ಹೆರಿಗೆಯಲ್ಲಿ ತೊಂದರೆಯಾಗಿ ಆಕೆ ಮತ್ತು ಅವಳ 'ಹೊಟ್ಟೆಯಲ್ಲಿದ್ದ ಮಗು ಇಬ್ಬರೂ ಸತ್ತುಹೋದರು. ಪೊಲೀಸರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮತ್ತು ಆರೋಗ್ಯ ಇಲಾಖೆಯ ಅಧಿಕಾರಿಗಳು ಊರಿಗೆ ಬಂದು ಸಮುದಾಯದಲ್ಲಿ ಸಭೆ ನಡೆಸಿ ಬಾಲ್ಯವಿವಾಹ ಮಾಡಬಾರದು ಎಂದು ತಿಳಿ ಹೇಳಿದರು.

ಎಲ್ಲ ಜನರು ಆರೋಗ್ಯವಾಗಿದ್ದರೆ ಮಾತ್ರ 2030 ರೊಳಗೆ ಜಗತ್ತು ಸುಸ್ಥಿರ ಬದುಕನ್ನು ಕಾಣಬಹುದು. ಈಗಲೂ ತಡೆಗಟ್ಟಬಹುದಾದ ವಿವಿಧ ರೋಗಗಳಿಗೆ ಮಕ್ಕಳು, ಹದಿಹರೆಯದವರು, ವಯಸ್ಕರು ಮತ್ತು ವೃದ್ಧರು ಬಲಿಯಾಗುತ್ತಿದ್ದಾರೆ. ಹೆರಿಗೆ ಸಮಯದಲ್ಲಿ ಸಾಯುವ ತಾಯಂದಿರು, ಮಕ್ಕಳು, ಹೆಂಡ ಸಾರಾಯಿ, ತಂಬಾಕು, ಇತ್ಯಾದಿ ಮಾದಕ ವಸ್ತುಗಳ ಬಳಕೆಗೆ ಬಲಿಯಾಗುವವರು, ಕಾರ್ಖಾನೆಗಳು ಬಿಡುತ್ತಿರುವ ತ್ಯಾಜ್ಯದ ವಿಶಕಾರಿ ವಿಷದಿಂದ ಪರಿಸರದ ನಾಶ, ಅದರಿಂದಾಗಿ ರೋಗಗಳು, ಇತ್ಯಾದಿ ನಮ್ಮನ್ನು ಬಾಧಿಸುತ್ತಿವೆ. ಇವುಗಳಿಂದ ತಪ್ಪಿಸಿಕೊಳ್ಳಲು ಮಕ್ಕಳು ಉತ್ತಮ ಆರೋಗ್ಯಕಾರಿ ಅಭ್ಯಾಸಗಳನ್ನು ಬೆಳೆಸಿಕೊಳ್ಳಬೇಕು. ಕಸ ವಿಲೇವಾರಿಯನ್ನು ಎಚ್ಚರಿಕೆಯಿಂದ ಮಾಡುವುದು, ನೀರಿನ ಬಳಕೆಯಲ್ಲಿ ಎಚ್ಚರಿಕೆ ಇತ್ಯಾದಿಯಲ್ಲದೆ, ಕಾಲಕಾಲಕ್ಕೆ ಸೂಕ್ತವಾದ ರೋಗ ನಿರೋಧಕಗಳನ್ನು ಪಡೆಯುವುದೂ ಇಲ್ಲಿ ಮುಖ್ಯವಾಗಿದೆ.

**ಉತ್ತಮ ಆರೋಗ್ಯ ಮತ್ತು ಯೋಗಕ್ಷೇಮಕ್ಕಾಗಿ ಸರ್ಕಾರಗಳು ಕೈಗೊಳ್ಳಲು ಒಪ್ಪಿರುವ ಕ್ರಮಗಳು:**

- ಹೆರಿಗೆ ಸಮಯದಲ್ಲಿ ತಾಯಂದಿರ ಮರಣವನ್ನು ಮತ್ತು ನವಜಾತಶಿಶುಗಳು ಮತ್ತು ಐದು ವರ್ಷ ದೊಳಗಿನ ಮಕ್ಕಳ ಮರಣವನ್ನು ತಡೆಗಟ್ಟುವುದು. ಕುಟುಂಬ ಯೋಜನೆಯ ಪ್ರಾಮುಖ್ಯತೆಯನ್ನು ಎಲ್ಲ ಸಮುದಾಯಗಳಿಗೆ ತಿಳಿಸುವುದು.
- ಎಚ್.ಐ.ವಿ./ಏಡ್ಸ್‌ಮತ್ತಿತರ ಸಾಂಕ್ರಾಮಿಕ ಮತ್ತು ಸಾಂಕ್ರಾಮಿಕವಲ್ಲದ ರೋಗಗಳು, ಹೆಪಟೈಟಿಸ್ ಮತ್ತು ನೀರಿನಿಂದ ಹರಡುವ ರೋಗಗಳನ್ನು ತಡೆಗಟ್ಟುವುದು.

- ಮಾದಕ ವಸ್ತುಗಳ ಬಳಕೆಯ ಅಪಾಯಗಳ ಬಗ್ಗೆ ಸಮುದಾಯಗಳಲ್ಲಿ, ಬಹಳ ಪ್ರಮುಖವಾಗಿ ಮಕ್ಕಳು ಮತ್ತು ಯುವಜನರ ನಡುವೆ ಮಾಹಿತಿ ನೀಡುವುದು ಮತ್ತು ಆರೋಗ್ಯ ಹಾಗೂ ಮಾನಸಿಕ ಆರೋಗ್ಯ ಕುರಿತು ಜಾಗೃತಿ ಮೂಡಿಸುವುದು.

- ಪ್ರತಿಯೊಬ್ಬರಿಗೂ ಆರೋಗ್ಯದ ಹಕ್ಕಿನ ಸೌಲಭ್ಯಗಳು ಸಿಗುವುದನ್ನು ಖಾತರಿ ಮಾಡಿಕೊಂಡು, ಎಲ್ಲರಿಗೂ ಉತ್ತಮ ಗುಣಮಟ್ಟದ ವೈದ್ಯಕೀಯ ನೆರವು, ಆರೈಕೆ ಮತ್ತು ಉಚಿತವಾಗಿ ಹಾಗೂ ಕೈಗೆಟಕುವ ಬೆಲೆಯಲ್ಲಿ ಔಷಧಿಗಳು ಮತ್ತು ಲಸಿಕೆಗಳು ದೊರೆಯುವಂತೆ ಏರ್ಪಾಡು ಮಾಡುವುದು.
- ಗಾಳಿ,ನೀರು ಮತ್ತು ಮಣ್ಣಿನ ಆರೋಗ್ಯವನ್ನು ಕಾಪಾಡಲು ಪರಿಸರಕ್ಕೆ ವಿಷಕಾರಿ ಅನಿಲಗಳು, ತ್ಯಾಜ್ಯಗಳನ್ನು ಬಿಡುವುದನ್ನು ತಡೆಗಟ್ಟುವುದು.
- ನಮ್ಮ ರಾಜ್ಯದಲ್ಲಿ ಶಿಶು ಮರಣ ಪ್ರಮಾಣ ಮತ್ತು ತಾಯಂದಿರ ಮರಣ ಪ್ರಮಾಣ ಈ ರೀತಿ ಇದೆ:
  - ಹುಟ್ಟಿದ 4 ವಾರದೊಳಗೆ ಸಾಯುವ ಮಕ್ಕಳ ಪ್ರಮಾಣ
  - ಹುಟ್ಟಿದ 1 ವರ್ಷದೊಳಗೆ ಮರಣ ಹೊಂದುವ ಮಕ್ಕಳ ಪ್ರಮಾಣ
  - ಹುಟ್ಟಿದ 5 ವರ್ಷದೊಳಗೆ ಮರಣ ಹೊಂದುವ ಮಕ್ಕಳ ಪ್ರಮಾಣ
  - ಹೆರಿಗೆ ಸಮಯದಲ್ಲಿ ಮರಣ ಹೊಂದುವ ತಾಯಂದಿರರ ಪ್ರಮಾಣ
  - ಮರಣ ಪ್ರಮಾಣಎಂದರೆ, ಜೀವಂತ ಜನಿಸುವ ಪ್ರತಿ 1000 ಶಿಶುಗಳಲ್ಲಿ ಮರಣ ಹೊಂದುವ ಮಕ್ಕಳು

**ನಾವೇನು ಮಾಡಬಹುದು**?

ಬಾಲ್ಯವಿವಾಹಗಳು ನಡೆಯುವ ಕುರಿತು ಮಾಹಿತಿ ದೊರೆತ ಕೂಡಲೇ ಚೈಲ್ಡ್‌ಲೈನ್ 1098ಗೆ ಮಾಹಿತಿಕೊಡಿ. ಮಾದಕ ವಸ್ತುಗಳ ಬಳಕೆ ಯಾರಾದರೂ ಮಾಡುತ್ತಿದ್ದರೆ ಅವರಿಗೆ ಅದರಿಂದ ಹೊರಗೆ ಬರಲು ಸಹಾಯ ಮಾಡಲು ವೈದ್ಯರು ಮತ್ತು ಆಪ್ತ ಸಮಾಲೋಚಕರನ್ನು ಸಂಪರ್ಕಿಸಲು ಸಹಾಯ ಮಾಡಿ.

**4. ಗುಣಮಟ್ಟದ ಶಿಕ್ಷಣ:**

ಸುಸ್ಥಿರ ಅಭಿವೃದ್ಧಿಗುರಿ (SDG-4) ನಾಲ್ಕು ಎಲ್ಲರನ್ನೂ ಒಳಗೊಳ್ಳುವ ಸಮಾನ ಗುಣಮಟ್ಟದ ಶಿಕ್ಷಣವನ್ನು ಎಲ್ಲರಿಗೂ ನೀಡುವ ಉದ್ದೇಶವನ್ನು ಹೊಂದಿದೆ. ಯಾವುದೇ ರಾಜಿಗೆ ಒಳಪಡದೆ ಗುಣಮಟ್ಟದ ಶಿಕ್ಷಣವನ್ನು ಎಲ್ಲರಿಗೆ ನೀಡುವ ವಿಷಯವು 10 ಸೂಚ್ಯಂಕಗಳನ್ನು ಹೊಂದಿದೆ. ಕರ್ನಾಟಕ ಸರ್ಕಾರವು ತನ್ನ ವಿಷನ್ ದಾಖಲೆಯಲ್ಲಿ ಇದನ್ನು ಸ್ಪಷ್ಟವಾಗಿ ದಾಖಲಿಸಿದೆ. (ಮೂಲ: ನವಕರ್ನಾಟಕ ವಿಷನ್ 2025) ಸುಸ್ಥಿರ ಅಭಿವೃದ್ಧಿ ಗುರಿ ನಾಲ್ಕನ್ನು ಮುಂದಿನ ನಾಲ್ಕರಿಂದ 12 ವರ್ಷದೊಳಗೆ ಅಂದರೆ 2023 ಇಲ್ಲವೇ 2030 ರ ವೇಳೆಗೆ ಸಾಧಿಸುವುದು ಕರ್ನಾಟಕ ಸರ್ಕಾರದ ಆದ್ಯತೆಯಾಗಿರುತ್ತದೆ. ಈ ಗುರಿಯ ಸಾಧನೆಗೆ ಸಂಬಂಧಿಸಿದಂತೆ ಏಳು ಪ್ರಮುಖ ಕ್ಷೇತ್ರಗಳಿವೆ.

1. ಓ.ಓ.ಎಸ್.ಸಿ ಯನ್ನು ಒಳಗೊಂಡಿರುವ ಶಾಲಾ ಶಿಕ್ಷಣ.
2. ಎಲ್ಲರಿಗೂ ಗುಣಮಟ್ಟದ ಇ.ಸಿ.ಸಿ.
3. ಗುಣಮಟ್ಟದ ತಾಂತ್ರಿಕ ವೃತ್ತಿಪರ ಉನ್ನತ ಶಿಕ್ಷಣ.
4. ಕೌಶಲ ಅಭಿವೃದ್ಧಿ ತರಬೇತಿ ಮತ್ತು ಉದ್ಯೋಗಾವಕಾಶಗಳು.
5. ಲಿಂಗಾಧಾರಿತ ತಾರತಮ್ಯವೂ ಸೇರಿದಂತೆ ಹಿಂದುಳಿದ ವರ್ಗದವರು ಎಸ್ಸಿ, ಎಸ್ಟಿ ಹಾಗೂ ಅಲ್ಪಸಂಖ್ಯಾತರು, ಅಂಗವಿಕಲರು ಎದುರಿಸುತ್ತಿರುವ ತಾರತಮ್ಯವನ್ನು ನಿವಾರಿಸುವುದು.
6. ಯುವಕರು ಮತ್ತು ವಯಸ್ಕರಲ್ಲಿ ಸಾಕ್ಷರತೆಯನ್ನು ಹೆಚ್ಚಿಸುವುದು.
7. ಸುಸ್ಥಿರ ಅಭಿವೃದ್ಧಿ ಮತ್ತು ಸುಸ್ಥಿರ ಬದುಕಿಗೆ ಅನುಕೂಲವಾಗುವ ಸುಸ್ಥಿರ ಬದುಕನ್ನು ಪಡೆದುಕೊಳ್ಳಲು ಬೇಕಾದ ಜ್ಞಾನ ಮತ್ತು ಸಂಸ್ಕೃತಿಯನ್ನು ಸಮಾಜದಲ್ಲಿ ಬೆಳೆಸುವುದು.

ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (ಡಿ.ಪಿ.ಈ.ಪಿ)ದಡಿಯಲ್ಲಿ ಅನುಷ್ಠಾನಕ್ಕೆ ತರಲಾದ ಅನೇಕ ಕ್ರಮಗಳನ್ನು ಸರ್ವ ಶಿಕ್ಷಣ ಅಭಿಯಾನದಲ್ಲಿ (ಎಸ್.ಎಸ್.ಎ) ಒಗ್ಗೂಡಿಸಲಾಯಿತು. ಗುಣಮಟ್ಟದ ಶಿಕ್ಷಣ ಮತ್ತು ಶಾಲಾ ದಾಖಲಾತಿಯನ್ನು ಸುಲಭವಾಗಿಸುವುದು ಇದರ ಮೂಲ ಉದ್ದೇಶವಾಗಿತ್ತು. ರಾಜ್ಯ ನಿರ್ದೇಶಕ ತತ್ವಗಳ ಭಾಗವಾಗಿ

ಸಂವಿಧಾನದ 45ನೇ ಪರಿಚ್ಛೇದದಲ್ಲಿದ್ದ ಪ್ರಾಥಮಿಕ ಶಿಕ್ಷಣವನ್ನು, ಶಿಕ್ಷಣ ಹಕ್ಕು ಕಾಯಿದೆ–2009ರ ಮೂಲಕ ಮೂಲಭೂತ ಹಕ್ಕು ಎಂದು ಪರಿಚ್ಛೇದ 21(ಎ) ಅಡಿಯಲ್ಲಿ ಘೋಷಿಸಲಾಯಿತು. ಇದಾದ ನಂತರ ಶಾಲಾ ದಾಖಲಾತಿ ಪ್ರಮಾಣವು ಗಣನೀಯವಾಗಿ ಹೆಚ್ಚಾಗಿದೆ. ಶಿಕ್ಷಣವನ್ನು ಸಾರ್ವತ್ರೀಕರಣಗೊಳಿಸುವ ಉದ್ದೇಶದಿಂದ ಪ್ರಾಥಮಿಕ ಮತ್ತು

ಪ್ರೌಢ ಶಿಕ್ಷಣ ಇಲಾಖೆಯು ರಾಷ್ಟ್ರೀಯ ಮಾದ್ಯಮಿಕ ಶಿಕ್ಷಣ ಅಭಿಯಾನವನ್ನು ಅನುಷ್ಠಾನಕ್ಕೆ ತಂದಿದ್ದು, ಉನ್ನತ ಶಿಕ್ಷಣ ಇಲಾಖೆಯು ರಾಷ್ಟ್ರೀಯ ಉಚ್ಚತರ ಶಿಕ್ಷಾ ಅಭಿಯಾನವನ್ನು (ಯು.ಎಸ್.ಎ) ಅನುಷ್ಠಾನಕ್ಕೆ ತಂದಿದೆ. ತಾ: ಖಾನಾಪೂರ ಇದರಜೊತೆಗೆ ಎಲ್ಲರನ್ನೂ ಅದರಲ್ಲೂ ಮಹಿಳೆಯರನ್ನು ಸಾಕ್ಷರರನ್ನಾಗಿಸುವ ಉದ್ದೇಶದಿಂದ ಸಾಕ್ಷರ ಭಾರತ್ ಮಿಷನ್ ಅನ್ನು 2009ರ ಸೆಪ್ಟೆಂಬರ್‌ನಲ್ಲಿ ಆರಂಭಿಸಲಾಗಿದೆ.

ಶಾಲೆಗಳಲ್ಲಿ ನೀಡಲಾಗುತ್ತಿರುವ ಗುಣಮಟ್ಟದ ಶಿಕ್ಷಣದ ಕಲಿಕೆಯ ಕುರಿತು ಆದ್ಯತೆ ಮತ್ತು ಗಮನವನ್ನು ನೀಡಲಾಗಿಲ್ಲ. ಎನ್.ಸಿ.ಆರ್.ಟಿ.ಯು ಇತ್ತೀಚಿನ ದಿನಗಳಲ್ಲಿ ಶಾಲೆಗಳಲ್ಲಿ ಕಲಿಯುತ್ತಿರುವ ಮಕ್ಕಳ ಸಾಧನೆಯನ್ನು ನಿಯಮಿತವಾಗಿ ಪರೀಕ್ಷೆಗೆ ಒಳಪಡಿಸುತ್ತಿದೆ. ಶಿಕ್ಷಣ ಸಂಶೋಧನೆಯ ವಾರ್ಷಿಕ ಸಮೀಕ್ಷೆ (ಎ.ಎಸ್.ಇ.ಆರ್) ಹೆಸರಿನ ರಾಷ್ಟ್ರ ಮಟ್ಟದ ಸರ್ಕಾರೇತರ ಸಂಸ್ಥೆಯು ಮಕ್ಕಳ ಕಲಿಕೆಯನ್ನು ಮೌಲ್ಯಮಾಪನಕ್ಕೆ ಒಳಪಡಿಸುತ್ತದೆ. ಈ ಮೌಲ್ಯಮಾಪನವು ದೇಶದ 596 ಜಿಲ್ಲೆಗಳಲ್ಲಿ 2018 ರಲ್ಲಿ ಮೂರು ಸುತ್ತಿನ (3ಆರ್) ಮಾದರಿ ಸಮೀಕ್ಷೆಯ ಮೂಲಕ ಮಾಡಲಾಗಿದೆ. ಈ ಸಮೀಕ್ಷೆಯ ಪ್ರಕಾರ ಶೇಕಡಾ 96 ಮಕ್ಕಳು ಶಾಲೆಗೆ ಹೋದರೂ 7ನೇ ತರಗತಿಯಲ್ಲಿ ಓದುತ್ತಿರುವ ಮಕ್ಕಳಲ್ಲಿ ಶೇಕಡಾ 25 ರಷ್ಟು ಮಕ್ಕಳು ಕನಿಷ್ಠ ಓದುವ ಕೌಶಲಗಳನ್ನು ಹೊಂದಿರುವುದಿಲ್ಲ. ಶೇಕಡಾ 50 ರಷ್ಟು ಮಕ್ಕಳಿಗೆ ಕಳೆಯುವ ಮತ್ತು ಕೂಡುವ, ಸರಳ ಗಣಿತದ ಜ್ಞಾನವೂ ಇಲ್ಲ ಎಂದಾಗಿದೆ. ಇಂತಹ ಶೋಚನೀಯ ಸ್ಥಿತಿಯು, ಗುಣಾತ್ಮಕ ಶಿಕ್ಷಣವನ್ನು ನೀಡುವಲ್ಲಿ ಸೋಲುಂಟಾಗಿದೆ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಕಳೆದ ನಾಲ್ಕು ವರ್ಷಗಳಿಂದ ಸಾಕಷ್ಟು ಪ್ರಮಾಣದಲ್ಲಿ ಮೂಲಭೂತ ಸೌಕರ್ಯಗಳ ರಚನೆಯಾಗಿದ್ದರೂ ಕಲಿಕೆಯ ಗುಣಮಟ್ಟದಲ್ಲಿ ಅಂತಹ ಹೇಳಿಕೊಳ್ಳುವಂತಹ ಸಾಧನೆಯಾಗಿರುವುದಿಲ್ಲ. ಗುಜರಾತ್, ಮಧ್ಯಪ್ರದೇಶಗಳಿಗೆ ಹೋಲಿಸಿದರೆ ಕರ್ನಾಟಕದ ಒಟ್ಟಾರೆ ಶೈಕ್ಷಣಿಕ ಪರಿಸ್ಥಿತಿ ಉತ್ತಮವಾಗಿದೆ.

ಸುಸ್ಥಿರ ಅಭಿವೃದ್ಧಿ ಗುರಿ–4 ಗುಣಮಟ್ಟದ ಶಿಕ್ಷಣ–ಸಮಗ್ರ ಶಿಕ್ಷಣವನ್ನು ಸಮಾನ ಗುಣಮಟ್ಟದ ಶಿಕ್ಷಣವನ್ನು ಮತ್ತು ಜೀವನ ಪರ್ಯಂತ ಕಲಿಕೆಯ ಅವಕಾಶವನ್ನು ಎಲ್ಲರಿಗೂ ಒದಗಿಸುವಲ್ಲಿ ಮುಂಚೂಣಿಯಲ್ಲಿರುವ ರಾಜ್ಯವೆಂದು ಪರಿಗಣಿತವಾಗಿದೆ. ರಾಷ್ಟ್ರಮಟ್ಟದಲ್ಲಿ ಅಭಿವೃದ್ಧಿ ಗುರಿ 4ರ ಸಾಧನೆಯಲ್ಲಿ ನಾಲ್ಕನೆಯ ಸ್ಥಾನದಲ್ಲಿದೆ. ಮೊದಲ ಮೂರು ಸ್ಥಾನಗಳಲ್ಲಿ ಕ್ರಮವಾಗಿ ಕೇರಳ, ಹಿಮಾಚಲ ಪ್ರದೇಶ ಮತ್ತು ಆಂಧ್ರಪ್ರದೇಶಗಳಿವೆ. ನೀತಿ ಆಯೋಗವು 68 ಆದ್ಯತೆಯ ಸೂಚ್ಯಂಕಗಳನ್ನು ಕರ್ನಾಟಕ ಮತ್ತು ಭಾರತದ ಸಾಧನೆಯ ವಿವರಗಳನ್ನು ಈ ಕೆಳಗಿನ ಕೋಷ್ಟಕವು ನೀಡುತ್ತದೆ.

| ಸೂಚ್ಯಂಕಗಳು | | ಎ.ಎನ್.ಇ.ಆರ್ 1ರಿಂದ 8 ಮತ್ತು 9 ರಿಂದ 10ರ ವರೆಗೆ | ಮರು ಪ್ರತಿಕ್ರಿಯೆಎಲ್/ಎಂ/ಇ.ವಿ.ಎಸ್‌ತರಗತಿ 5 | ಮರು ಪ್ರತಿಕ್ರಿಯೆಎಲ್/ಎಂ/ಎಸ್.ಎಸ್. ತರಗತಿ 8 | 6ರಿಂದ 13 ಒ.ಒ.ಎಸ್.ಸಿ | ವಾರ್ಷಿಕ ಸರಾಸರಿ. ಡಿ.ಒ.ಆರ್–ಮಾಧ್ಯಮಿಕ | ವೃತ್ತಿಪರ ಅರ್ಹತೆಯುಳ್ಳ ಶಿಕ್ಷಕರು | ಪಿ.ಟಿ.ಆರ್ ಪ್ರಾಥಮಿಕ & ಮಾಧ್ಯಮಿಕ ಶಾಲೆಗಳು |
|---|---|---|---|---|---|---|---|---|
| ಸಾಧನೆಯ ಶೇಕಡಾ | ಕ | 85.54 | 68.67 | 54.50 | 1.49 | 26.18 | 95.85 | 76.05 |
| | ಭಾ | 75.83 | 54.69 | 44.58 | 2.97 | 17.06 | 81.15 | 70.43 |
| ಸು.ಅ. ಗು ಸೂಚ್ಯಾಂಕ | ಕ | 73 | 100 | 88 | 79 | 27 | 94 | 69 |
| | ಭಾ | 56 | 50 | 45 | 54 | 68 | 73 | 58 |

***ಗಮನಿಸಿ:*** 1 ಎ.ಎನ್.ಇ.ಆರ್ – ಸರಾಸರಿ ನಿವ್ವಳ ದಾಖಲಾತಿ ಪ್ರಮಾಣ: ಎಲ್–ಭಾಷೆ.ಎಂ– ಗಣಿತ,ಇ.ವಿ.ಎಸ್–ಪರಿಸರ ವಿಜ್ಞಾನ,ಎಸ್.ಎಸ್ – ಸಮಾಜ ವಿಜ್ಞಾನ,ಒ.ಒ.ಎಸ್.ಸಿ – ಶಾಲೆಯಿಂದ ಹೊರಗುಳಿದ ಮಕ್ಕಳು,ಡಿ.ಓ.ಆರ್–ಡ್ರಾಪ್ ಔಟ್ಸ್‌ರೇಟ್,ಪಿ.ಟಿ.ಆರ್– ವಿದ್ಯಾರ್ಥಿ– ಶಿಕ್ಷಕ ಅನುಪಾತ,ಕ– ಕರ್ನಾಟಕ,ಭಾ– ಭಾರತ,2. ಮಾಧ್ಯಮಿಕ ಹಂತದಲ್ಲಿ ಡ್ರಾಪ್‌ಔಟ್ಸ್‌ಗಳ ವಾರ್ಷಿಕ ಸರಾಸರಿಯನ್ನು ಹೊರತುಪಡಿಸಿ, ಉಳಿದೆಲ್ಲಾ ವಿಚಾರಗಳಲ್ಲಿ ಕರ್ನಾಟಕವು ರಾಷ್ಟ್ರೀಯ ಸರಾಸರಿಗಿಂತ ಉತ್ತಮವಾದ ಸಾಧನೆಯನ್ನು ತೋರಿದೆ.

ಕರ್ನಾಟಕ ಮತ್ತು ಇತರ ರಾಜ್ಯಗಳ ಹಾಗೂ ಭಾರತದ ಸರಾಸರಿಯ ನಡುವೆ ಹೋಲಿಕೆ ಮಾಡುವುದುರಿಂದ ರಾಜ್ಯದ ಸ್ಥಿತಿಗತಿ ಮತ್ತು ಸ್ಥಾನದ ಕುರಿತು ಮಾಹಿತಿ ದೊರೆಯುತ್ತದೆ. ಇಂತಹ ಹೋಲಿಕೆಯಷ್ಟೇ ಉತ್ತಮ ಸಾಧನೆಗೆ ಅವಕಾಶವನ್ನು ನೀಡುವುದಿಲ್ಲ, ಬದಲಿಗೆ ಸಾಧನೆಯನ್ನು ಗಳಿಸಬೇಕಾದ ಮಟ್ಟ, ಸಾಮರ್ಥ್ಯ ಮತ್ತು ನಿಗದಿಪಡಿಸಿದ ಕಾಲಾವಧಿಯೊಳಗೆ ಸಾಧನೆ ಮಾಡುವುದನ್ನು ಅವಲಂಬಿಸಿ ನಿರ್ಧರಿಸಬೇಕು. ಪೂರ್ಣ ಮಟ್ಟದ ಸಾಧನೆಯನ್ನು ಮುಟ್ಟುವುದಕ್ಕಾಗಿ ಕಾರ್ಯಗಳನ್ನು ಅನುಷ್ಠಾನಕ್ಕೆ ತರಬೇಕು. 2030ರ ಹೊತ್ತಿಗೆ ಸಾಧಿಸಬೇಕಾದ ಗುರಿಗಳ ನಿಟ್ಟಿನಲ್ಲಿ ಸಂಪನ್ಮೂಲ ಮತ್ತು ಶ್ರಮವನ್ನು ನಿಖರವಾಗಿ ಹಾಗೂ ನಿರ್ದಿಷ್ಠವಾದ ದಿಕ್ಕಿನಲ್ಲಿ ಸಾಗಿಸಬೇಕಾಗಿದೆ.

ಗುಣಮಟ್ಟದ ಶಿಕ್ಷಣವು ಸುಸ್ಥಿರ ಅಭಿವೃದ್ಧಿ ಗುರಿ 4 (SDG 4) ನ ಮೂಲಾಧಾರವಾಗಿದೆ. ಇದು ಎಲ್ಲರಿಗೂ ಒಳಗೊಳ್ಳುವ, ಸಮಾನ ಮತ್ತು ಗುಣಮಟ್ಟದ ಶಿಕ್ಷಣದ ಅಗತ್ಯವನ್ನು ಒತ್ತಿ ಹೇಳುತ್ತದೆ. ಆಜೀವಕಲಿಕೆಯ ಅವಕಾಶಗಳನ್ನು ಖಾತ್ರಿಪಡಿಸುತ್ತದೆ. ಶಾಲಾ ಶಿಕ್ಷಣವು ಈ ಗುರಿಯೊಂದಿಗೆ ನೇರವಾಗಿ ಸಂಪರ್ಕ ಹೊಂದಿದೆ. ಏಕೆಂದರೆ ಇದು ಮಗುವಿನ ಭವಿಷ್ಯಕ್ಕಾಗಿ ಅಡಿಪಾಯವನ್ನು ಹಾಕುತ್ತದೆ. ವೈಯಕ್ತಿಕ ಅಭಿವೃದ್ಧಿ, ಸಕ್ರಿಯ ಪೌರತ್ವ ಮತ್ತು ಉದ್ಯೋಗಕ್ಕೆ ಅಗತ್ಯವಾದ ಕೌಶಲ, ಜ್ಞಾನ ಮತ್ತು ಮೌಲ್ಯಗಳೊಂದಿಗೆ ಅವರನ್ನು ಸಜ್ಜುಗೊಳಿಸುತ್ತದೆ.

ಶಾಲಾ ಶಿಕ್ಷಣದ ಸಂದರ್ಭದಲ್ಲಿ ಗುಣಮಟ್ಟದ ಶಿಕ್ಷಣ ಎಂದರೆ ಪ್ರತಿಯೊಬ್ಬ ವಿದ್ಯಾರ್ಥಿಯು ಅವರ ಹಿನ್ನೆಲೆಯನ್ನು ಲೆಕ್ಕಿಸದೆ, ಅವರು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಸಾಧಿಸಲು ಅಗತ್ಯವಿರುವ ಸಂಪನ್ಮೂಲಗಳು, ಬೋಧನೆ ಮತ್ತು ಬೆಂಬಲಕ್ಕೆ ಪ್ರವೇಶವನ್ನು ಹೊಂದಿರುವ ವಾತಾವರಣವನ್ನು ಒದಗಿಸುವುದು. ಇದು ಶೈಕ್ಷಣಿಕ ಕಲಿಕೆಯನ್ನು ಮಾತ್ರವಲ್ಲದೆ ವಿಮರ್ಶಾತ್ಮಕ ಚಿಂತನೆ, ಸೃಜನಶೀಲತೆ, ಭಾವನಾತ್ಮಕ ಬುದ್ಧಿವಂತಿಕೆ ಮತ್ತು ನೈತಿಕ ಮೌಲ್ಯಗಳ ಬೆಳವಣಿಗೆಯನ್ನು ಒಳಗೊಂಡಿರುತ್ತದೆ. ಗುಣಮಟ್ಟದ ಶಿಕ್ಷಣವು ಆಧುನಿಕ ಜಗತ್ತಿನ ಸವಾಲುಗಳಿಗೆ ವಿದ್ಯಾರ್ಥಿಗಳು ಉತ್ತಮವಾಗಿ ಸಿದ್ಧರಾಗಿರುವುದನ್ನು ಖಚಿತಪಡಿಸುತ್ತದೆ ಮತ್ತು ಸಮಾಜಕ್ಕೆ ಧನಾತ್ಮಕ ಕೊಡುಗೆ ನೀಡಲು ಸಾಧ್ಯವಾಗುತ್ತದೆ.

**ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ಅನುಷ್ಠಾನಗೊಳಿಸುವ ತಂತ್ರಗಳು :**

1. **ಒಳಗೊಳ್ಳುವ ಪಠ್ಯಕ್ರಮ:** ಪ್ರಸ್ತುತವಾದ ಸವಾಲಿನ ಮತ್ತು ವಿಮರ್ಶಾತ್ಮಕ ಚಿಂತನೆ ಮತ್ತು ಸಮಸ್ಯೆ–ಪರಿಹರಿಸುವ ಕೌಶಲಗಳನ್ನು ಉತ್ತೇಜಿಸುವ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸಿ, ಪಠ್ಯಕ್ರಮವು ಸಾಂಸ್ಕೃತಿಕವಾಗಿ ಸೂಕ್ಷ್ಮವಾಗಿರಬೇಕು. ವಿದ್ಯಾರ್ಥಿಗಳ ವೈವಿಧ್ಯತೆಯನ್ನು ಪ್ರತಿಬಿಂಬಿಸುತ್ತದೆ ಮತ್ತು ಜಾಗತಿಕ ಪೌರತ್ವವನ್ನು ಉತ್ತೇಜಿಸುತ್ತದೆ. ಸಮಾಜ, ತಂತ್ರಜ್ಞಾನ ಮತ್ತು ಉದ್ಯೋಗ ಮಾರುಕಟ್ಟೆಯಲ್ಲಿನ ಬದಲಾವಣೆಗಳಿಗೆ ಅನುಗುಣವಾಗಿ ಪಠ್ಯಕ್ರಮವನ್ನು ನಿಯಮಿತವಾಗಿ ನವೀಕರಿಸಲಾಗುತ್ತದೆ ಎಂದು ಖಚಿತಪಡಿಸಿಕೊಂಡು ಭವಿಷ್ಯಕ್ಕಾಗಿ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವುದು.
2. **ಶಿಕ್ಷಕರ ತರಬೇತಿ ಮತ್ತು ವೃತ್ತಿಪರಅಭಿವೃದ್ಧಿ :** ಶಿಕ್ಷಕರಿಗೆ ಇತ್ತೀಚಿನ ಶಿಕ್ಷಣ ಕೌಶಲಗಳು, ವಿಷಯ ಜ್ಞಾನ ಮತ್ತು ವೈವಿಧ್ಯಮಯ ಕಲಿಕೆಯ ಅಗತ್ಯಗಳನ್ನು ಪೂರೈಸುವ ಸಾಮರ್ಥ್ಯವನ್ನು ಖಚಿತಪಡಿಸಿಕೊಳ್ಳಲು ನಿರಂತರ ವೃತ್ತಿಪರ ಅಭಿವೃದ್ಧಿಯಲ್ಲಿ ಹೂಡಿಕೆ ಮಾಡಿ. ವಿದ್ಯಾರ್ಥಿಗಳನ್ನು ಅನ್ವೇಷಿಸಲು, ಪ್ರಶ್ನಿಸಲು ಮತ್ತು ಸಕ್ರಿಯವಾಗಿ ಕಲಿಯಲು ಪ್ರೋತ್ಸಾಹಿಸುವ ವಿದ್ಯಾರ್ಥಿ–ಕೇಂದ್ರಿತ ಕಲಿಕೆಯ ಪರಿಸರವನ್ನು ರಚಿಸಲು ಶಿಕ್ಷಕರಿಗೆ ಉಪಕರಣಗಳು ಮತ್ತು ಸಂಪನ್ಮೂಲಗಳನ್ನು ಒದಗಿಸುವುದು.
3. **ವಿದ್ಯಾರ್ಥಿ–ಕೇಂದ್ರಿತ ಕಲಿಕೆ:** ವಿದ್ಯಾರ್ಥಿಗಳ ಅಗತ್ಯತೆಗಳು ಮತ್ತು ಆಸಕ್ತಿಗಳ ಮೇಲೆ ಕೇಂದ್ರೀಕರಿಸುವ ಬೋಧನಾ ವಿಧಾನಗಳನ್ನು ಅಳವಡಿಸಿ, ಸಕ್ರಿಯ ಭಾಗವಹಿಸುವಿಕೆ, ಸಹಯೋಗ ಮತ್ತು ಅನುಭವದ ಕಲಿಕೆಯನ್ನು ಉತ್ತೇಜಿಸುವುದು. ಪ್ರತಿ ವಿದ್ಯಾರ್ಥಿಯ ವೈಯಕ್ತಿಕ ಸಾಮರ್ಥ್ಯ ಮತ್ತು ಸವಾಲುಗಳನ್ನು ಪೂರೈಸುವ ವೈಯಕ್ತಿಕಗೊಳಿಸಿದ ಕಲಿಕೆಯ ಯೋಜನೆಗಳನ್ನು ಪ್ರೋತ್ಸಾಹಿಸಿ, ಅವರು ತಮ್ಮದೇ ಆದ ವೇಗದಲ್ಲಿ ಕಲಿಯಲು ಅವಕಾಶ ಮಾಡಿಕೊಡುತ್ತಾರೆ.

4. **ತಂತ್ರಜ್ಞಾನದ ಬಳಕೆ:** ಕಲಿಕೆಯ ಅನುಭವಗಳನ್ನು ಹೆಚ್ಚಿಸಲು ತರಗತಿಯೊಳಗೆ ತಂತ್ರಜ್ಞಾನವನ್ನು ಸಂಯೋಜಿಸಿ ಸಂವಾದಾತ್ಮಕ ಕಲಿಕೆ, ಆನ್‌ಲೈನ್ ಸಂಶೋಧನೆ ಮತ್ತು ವ್ಯಾಪಕ ಶ್ರೇಣಿಯ ಶೈಕ್ಷಣಿಕ ಸಾಮಗ್ರಿಗಳಿಗೆ ಪ್ರವೇಶವನ್ನು ಸುಲಭಗೊಳಿಸಲು ಡಿಜಿಟಲ್ ಉಪಕರಣಗಳು ಮತ್ತು ಸಂಪನ್ಮೂಲಗಳನ್ನು ಬಳಸುವುದನ್ನು ಇದು ಒಳಗೊಂಡಿರುತ್ತದೆ. ವಿವಿಧ ಸಾಮಾಜಿಕ-ಆರ್ಥಿಕ ಗುಂಪುಗಳ ನಡುವೆ ಇರಬಹುದಾದ ಡಿಜಿಟಲ್ ವಿಭಜನೆಯನ್ನು ಸೇತುವೆಯಾಗಿ, ಎಲ್ಲಾ ವಿದ್ಯಾರ್ಥಿಗಳಿಗೆ ತಂತ್ರಜ್ಞಾನಕ್ಕೆ ಸಮಾನ ಪ್ರವೇಶವನ್ನು ಖಚಿತಪಡಿಸಿಕೊಳ್ಳುವುದು.

5. **ಮೌಲ್ಯಮಾಪನ :** ವಿದ್ಯಾರ್ಥಿಯ ತಿಳಿವಳಿಕೆ, ವಿಮರ್ಶಾತ್ಮಕ ಚಿಂತನೆ, ಸೃಜನಶೀಲತೆ ಮತ್ತು ಜ್ಞಾನದ ಅನ್ವಯವನ್ನು ಅಳೆಯಲು ಸಾಂಪ್ರದಾಯಿಕ ಪರೀಕ್ಷೆಗಳನ್ನು ಮೀರಿದ ವೈವಿಧ್ಯಮಯ ಮೌಲ್ಯಮಾಪನ ವಿಧಾನಗಳನ್ನು ಬಳಸಿ ವಿದ್ಯಾರ್ಥಿಗಳಿಗೆ ರಚನಾತ್ಮಕ ಪ್ರತಿಕ್ರಿಯೆಯನ್ನು ನೀಡಿ, ಸುಧಾರಣೆಗಾಗಿ ಕ್ಷೇತ್ರಗಳನ್ನು ಗುರುತಿಸಲು ಮತ್ತು ಬೆಳವಣಿಗೆಯ ಮನಸ್ಥಿತಿಯನ್ನು ಪ್ರೋತ್ಸಾಹಿಸಲು ಅವರಿಗೆ ಸಹಾಯ ಮಾಡುವುದು.
6. **ಸುರಕ್ಷಿತ ಮತ್ತು ಬೆಂಬಲಿತ ಪರಿಸರ:** ಎಲ್ಲಾ ವಿದ್ಯಾರ್ಥಿಗಳು ಗೌರವಾನ್ವಿತ ಮತ್ತು ಮೌಲ್ಯಯುತವೆಂದು ಭಾವಿಸುವ ಸುರಕ್ಷಿತ, ಅಂತರ್ಗತ ಮತ್ತು ಬೆಂಬಲದ ಶಾಲಾ ವಾತಾವರಣವನ್ನು ರಚಿಸಿ, ಇದು ಬೆದರಿಕೆಯಲ್ಲದ ವಿಧಾನಗಳನ್ನು ಅನುಷ್ಠಾನಗೊಳಿಸುವುದು. ಮಾನಸಿಕ ಆರೋಗ್ಯವನ್ನು ಉತ್ತೇಜಿಸುವುದು ಮತ್ತು ವಿದ್ಯಾರ್ಥಿಗಳ ದೈಹಿಕ ಸುರಕ್ಷತೆಯನ್ನು ಖಾತ್ರಿಪಡಿಸುವುದನ್ನು ಒಳಗೊಂಡಿರುತ್ತದೆ. ವಿದ್ಯಾರ್ಥಿಗಳು ಮತ್ತು ಸಿಬ್ಬಂದಿ ನಡುವೆ ಪರಸ್ಪರ ಗೌರವ, ಸಹಾನುಭೂತಿ ಮತ್ತು ಸಹಕಾರವನ್ನು ಬೆಳೆಸುವ ಶಾಲಾ ಸಂಸ್ಕೃತಿಯನ್ನು ಪ್ರೋತ್ಸಾಹಿಸುವುದು.
7. **ಪೋಷಕರ ಮತ್ತು ಸಮುದಾಯದ ಜೊತೆ ಸಭೆಗಳು ಮತ್ತು ತೊಡಗಿಕೊಳ್ಳುವಿಕೆ:** ಶೈಕ್ಷಣಿಕ ಪ್ರಕ್ರಿಯೆಯಲ್ಲಿ ಪೋಷಕರು ಮತ್ತು ಸ್ಥಳೀಯ ಸಮುದಾಯವನ್ನು ತೊಡಗಿಸಿಕೊಳ್ಳಿ. ಇದು ವಿದ್ಯಾರ್ಥಿಗಳ ಪ್ರಗತಿಯ ಬಗ್ಗೆ ನಿಯಮಿತ ಸಂವಹನವನ್ನು ಒಳಗೊಂಡಿರುತ್ತದೆ. ಶಾಲಾ ಚಟುವಟಿಕೆಗಳಲ್ಲಿ ಪೋಷಕರು ಒಳಗೊಳ್ಳುವುದು ಮತ್ತು ಸ್ಥಳೀಯ ವ್ಯವಹಾರಗಳು ಮತ್ತು ಸಂಸ್ಥೆಗಳೊಂದಿಗೆ ಪಾಲುದಾರಿಕೆಯನ್ನು ರಚಿಸುವುದು. ವಿದ್ಯಾರ್ಥಿಗಳು ತಮ್ಮ ತರಗತಿಯ ಕಲಿಕೆಯನ್ನು ನೈಜ ಪ್ರಪಂಚದ ಸಮಸ್ಯೆಗಳು ಮತ್ತು ಸಮುದಾಯದ ಅಗತ್ಯಗಳೊಂದಿಗೆ ಸಂಪರ್ಕಿಸಲು ಅವಕಾಶ ನೀಡುವ ಸಮುದಾಯ ಆಧಾರಿತ ಕಲಿಕೆಯ ಯೋಜನೆಗಳನ್ನು ಪ್ರೋತ್ಸಾಹಿಸುವುದು.
8. **ಸಂಪನ್ಮೂಲಗಳಿಗೆ ಸಮಾನ ಪ್ರವೇಶ:** ಎಲ್ಲಾ ವಿದ್ಯಾರ್ಥಿಗಳು, ಅವರ ಹಿನ್ನೆಲೆಯನ್ನು ಲೆಕ್ಕಿಸದೆ, ಅವರು ಯಶಸ್ವಿಯಾಗಲು ಅಗತ್ಯವಿರುವ ಸಂಪನ್ಮೂಲಗಳಿಗೆ ಪ್ರವೇಶವನ್ನು ಹೊಂದಿದ್ದಾರೆ ಎಂದು ಖಚಿತಪಡಿಸಿಕೊಳ್ಳಿ. ಇದು ಪಠ್ಯಪುಸ್ತಕಗಳು, ಶಾಲಾ ಸರಬರಾಜುಗಳು, ಪಠ್ಯೇತರ ಚಟುವಟಿಕೆಗಳು ಮತ್ತು ಬೋಧನೆ ಅಥವಾ ಸಮಾಲೋಚನೆಯಂತಹ ಹೆಚ್ಚುವರಿ ಬೆಂಬಲ ಸೇವೆಗಳನ್ನು ಒಳಗೊಂಡಿರುತ್ತದೆ. ಉದ್ದೇಶಿತ ಮಧ್ಯಸ್ಥಿಕೆಗಳು ಮತ್ತು ಬೆಂಬಲ ಕಾರ್ಯಕ್ರಮಗಳ ಮೂಲಕ ಹಣಕಾಸಿನ ತೊಂದರೆಗಳು, ಅಸಾಮರ್ಥ್ಯಗಳು ಅಥವಾ ಭಾಷಾ ವ್ಯತ್ಯಾಸಗಳಂತಹ ಶಿಕ್ಷಣದ ಅಡೆತಡೆಗಳನ್ನು ಪರಿಹರಿಸುವುದು.
9. **ಸಮಗ್ರ ಶಿಕ್ಷಣ:** ವಿದ್ಯಾರ್ಥಿಯ ಒಟ್ಟಾರೆ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುವ ಸಮಗ್ರ ಶಿಕ್ಷಣ ವಿಧಾನಗಳನ್ನು ಅಳವಡಿಸಿಕೊಳ್ಳಿ. ಇದು ಶೈಕ್ಷಣಿಕ ಉತ್ಕೃಷ್ಟತೆ ಮಾತ್ರವಲ್ಲದೆ ದೈಹಿಕ ಆರೋಗ್ಯ, ಭಾವನಾತ್ಮಕ ಯೋಗಕ್ಷೇಮ, ಸಾಮಾಜಿಕ ಕೌಶಲಗಳು ಮತ್ತು ನೈತಿಕ ಮೌಲ್ಯಗಳನ್ನು ಒಳಗೊಂಡಿದೆ. ತರಗತಿಯ ಆಚೆಗೆ ಜೀವನಕ್ಕೆ ಸಿದ್ಧರಾಗಿರುವ ಸುಸಜ್ಜಿತ ವ್ಯಕ್ತಿಗಳನ್ನು ಅಭಿವೃದ್ಧಿಪಡಿಸಲು ಕ್ರೀಡೆಗಳು, ಕಲೆಗಳು ಮತ್ತು ಸಮುದಾಯ ಸೇವೆಯಲ್ಲಿ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಿ.
10. **ಮೇಲ್ವಿಚಾರಣೆ ಮತ್ತು ಹೊಣೆಗಾರಿಕೆ:** ಶಾಲೆಯಲ್ಲಿ ನೀಡಲಾಗುತ್ತಿರುವ ಶಿಕ್ಷಣದ ಗುಣಮಟ್ಟವನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಿ ಮತ್ತು ಮೌಲ್ಯಮಾಪನ ಮಾಡಿ. ಅಂತರವನ್ನು ಗುರುತಿಸಲು, ಪ್ರಗತಿಯನ್ನು ಅಳೆಯಲು ಮತ್ತು ಪಠ್ಯಕ್ರಮದ ಬದಲಾವಣೆಗಳು, ಶಿಕ್ಷಕರ ತರಬೇತಿ ಮತ್ತು ಸಂಪನ್ಮೂಲ ಹಂಚಿಕೆಯ ಬಗ್ಗೆ ತಿಳುವಳಿಕೆಯುಳ್ಳ ನಿರ್ಧಾರಗಳನ್ನು ತೆಗೆದುಕೊಳ್ಳಲು ಡೇಟಾ-ಚಾಲಿತ ವಿಧಾನಗಳನ್ನು ಬಳಸಿ. ಶಿಕ್ಷಕರು, ನಿರ್ವಾಹಕರು ಮತ್ತು ನೀತಿ ನಿರೂಪಕರು ಸೇರಿದಂತೆ ಎಲ್ಲಾ ಪಾಲುದಾರರು ಗುಣಮಟ್ಟದ ಶಿಕ್ಷಣವನ್ನು ನೀಡಲು ಬದ್ಧರಾಗಿದ್ದಾರೆ ಎಂದು ಖಚಿತಪಡಿಸಿಕೊಳ್ಳಲು ಹೊಣೆಗಾರಿಕೆಯ ಕಾರ್ಯವಿಧಾನಗಳನ್ನು ಸ್ಥಾಪಿಸುವುದು.

ಶಾಲೆಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ಸಾಧಿಸುವುದು ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಮತ್ತು ನ್ಯಾಯೋಚಿತ, ಅಂತರ್ಗತ ಮತ್ತು ಸಮೃದ್ಧ ಸಮಾಜದ ಸೃಷ್ಟಿಗೆ ಅವಶ್ಯಕವಾಗಿದೆ. ಈ ಕಾರ್ಯತಂತ್ರಗಳನ್ನು ಕಾರ್ಯಗತಗೊಳಿಸುವ ಮೂಲಕ, ಎಲ್ಲಾ ವಿದ್ಯಾರ್ಥಿಗಳು ಉತ್ತಮ ಗುಣಮಟ್ಟದ ಶಿಕ್ಷಣವನ್ನು ಪಡೆಯುವುದನ್ನು

ಶಾಲೆಗಳು ಖಚಿತಪಡಿಸಿಕೊಳ್ಳಬಹುದು, ಅದು ಅವರನ್ನು ಭವಿಷ್ಯದ ಸವಾಲುಗಳು ಮತ್ತು ಅವಕಾಶಗಳಿಗೆ ಸಿದ್ಧಪಡಿಸುತ್ತದೆ. ಹಾಗೆಯೇ ಸುಸ್ಥಿರ ಅಭಿವೃದ್ಧಿಯ ವಿಶಾಲ ಗುರಿಗಳಿಗೆ ಕೊಡುಗೆ ನೀಡುತ್ತದೆ.

**ಘಟನೆ–01.**

ನಾಲ್ಕನೇ ತರಗತಿ ಓದುತ್ತಿದ್ದ ವಿದ್ಯಾರ್ಥಿನಿ ರಸ್ತೆ ಅಪಘಾತದಲ್ಲಿ ಎರಡೂ ಕಾಲು ಕಳೆದುಕೊಂಡಿದ್ದಳು. 'ತನ್ನ ಮಗಳ ಮುಂದಿನ ಬದುಕೇನು? ಇವಳಿಗೆ ಮುಂದಿನ ಶಿಕ್ಷಣ ಸಾಧ್ಯವೇ? ಎಂದು ಅವಳ ತಂದೆ ಚಿಂತಿಸುತ್ತಿದ್ದ. ಪತ್ರಿಕೆ ಓದುತ್ತಿದ್ದ ವಿದ್ಯಾರ್ಥಿನಿ 'ಅಪ್ಪಾ ನೋಡಿ ಪತ್ರಿಕೆ, ಸಮನ್ವಯ ಶಿಕ್ಷಣದಲ್ಲಿ ವಿಕಲಚೇತನ ಮಕ್ಕಳಿಗೂ ಮುಖ್ಯವಾಹಿನಿ ಶಾಲೆಗಳಲ್ಲಿ ಶಿಕ್ಷಣ ನೀಡಬೇಕಂತೆ. ಶಾಲೆಗೆ ಬರಲಾಗದ ಹಲವು ವಿಕಲಚೇತನ ಮಕ್ಕಳ ಶಿಕ್ಷಣಕ್ಕೆ ವಿಶೇಷ ತರಬೇತಿ ಪಡೆದ ಶಿಕ್ಷಕರು ಮಕ್ಕಳ ಮನೆಗೇ ಬರುತ್ತಾರಂತೆ'. ಮಗಳು ಓದಿದ ಈ ಸುದ್ದಿ ಕೇಳಿ ತಂದೆ ರೋಮಾಂಚನಗೊಂಡರು.

**ಘಟನೆ: 02**

ರಮೇಶನ ತಂದೆಯನ್ನು ದೊಡ್ಡ ರೈತರು ಎನ್ನಬಹುದು. ಸುಮಾರು 15 ಎಕರೆ ಹೊಲಗದ್ದೆಗಳ ಮಾಲೀಕರು. ಉತ್ತುವ ಬಿತ್ತುವ ಕಾಲ ಬಂತು ಎಂದರೆ ಶಾಲೆಗೆ ಹೋಗುವುದನ್ನು ಬಿಟ್ಟು ರಮೇಶ ತಂದೆಯ ಜೊತೆ ಹೊಲ, ಗದ್ದೆಯಲ್ಲಿ ಕೆಲಸಕ್ಕೆ ನಿಲ್ಲಬೇಕು. ರಾತ್ರಿ ಹೊಲ ಕಾಯಲು ಹೋಗಲೇಬೇಕು. ಆಮೇಲೆ ಕಟಾವು ಕಾಲ. ರಮೇಶನಿಗೆ ಕಲಿತು ಏನನ್ನಾದರೂ ಸಾಧಿಸುವ ಬಯಕೆ. ಆದರೆ ನಿರಂತರವಾಗಿ ಶಾಲೆಗೆ ಹೋಗಲಾಗದ ಪರಿಸ್ಥಿತಿಯಿಂದ ಪಾಠ ಪ್ರವಚನಗಳಲ್ಲಿ ಹಿಂದಿದ್ದ. ತನ್ನ ಗೆಳೆಯರು ಪಾಠಗಳನ್ನು ಕಲಿಯುತ್ತಿದ್ದಾರೆ. ತಾನೇನೂ ಓದಿಲ್ಲ ಎಂಬ ಕೊರತೆ ರಮೇಶನನ್ನು ಕಾಡುತ್ತಿತ್ತು. ಹಾಗಾಗಿ ಅವನು ಗೆಳೆಯರನ್ನು ಬಿಟ್ಟ, ಓದುವುದನ್ನು ಬಿಟ್ಟ. ಕಡೆಗೊಂದು ದಿನ ಶಾಲೆಗೆ ಹೋಗುವುದನ್ನು ಬಿಟ್ಟು ಅಪ್ಪನೊಂದಿಗೆ ಕೇವಲ ಹೊಲದ ಕೆಲಸಕ್ಕೇ ನಿಂತ.

ಮಕ್ಕಳಿಗೆ ಶಿಕ್ಷಣದ ಆವಶ್ಯಕತೆ ಮುಖ್ಯವಾಗಿದೆ. ಶಿಕ್ಷಣ ಮಕ್ಕಳ ಹಕ್ಕು. ಶಿಕ್ಷಣದ ಅವಕಾಶಗಳನ್ನು ಮಕ್ಕಳಿಗೆ ಒದಗಿಸುವುದು ವಯಸ್ಕ ಸಮಾಜದ ಕರ್ತವ್ಯ. ಆದರೂ, ನಮ್ಮ ದೇಶದಲ್ಲಿ ನೂರಾರು ಸಾವಿರಾರು ಮಕ್ಕಳು ನೂರಾರು ನೆಪಗಳಿಂದಾಗಿ ಶಿಕ್ಷಣದಿಂದ ವಂಚಿತರಾಗಿದ್ದಾರೆ. ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನೆಲ್ಲಾ ಶಾಲೆಗೆ ಕರೆತಂದು ಮಕ್ಕಳಿಗೆ ಶಿಕ್ಷಣ ನೀಡುವ ಹೊಣೆ ಸರ್ಕಾರ ಹಾಗೂ ಪೋಷಕರ ಮೇಲಿದೆ. ಇದಕ್ಕಾಗಿ ಸರ್ಕಾರ ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯಿದೆ 2009ನ್ನು ಹೊರಡಿಸಿದೆ. 6 ರಿಂದ 14 ವರ್ಷದೊಳಗಿನ ಮಕ್ಕಳನ್ನು ಶಾಲೆಗೆ ಸೇರಿಸಿ ಶಿಕ್ಷಣ ಒದಗಿಸುವುದು ಸರ್ಕಾರ ಮತ್ತು ಪೋಷಕರ ಕರ್ತವ್ಯ ಎಂದು ಸಂವಿಧಾನದಲ್ಲೂ ಹೇಳಿದೆ.

**ಗುಣಮಟ್ಟದ ಶಿಕ್ಷಣ ಜಾರಿ ಮಾಡಲು ಸರ್ಕಾರಗಳು ಕೈಗೊಳ್ಳಲು ಒಪ್ಪಿರುವ ಕ್ರಮಗಳು:**

- ದೇಶದಲ್ಲಿ ಶಿಕ್ಷಣವನ್ನು ಒಂದು ಮೂಲಭೂತ ಹಕ್ಕು ಎಂದು ಪರಿಗಣಿಸಲಾಗಿದೆ. ಅದಕ್ಕಾಗಿ ತರಬೇತಿ ಹೊಂದಿದ ಶಿಕ್ಷಕರಿರುವ, ಸುರಕ್ಷಿತಶಾಲೆಗಳನ್ನು ನಡೆಸುವುದು.
- ಮಕ್ಕಳು ಯಾವುದೇ ಪರಿಸ್ಥಿತಿಯಲ್ಲಿ ಇದ್ದರೂ ಅವರನ್ನು ಪುನರ್ವಸತಿಗೊಳಿಸಿ, ಅವರಿಗೆ ನುರಿತ ಶಿಕ್ಷಕರ ಮೂಲಕ
- ಪ್ರಾಥಮಿಕ ಶಿಕ್ಷಣವನ್ನು ಕಡ್ಡಾಯವಾಗಿ ನೀಡುವುದು.


ಲಿಂಗ ಸಮಾನತೆ ಸೂಚ್ಯಂಕ ಎರಡು ಸ್ಥಾನ ಕುಸಿದ ಭಾರತ

| ದೇಶ | ಸ್ಥಾನ |
|---|---|
| ಐಸ್‌ಲ್ಯಾಂಡ್ | 1 |
| ಫಿನ್‌ಲ್ಯಾಂಡ್ | 2 |
| ನಾರ್ವೆ | 3 |
| ನ್ಯೂಜಿಲೆಂಡ್ | 4 |
| ಸ್ವೀಡನ್ | 5 |
| ಬ್ರಿಟನ್ | 14 |
| ಅಮೆರಿಕ | 43 |
| ಭಾರತ | 129 |
| ಪಾಕಿಸ್ತಾನ | 145 |
| ಸುಡಾನ್ | 146 |

- ರಾಜ್ಯ ಸರ್ಕಾರಗಳ ನಾಯಕರು: 10ನೇ ಸ್ಥಾನ
- ಪ್ರೌಢ ಶಿಕ್ಷಣಕ್ಕೆ ದಾಖಲು: ಭಾರತಕ್ಕೆ 65ನೇ ಸ್ಥಾನ

- ಶಿಕ್ಷಣದಿಂದ ಯಾವುದೇ ಮಕ್ಕಳು ಹೊರಗುಳಿಯಬಾರದು. ಹಾಗಾಗಿ ಯಾವುದೇ ರೀತಿಯ ತಾರತಮ್ಯಕ್ಕೊಳಗಾಗದಂತೆ ನೋಡಿಕೊಂಡು ವಿಕಲಚೇತನ ಮಕ್ಕಳಿಗೂ ಅವರ ಆವಶ್ಯಕತೆಗೆ ತಕ್ಕಂತೆ ಶಿಕ್ಷಣ ನೀಡುವುದು.



Scanned with CamScanner

- ಮಕ್ಕಳು ಪಡೆಯುವ ಶಿಕ್ಷಣದಿಂದ ಅವರಲ್ಲಿ ಜೀವನ ಕೌಶಲ, ಸೃಜನಾತ್ಮಕತೆ, ಆತ್ಮಸ್ಥೈರ್ಯ ಹೆಚ್ಚಿಸುವಂತಹ ಶಿಕ್ಷಣ ಒದಗಿಸುವುದು. ಮಕ್ಕಳಿಗಾಗಿ

- ವಿದ್ಯಾರ್ಥಿವೇತನ, ವೃತ್ತಿಪರ ಶಿಕ್ಷಣ, ವಿದ್ಯಾರ್ಥಿನಿಲಯಗಳನ್ನು ಹೆಚ್ಚಿಸುವುದು.
- ನಮ್ಮ ದೇಶದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯಿದೆ–2009 ಜಾರಿಯಲ್ಲಿದೆ. ಇದರಿಂದ ಲಕ್ಷಗಟ್ಟಲೇ ಮಕ್ಕಳಿಗೆ ಶಿಕ್ಷಣ ನೀಡುವಲ್ಲಿ ನಮ್ಮ ಸರ್ಕಾರ ಸಫಲತೆ ಹೊಂದಿದೆ. ನಮ್ಮ ಸಂವಿಧಾನ ವಿಧಿ 21(ಎ) ಮಕ್ಕಳ ಶಿಕ್ಷಣದ ಹಕ್ಕನ್ನು ಎತ್ತಿ ಹಿಡಿಯುತ್ತದೆ. ಅಂಕಿ ಅಂಶಗಳ ಪ್ರಕಾರ ನಮ್ಮ ರಾಜ್ಯದಲ್ಲಿ ಇನ್ನೂ 122138 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ. (2017)

**ನಾವೇನು ಮಾಡಬಹುದು?**

- ನಿಮ್ಮ ಮನೆಗಳ ಸುತ್ತಮುತ್ತ ಶಾಲೆಗೆ ಹೋಗದಿರುವ ಮಕ್ಕಳು ಕಂಡು ಬಂದರೆ

  ಅವರಿಗೆ ಶಿಕ್ಷಣದ ಮಹತ್ವ ಕುರಿತು ತಿಳಿಸಿ, ಶಾಲೆಗೆ ಕಳುಹಿಸುವ ಪ್ರಯತ್ನ ಮಾಡಿ. ನಿಮ್ಮ ಶಿಕ್ಷಕರಿಗೆ ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಬಗ್ಗೆ ವಿವರ ನೀಡಿ.

- ಮಕ್ಕಳು ಶಾಲೆಗೆ ಹೋಗದೇ ಬಾಲಕಾರ್ಮಿಕರಾಗಿರುವುದು ತಿಳಿದು ಬಂದರೆ, ಚೈಲ್ಡ್‌ಹೆಲ್ಪ್ ಲೈನ್ 1098ಗೆ ಕರೆಮಾಡಿ ಮಾಹಿತಿಕೊಡಿ. ಇದು ಉಚಿತ ದೂರವಾಣಿ ಕರೆ ನಿಮ್ಮ ವಿವರಗಳನ್ನು ಅಲ್ಲಿ ನೀಡಬೇಕಿಲ್ಲ.

**5. ಲಿಂಗ ಸಮಾನತೆ:**

ಲಿಂಗ ಸಮಾನತೆಯು ಪ್ರಮುಖ ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ಒಂದಾಗಿದೆ (SDG 5) ಮತ್ತು ಇದು ಶಾಲಾ ಶಿಕ್ಷಣದೊಂದಿಗೆ ಆಂತರಿಕವಾಗಿ ಸಂಬಂಧ ಹೊಂದಿದೆ. ಬಾಲ್ಯದಿಂದಲೇ ಲಿಂಗದ ಬಗೆಗಿನ ವರ್ತನೆಗಳು ಮತ್ತು ವರ್ತನೆಗಳನ್ನು ರೂಪಿಸುವಲ್ಲಿ ಶಾಲೆಗಳು ಪ್ರಮುಖ ಪಾತ್ರವಹಿಸುತ್ತವೆ. ಶಿಕ್ಷಣದಲ್ಲಿ ಲಿಂಗ ಸಮಾನತೆಯನ್ನು ಉತ್ತೇಜಿಸುವ ಮೂಲಕ, ಹುಡುಗಿಯರು ಮತ್ತು ಹುಡುಗರಿಬ್ಬರಿಗೂ ಯಶಸ್ವಿಯಾಗಲು ಸಮಾನ ಅವಕಾಶಗಳಿವೆ ಎಂದು ಶಾಲೆಗಳು ಖಚಿತ ಪಡಿಸಿಕೊಳ್ಳಬಹುದು, ಅಡೆತಡೆಗಳನ್ನು ಮುರಿದು ಮತ್ತು ಲಿಂಗ ತಾರತಮ್ಯವನ್ನು ಶಾಶ್ವತಗೊಳಿಸುವ ಪೂರ್ವಾಗ್ರಹಗಳನ್ನು ವಿರೋಧಿಸುತ್ತದೆ. ಶಾಲಾ ಶಿಕ್ಷಣದಲ್ಲಿ ಲಿಂಗ ಸಮಾನತೆ ಎಂದರೆ ಎಲ್ಲಾ ವಿದ್ಯಾರ್ಥಿಗಳಿಗೆ ಅವರ ಲಿಂಗವನ್ನು ಪರಿಗಣಿಸದೆ ಸಮಾನ ಅವಕಾಶಗಳು, ಸಂಪನ್ಮೂಲಗಳು ಮತ್ತು ಚಿಕಿತ್ಸೆಯನ್ನು ಒದಗಿಸುವುದು. ಹುಡುಗಿಯರು ಮತ್ತು ಹುಡುಗರಿಬ್ಬರೂ ಒಂದೇ ಗುಣಮಟ್ಟದ ಶಿಕ್ಷಣವನ್ನು ಪಡೆಯಬಹುದು. ಎಲ್ಲಾ ಚಟುವಟಿಕೆಗಳಲ್ಲಿ ಸಂಪೂರ್ಣವಾಗಿ ಭಾಗವಹಿಸಬಹುದು ಮತ್ತು ಲಿಂಗದ ಆಧಾರದ ಮೇಲೆ ತಾರತಮ್ಯ ಅಥವಾ ಪಕ್ಷಪಾತವನ್ನು ಎದುರಿಸದೆ ತಮ್ಮ ಸಾಮರ್ಥ್ಯವನ್ನು ಸಾಧಿಸಬಹುದು ಎಂದು ಖಚಿತಪಡಿಸಿಕೊಳ್ಳುವುದನ್ನು ಇದು ಒಳಗೊಂಡಿರುತ್ತದೆ.

**ಶಾಲೆಗಳಲ್ಲಿ ಲಿಂಗ ಸಮಾನತೆಯನ್ನು ಕಾರ್ಯಗತಗೊಳಿಸುವ ತಂತ್ರಗಳು:**

1. **ಲಿಂಗ–ಸೂಕ್ಷ್ಮ ಪಠ್ಯಕ್ರಮ:** ಲಿಂಗ ಪಕ್ಷಪಾತಗಳು ಮತ್ತು ಪೂರ್ವಾಗ್ರಹಗಳಿಂದ ಮುಕ್ತವಾದ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸಿ ಮತ್ತು ಕಾರ್ಯಗತಗೊಳಿಸಿ. ಬೋಧನಾ ಸಾಮಗ್ರಿಗಳು ಮತ್ತು ಪಠ್ಯಪುಸ್ತಕಗಳು ಎರಡೂ ಲಿಂಗಗಳನ್ನು ವೈವಿಧ್ಯಮಯ ಪಾತ್ರಗಳಲ್ಲಿ ಚಿತ್ರಿಸುತ್ತವೆ ಮತ್ತು ಸಾಂಪ್ರದಾಯಿಕ ಲಿಂಗ ರೂಢಿಗಳನ್ನು ಮುರಿಯಲು

   ಕೊಡುಗೆ ನೀಡುತ್ತವೆಎಂದು ಖಚಿತಪಡಿಸಿಕೊಳ್ಳಿ. ಲಿಂಗ ಸಮಾನತೆ, ಮಾನವ ಹಕ್ಕುಗಳು ಮತ್ತು ಈ ವಿಷಯಗಳ ಬಗ್ಗೆ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ಪಠ್ಯಕ್ರಮದಲ್ಲಿ ಸಮಾನ ಅವಕಾಶಗಳ ಪ್ರಾಮುಖ್ಯತೆಗೆ ಸಂಬಂಧಿಸಿದ ವಿಷಯಗಳನ್ನು ಸೇರಿಸುವುದು.
2. **ಸಮಾನ ಭಾಗವಹಿಸುವಿಕೆ:** ಕ್ರೀಡೆ, ವಿಜ್ಞಾನ, ತಂತ್ರಜ್ಞಾನ ಮತ್ತು ನಾಯಕತ್ವದ ಪಾತ್ರಗಳನ್ನು ಒಳಗೊಂಡಂತೆ ಎಲ್ಲಾ ಶಾಲಾ ಚಟುವಟಿಕೆಗಳಲ್ಲಿ ಹುಡುಗಿಯರು ಮತ್ತು ಹುಡುಗರ ಸಮಾನ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಿ ಮತ್ತು

ಬೆಂಬಲಿಸಿ. ಶಾಲಾ ಕೌನ್ಸಿಲ್‌ಗಳು, ವಿದ್ಯಾರ್ಥಿ ಸಂಸ್ಥೆಗಳು ಮತ್ತು ಇತರ ನಾಯಕತ್ವದ ಅವಕಾಶಗಳಲ್ಲಿ ಹುಡುಗಿಯರು ಮತ್ತು ಹುಡುಗರಿಬ್ಬರೂ ಸಮಾನವಾಗಿ ಪ್ರತಿನಿಧಿಸುತ್ತಿದ್ದಾರೆ ಎಂದು ಖಚಿತಪಡಿಸಿಕೊಳ್ಳುವುದು.

3. **ಶಿಕ್ಷಕರ ತರಬೇತಿ ಮತ್ತು ಜಾಗೃತಿ:** ಶಿಕ್ಷಕರಿಗೆ ತಮ್ಮ ಬೋಧನಾ ಅಭ್ಯಾಸಗಳಲ್ಲಿ ಲಿಂಗ ಪಕ್ಷಪಾತಗಳನ್ನು ಗುರುತಿಸಲು ಮತ್ತು ಪರಿಹರಿಸಲು ತರಬೇತಿ ನೀಡಿ. ಹುಡುಗಿಯರು ಮತ್ತು ಹುಡುಗರಿಬ್ಬರೂ ಮೌಲ್ಯಯುತ ಮತ್ತು ಗೌರವಾನ್ವಿತರು ಎಂದು ಭಾವಿಸುವ ಅಂತರ್ಗತ ತರಗತಿಯ ವಾತಾವರಣವನ್ನು ಬೆಳೆಸಲು ಕೌಶಲಗಳೊಂದಿಗೆ ಅವರನ್ನು ಸಜ್ಜುಗೊಳಿಸಿ. ಲಿಂಗ ಸಮಾನತೆ ಮತ್ತು ಅಂತರ್ಗತ ಶಿಕ್ಷಣ ತಂತ್ರಗಳ ಮೇಲೆ ನಡೆಯುತ್ತಿರುವ ವೃತ್ತಿಪರ ಅಭಿವೃದ್ಧಿಯನ್ನು ಒದಗಿಸುವುದು.
4. **ಸುರಕ್ಷಿತ ಶಾಲಾ ಪರಿಸರ:** ಲಿಂಗವನ್ನು ಪರಿಗಣಿಸದೆ ಎಲ್ಲಾ ವಿದ್ಯಾರ್ಥಿಗಳಿಗೆ ಸುರಕ್ಷಿತ ಮತ್ತು ಸ್ವಾಗತಾರ್ಹವಾದ ಶಾಲಾ ವಾತಾವರಣವನ್ನು ರಚಿಸಿ. ಲಿಂಗ ಆಧಾರಿತ ಹಿಂಸಾಚಾರ, ಕಿರುಕುಳ ಮತ್ತು ಬೆದರಿಕೆಯಿಲ್ಲದ ವಿಧಾನಗಳನ್ನು ಜಾರಿಗೊಳಿಸಿ ಮತ್ತು ಯಾವುದೇ ಘಟನೆಗಳನ್ನು ವರದಿ ಮಾಡುವಲ್ಲಿ ವಿದ್ಯಾರ್ಥಿಗಳು ಸುರಕ್ಷಿತವಾಗಿರುತ್ತಾರೆ ಎಂದು ಖಚಿತಪಡಿಸಿಕೊಳ್ಳಿ. ಎಲ್ಲಾ ವಿದ್ಯಾರ್ಥಿಗಳು, ವಿಶೇಷವಾಗಿ ಹುಡುಗಿಯರು, ನೈರ್ಮಲ್ಯ ಮತ್ತು ಖಾಸಗಿ ಸ್ಥಳಗಳಿಗೆ ಪ್ರವೇಶವನ್ನು ಹೊಂದಿದ್ದಾರೆ ಎಂದು ಖಚಿತಪಡಿಸಿಕೊಳ್ಳಲು ಹುಡುಗ–ಹುಡುಗಿಯರಿಗೆ ಉತ್ತಮವಾಗಿ ನಿರ್ವಹಿಸಲಾದ ನೈರ್ಮಲ್ಯ ಸೌಲಭ್ಯಗಳನ್ನು ಒದಗಿಸುವುದು.
5. **ಹುಡುಗಿಯರಿಗೆ STEM ಶಿಕ್ಷಣವನ್ನು ಉತ್ತೇಜಿಸುವುದು:** ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ (STEM) ನಂತಹ ಸಾಂಪ್ರದಾಯಿಕವಾಗಿ ಹುಡುಗರಿಂದ ಪ್ರಾಬಲ್ಯ ಹೊಂದಿರುವ ವಿಷಯಗಳನ್ನು ಮುಂದುವರಿಸಲು ಹುಡುಗಿಯರನ್ನು ಸಕ್ರಿಯವಾಗಿ ಪ್ರೋತ್ಸಾಹಿಸಿ. ಈ ಕ್ಷೇತ್ರಗಳನ್ನು ಅನ್ವೇಷಿಸಲು ಹುಡುಗಿಯರನ್ನು ಪ್ರೇರೇಪಿಸಲು ಮಾರ್ಗದರ್ಶನ, ಕಾರ್ಯಾಗಾರಗಳು ಮತ್ತು ರೋಲ್ ಮಾಡೆಲ್‌ಗಳನ್ನು ನೀಡಿ. ಧನಾತ್ಮಕ ಬಲವರ್ಧನೆಯ ಮೂಲಕ ಮತ್ತು ಈ ಪ್ರದೇಶಗಳಲ್ಲಿ ಯಶಸ್ವಿ ಸ್ತ್ರೀ ಮಾದರಿಗಳನ್ನು ಪ್ರದರ್ಶಿಸುವ ಮೂಲಕ ಕೆಲವು ವಿಷಯಗಳು ಅಥವಾ ವೃತ್ತಿಗಳು "ಹುಡುಗಿಯರಿಗಾಗಿ ಅಲ್ಲ" ಎಂದು ಸೂಚಿಸುವ ಪೂರ್ವಾಗ್ರಹಗಳನ್ನು ಹೋಗಲಾಡಿಸಿ.
6. **ಪೋಷಕರ ಮತ್ತು ಸಮುದಾಯದ ಖಚಿತ ಅಭಿಪ್ರಾಯ :** ಲಿಂಗ ಸಮಾನತೆಯ ಕುರಿತು ಸಂಭಾಷಣೆಯಲ್ಲಿ ಪೋಷಕರು ಮತ್ತು ವಿಶಾಲ ಸಮುದಾಯವನ್ನು ತೊಡಗಿಸಿಕೊಳ್ಳಿ. ಹುಡುಗಿಯರು ಮತ್ತು ಹುಡುಗರಿಬ್ಬರಿಗೂ

7. ಸಮಾನ ಶೈಕ್ಷಣಿಕ ಅವಕಾಶಗಳ ಪ್ರಾಮುಖ್ಯತೆಯ ಕುರಿತು ಅವರಿಗೆ ಶಿಕ್ಷಣ ನೀಡಿ. ಹುಡುಗಿಯರು ಶಾಲೆಗೆ ಹೋಗುವುದನ್ನು ಅಥವಾ ಶಿಕ್ಷಣದಲ್ಲಿ ಸಂಪೂರ್ಣವಾಗಿ ಭಾಗವಹಿಸುವುದನ್ನು ತಡೆಯುವ ಸಾಂಸ್ಕೃತಿಕ ಅಥವಾ ಸಾಮಾಜಿಕ ಅಡೆತಡೆಗಳನ್ನು ಪರಿಹರಿಸುವುದು.
8. **ಲಿಂಗ ಅಸಮಾನತೆಗಳ ಮೇಲ್ವಿಚಾರಣೆ:** ಶಾಲಾ ದಾಖಲಾತಿ, ಧಾರಣ, ಶೈಕ್ಷಣಿಕ ಕಾರ್ಯಕ್ಷಮತೆ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸುವಿಕೆ, ಲಿಂಗದಿಂದ ವಿಂಗಡಿಸಲಾದ ಡೇಟಾವನ್ನು ನಿಯಮಿತವಾಗಿ ಸಂಗ್ರಹಿಸಿ ಮತ್ತು ವಿಶ್ಲೇಷಿಸಿ. ಶಾಲೆಯಲ್ಲಿ ಯಾವುದೇ ಲಿಂಗ ಅಸಮಾನತೆಗಳನ್ನು ಗುರುತಿಸಲು ಮತ್ತು ಪರಿಹರಿಸಲು ಈ ಡೇಟಾವನ್ನು ಬಳಸಿ, ಹುಡುಗಿಯರು ಮತ್ತು ಹುಡುಗರಿಬ್ಬರೂ ಶೈಕ್ಷಣಿಕ ಅವಕಾಶಗಳಿಂದ ಸಮಾನವಾಗಿ ಪ್ರಯೋಜನ ಪಡೆಯುತ್ತಿದ್ದಾರೆ ಎಂದು ಖಚಿತಪಡಿಸಿಕೊಳ್ಳುವುದು.
9. **ಬಾಲಕಿಯರ ಸಬಲೀಕರಣ ಕಾರ್ಯಕ್ರಮಗಳು :** ನಾಯಕತ್ವ ತರಬೇತಿ, ಸ್ವಾಭಿಮಾನದ ಕಾರ್ಯಾಗಾರಗಳು ಮತ್ತು ಆರೋಗ್ಯ ಮತ್ತು ನೈರ್ಮಲ್ಯ ಶಿಕ್ಷಣದಂತಹ ನಿರ್ದಿಷ್ಟವಾಗಿ ಹುಡುಗಿಯರನ್ನು ಸಬಲೀಕರಣಗೊಳಿಸುವ ಕಾರ್ಯಕ್ರಮಗಳನ್ನು ಜಾರಿಗೊಳಿಸಿ. ಈ ಕಾರ್ಯಕ್ರಮಗಳು ಹುಡುಗಿಯರು ಸಾಮಾಜಿಕ ಅಡೆತಡೆಗಳನ್ನು ನಿವಾರಿಸಲು ಮತ್ತು ಆತ್ಮವಿಶ್ವಾಸವನ್ನು ಬೆಳೆಸಲು ಸಹಾಯ ಮಾಡುತ್ತದೆ. ಆರ್ಥಿಕ ಸಾಕ್ಷರತೆ, ಸಂತಾನೋತ್ಪತ್ತಿ ಆರೋಗ್ಯ ಮತ್ತು ವೈಯಕ್ತಿಕ ಸುರಕ್ಷತೆಯಂತಹ ವಿಷಯಗಳನ್ನು ಒಳಗೊಂಡಿರುವ ಜೀವನಕೌಶಲ ಶಿಕ್ಷಣವನ್ನು ಒದಗಿಸಿ, ಶಾಲೆಯ ಒಳಗೆ ಮತ್ತು ಹೊರಗೆ ಸವಾಲುಗಳನ್ನು ಎದುರಿಸಲು ಹುಡುಗಿಯರು ಸಜ್ಜುಗೊಂಡಿದ್ದಾರೆ ಎಂದು ಖಚಿತಪಡಿಸಿಕೊಳ್ಳುವುದು.
10. **ಲಿಂಗ ಪೂರ್ವಾಗ್ರಹಗಳನ್ನು ತಿಳಿಸುವುದು:** ತರಗತಿಯ ಚರ್ಚೆಗಳು, ಚಟುವಟಿಕೆಗಳು ಮತ್ತು ಪಾತ್ರಾಭಿನಯದ ಮೂಲಕ ಲಿಂಗ ಪೂರ್ವಾಗ್ರಹಗಳನ್ನು ಸವಾಲು ಮಾಡಿ. ಸಾಂಪ್ರದಾಯಿಕ ಲಿಂಗ ಪಾತ್ರಗಳ ಬಗ್ಗೆ

ವಿಮರ್ಶಾತ್ಮಕವಾಗಿ ಯೋಚಿಸಲು ಮತ್ತು ಸಮಾನತೆಯನ್ನು ಅಳವಡಿಸಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ. ಎಲ್ಲಾ ವೃತ್ತಿಗಳು ಮತ್ತು ಚಟುವಟಿಕೆಗಳು ಲಿಂಗವನ್ನು ಪರಿಗಣಿಸದೆ ಎಲ್ಲರಿಗೂ ಮುಕ್ತವಾಗಿವೆ ಎಂಬ ಕಲ್ಪನೆಯನ್ನು

ಪ್ರಚಾರ ಮಾಡಿ ಮತ್ತು ಸಾಂಪ್ರದಾಯಿಕವಲ್ಲದ ಪ್ರದೇಶಗಳಲ್ಲಿ ಹುಡುಗಿಯರು ಮತ್ತು ಹುಡುಗರು ಮಾಡಿದ ಸಾಧನೆಗಳನ್ನು ಬಿಂಬಿಸಿ.

11. **ಲಿಂಗ-ಆಧಾರಿತ ಸವಾಲುಗಳಿಗೆ ಬೆಂಬಲ:** ಬಾಲ್ಯ ವಿವಾಹ ಅಥವಾ ಲಿಂಗ-ಆಧಾರಿತ ಹಿಂಸೆಯಂತಹ ಲಿಂಗ-ನಿರ್ದಿಷ್ಟ ಸವಾಲುಗಳನ್ನು ಎದುರಿಸುತ್ತಿರುವ ವಿದ್ಯಾರ್ಥಿಗಳಿಗೆ ಸಮಾಲೋಚನೆ ಮತ್ತು ಮಾರ್ಗದರ್ಶನದಂತಹ ಬೆಂಬಲ ವ್ಯವಸ್ಥೆಗಳನ್ನು ಒದಗಿಸಿ. ಆರೋಗ್ಯ ರಕ್ಷಣೆ, ಸಂತಾನೋತ್ಪತ್ತಿ ಆರೋಗ್ಯ ಶಿಕ್ಷಣ ಮತ್ತು ರಕ್ಷಣೆ ಸೇವೆಗಳ ಪ್ರವೇಶ ಸೇರಿದಂತೆ ಹುಡುಗಿಯರು ಮತ್ತು ಹುಡುಗರ ನಿರ್ದಿಷ್ಟ ಅಗತ್ಯಗಳನ್ನು ಪರಿಹರಿಸಲು ಸಂಪನ್ಮೂಲಗಳು ಲಭ್ಯವಿವೆ ಎಂದು ಖಚಿತಪಡಿಸಿಕೊಳ್ಳುವುದು.

ಈ ತಂತ್ರಗಳನ್ನು ಶಾಲಾ ಶಿಕ್ಷಣದಲ್ಲಿ ಸಂಯೋಜಿಸುವ ಮೂಲಕ, ಶಾಲೆಗಳು ಲಿಂಗ ಸಮಾನತೆಯನ್ನು ಉತ್ತೇಜಿಸಬಹುದು ಮತ್ತು ಹೆಚ್ಚು ನ್ಯಾಯಯುತ ಮತ್ತು ಸಮಾನ ಸಮಾಜವನ್ನು ರಚಿಸುವ ವಿಶಾಲ ಗುರಿಗೆ ಕೊಡುಗೆ ನೀಡಬಹುದು. ಲಿಂಗದ ಬಗೆಗಿನ ವರ್ತನೆಗಳನ್ನು ಸವಾಲು ಮಾಡುವ ಮತ್ತು ಬದಲಾಯಿಸುವಲ್ಲಿ ಶಿಕ್ಷಣವು ಪ್ರಬಲ ಸಾಧನವಾಗಿದೆ. ಲಿಂಗವನ್ನು ಪರಿಗಣಿಸದೆ ಪ್ರತಿಯೊಬ್ಬ ವಿದ್ಯಾರ್ಥಿಯೂ ಯಶಸ್ವಿಯಾಗಲು ಮತ್ತು ಜೀವನವನ್ನು ನಡೆಸಲು ಅವಕಾಶವನ್ನು ಹೊಂದಿದೆ ಎಂದು ಖಚಿತಪಡಿಸುತ್ತದೆ.

**ಘಟನೆ-01**

'ಅಕ್ಕ ತನ್ನ ಜೊತೆ ಆಡುತ್ತಾಳೆ. ನನಗೆ ಊಟ ಮಾಡಿಸುತ್ತಾಳೆ. ನನ್ನ ಕಂಡ್ರೆ ಅವಳಿಗೆ ತುಂಬಾ ಪ್ರೀತಿ. ನನಗೂ ಅಕ್ಕನನ್ನು ಕಂಡ್ರೆ ಇಷ್ಟ, ಆದ್ರೆ ಅಪ್ಪ, ಅಮ್ಮ ಇಬ್ಬರೂ ಅಕ್ಕನ್ನ ಯಾಕೆ ಶಾಲೆಗೆ ಕಳಿಸೋದಿಲ್ಲ? ಯಾವಾಗಲೂ ಕೆಲಸ ಮಾಡು, ಅಡುಗೆ ಮಾಡು ಅಂತಾನೇ ಇರ್ತಾರೆ? ಯಾಕೆ... ಯಾಕೆ?' ಈ ಪ್ರಶ್ನೆಗಳು 12 ವರ್ಷದ ಹುಡುಗನನ್ನು ಬಾಲ್ಯದಿಂದಲೂ ಕಾಡಿದೆ. ಅವನಿಗಿಂತ ಮೂರು ವರ್ಷ ದೊಡ್ಡವಳಾದ ಅಕ್ಕಳಿಗೆ ಮದುವೆ ಸಿದ್ಧತೆ ನಡೆದಿದೆ.

**ಘಟನೆ-02**

ಹತ್ತು ವರ್ಷದ ಹುಡುಗನಿಗೆ ಪಕ್ಕದ ಮನೆ ಆಂಟಿ ಕೇಳಿದ್ರು 'ಲೋ ನಿನಗೆ ತಂಗಿ ಬರುತ್ತಾಳಂತೆ. ಹೌದೆನೋ?' ಮನೆಯಲ್ಲಿ ಮಗು ಆಗುತ್ತೆ ಅಂತ ಆಡ್ತಿದ್ದ ಮಾತುಗಳನ್ನು ಹುಡುಗ ಕೇಳಿದ್ದ. 'ಹೌದು ಆಂಟಿ. ತಂಗಿ ಪಾಪು ಬರುತ್ತೆ. ನಾನು ಕಥೆ ಹೇಳ್ತಿನಿ, ಆಟ ಆಡಿಸ್ತೀನಿ. ಸ್ಕೂಲಿಗೂ ಕರಕ್ಕೊಂಡೋಗ್ತೀನಿ' ಎಂದು ತನ್ನೆಲ್ಲಾ ಕನಸುಗಳನ್ನು ಆಂಟಿ ಮುಂದೆ ಬಿಚ್ಚಿಟ್ಟ. ಆಟ ಮುಗಿಸಿ ಮನೆಗೆ ಓಡಿದ , ಅಮ್ಮನ ಬಳಿ ಬಂದ. 'ಅಮ್ಮ...ಅಮ್ಮ...ತಂಗಿ ಪಾಪುಗೆ ಏನು ಹೆಸರು ಇಡೋಣ?' ಎಂದ. ತಾಯಿ ಅವನನ್ನು ಬಿಗಿದಪ್ಪಿ ಅಳುತ್ತಾ, 'ತಂಗಿನೂ ಇಲ್ಲ, ಪಾಪುನೂ ಇಲ್ಲ. ತಂಗಿ ಬರಲ್ಲಪ್ಪ ಹೊರಟೋದ್ಲು' ಎಂದಳು. ಆಗಲೇ ಅವರಪ್ಪ ಬಂದು 'ಸಾಕು ಅತ್ತಿದ್ದು ಹುಡುಗನ್ನ ಗಂಡಸಿನ ಹಾಗೆ ಬೆಳೆಸಬೇಕು. ಅಳು ಕಲಿಸೋದಲ್ಲ, ಏಳು ಮೇಲೆ, ಅಡುಗೆಗೆ ಇಡು' ಎಂದುಕೂಗಿದ. ಏನೂ ಅರ್ಥವಾಗದೆ ಹುಡುಗ ಅಪ್ಪ ಅಮ್ಮನನ್ನ ನೋಡುತ್ತಿದ್ದ.

ಲಿಂಗ ಅಸಮಾನತೆ, ಲಿಂಗ ತಾರತಮ್ಯ, ನಮ್ಮ ದೇಶಕ್ಕೆ ಅಂಟಿರುವ ಶಾಪ. ಹೆಣ್ಣು ಮಕ್ಕಳಿಗೆ ಯಾವುದೇ ರೀತಿಯ ಅವಕಾಶಗಳನ್ನು ನೀಡದೆ ಮನೆಗೆಲಸ, ಸೇವೆಗೆ ಮಾತ್ರ ಎಂದು ಕೊಂಡಿರುವ ನಮ್ಮ ಸಮಾಜದ ಮನಸ್ಸು, ವರ್ತನೆ, ಬದಲಾಗಬೇಕಿದೆ. ಹೆಣ್ಣು ಭ್ರೂಣ ಹತ್ಯೆ, ಬಾಲ್ಯ ವಿವಾಹ, ದೇವದಾಸಿ ಪದ್ಧತಿ, ಲೈಂಗಿಕ ಶೋಷಣೆ ಈ ಎಲ್ಲಕ್ಕೂ ಹೆಣ್ಣು ಮಕ್ಕಳು ಬಲಿಯಾಗುವುದನ್ನು ತಪ್ಪಿಸಿ ಹೆಣ್ಣು ಮಕ್ಕಳನ್ನು ಸಶಕ್ತಗೊಳಿಸಿ ಸಮಾಜದ ಮುಖ್ಯವಾಹಿನಿಗೆ ತರುವ ಹೊಣೆಗಾರಿಕೆ ಸಮಾಜದ ಮೇಲಿದೆ.

**ಲಿಂಗ ಸಮಾನತೆಗೆ ಸರ್ಕಾರಗಳು ಕೈಗೊಳ್ಳಲು ಒಪ್ಪಿರುವ ಕ್ರಮಗಳು;**

- ಲಿಂಗತಾರತಮ್ಯವನ್ನು ಸಂಪೂರ್ಣವಾಗಿ ನಿಷೇಧಿಸುವ ಮೂಲಕ ಸೂಕ್ತ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು. ಭ್ರೂಣಲಿಂಗ ಪತ್ತೆಯನ್ನು ನಿಷೇಧಿಸುವುದು. ಹೆಣ್ಣುಭ್ರೂಣ ಹತ್ಯೆಮಾಡುವವರಿಗೆ ಶಿಕ್ಷೆ ವಿಧಿಸುವುದು.

- ಹೆಣ್ಣುಮಕ್ಕಳಿಗೆ ಶಿಕ್ಷಣ ವ್ಯವಸ್ಥೆ, ಉದ್ಯೋಗ, ಕೌಶಲ ಕಲಿಕೆಗಳಲ್ಲಿ ಮೀಸಲಾತಿ ಕಲ್ಪಿಸುವುದು.
- ಹೆಣ್ಣುಮಕ್ಕಳ ದಿನಾಚರಣೆ, ಲಿಂಗಸಮಾನತೆ ಮತ್ತು ಮಹಿಳೆಯರ ಕೊಡುಗೆಗಳು, ಹೆಣ್ಣುಮಕ್ಕಳು ಮತ್ತು ಮಹಿಳಾಪರ ಇರುವ ನೀತಿ, ಕಾನೂನುಗಳನ್ನು ಕುರಿತು ಶಾಲಾ ಪಠ್ಯಗಳಲ್ಲಿ ಅಳವಡಿಸುವುದು.

- ತಾರತಮ್ಯರಹಿತ ವಾತಾವರಣ ನಿರ್ಮಾಣಕ್ಕೆ ಸಂಪೂರ್ಣ ಪ್ರಯತ್ನ ಮತ್ತು ಹೆಣ್ಣುಮಕ್ಕಳ ಸಾಗಣೆ ಮತ್ತು ಮಾರಾಟ ತಡೆಗಟ್ಟುವುದು.

**ನಾವೇನು ಮಾಡಬಹುದು?**

ನಮ್ಮ ದೇಶದಲ್ಲಿ ಹೆಣ್ಣು ಮಕ್ಕಳ ರಕ್ಷಣೆಗೆ ವಿಶೇಷ ಕಾನೂನುಗಳಿದ್ದರೂ ಹೆಣ್ಣು ಎಂದು ಕೀಳಾಗಿ ನೋಡುವ ಮನೋಭಾವವನ್ನು ಬದಲಿಸಬೇಕಿದೆ. ಹೆಣ್ಣು ಭ್ರೂಣ ಹತ್ಯೆ, ಹೆಣ್ಣು ಮಕ್ಕಳ ಹತ್ಯೆಯಿಂದ ನಮ್ಮ ರಾಜ್ಯದಲ್ಲಿ 0–6 ವರ್ಷದೊಳಗಿನ ಲಿಂಗಾನುಪಾತ 949 ದಷ್ಟಿದೆ.ಹೀಗೆ ಮುಂದುವರಿದರೆ ಮಾನವ ಜನಾಂಗವೇ ನಶಿಸಿ ಹೋಗುತ್ತದೆ.

- ನಮ್ಮ ಶಾಲೆ ಮತ್ತು ಸಮುದಾಯದಲ್ಲಿ ಹೆಣ್ಣು ಮಕ್ಕಳಿಗಾಗುವ ತಾರತಮ್ಯವನ್ನು ಗುರುತಿಸಿ ಪಟ್ಟಿ ಮಾಡಿ. ಅದನ್ನು ನಮ್ಮ ಮಕ್ಕಳ ಹಕ್ಕುಗಳ ಸಂಘದಲ್ಲಿ ಚರ್ಚಿಸಿ. ಅಂತಹ ತಾರತಮ್ಯಗಳನ್ನು ತಡೆಯಲು ಕ್ರಮಗಳನ್ನು ಕಂಡುಕೊಳ್ಳಿ
- ಯಾವ ಕಾರಣಕ್ಕಾಗಿ ಹೆಣ್ಣು ಮಕ್ಕಳಿಗೆ ಮೀಸಲಾತಿ ಆವಶ್ಯಕತೆಯಿದೆ? ಎಂದು ಗಂಡು ಮಕ್ಕಳಿಗೆ ಅರಿವು ಮೂಡಿಸಿ.
- ನಾವು ಮತ್ತು ನಮ್ಮ ಗೆಳೆಯರು 'ನಾವೆಂದೂ ಲಿಂಗಾಧಾರಿತವಾಗಿ ತಾರತಮ್ಯ ಮಾಡುವುದಿಲ್ಲ' ಎಂದು ಪ್ರತಿಜ್ಞೆ ಮಾಡಿ, ಅನುಸರಿಸೋಣ.

## 6. ಸ್ವಚ್ಛ ನೀರು ಮತ್ತು ನೈರ್ಮಲ್ಯ

ಸ್ವಚ್ಛ ನೀರು ಮತ್ತು ನೈರ್ಮಲ್ಯ ಸುಸ್ಥಿರ ಅಭಿವೃದ್ಧಿ ಗುರಿಗಳಲ್ಲಿ ಒಂದುಗುರಿ. ಇದು ಶಾಲಾ ಶಿಕ್ಷಣದ ಜೊತೆಗೆ ಬಹು ನಿಕಟವಾದ ಸಂಬಂಧ ಹೊಂದಿದೆ. ಜೊತೆಗೆ ಶಾಲಾ ಹಂತದಲ್ಲಿ ಇದರ ಅನುಷ್ಠಾನದ ಸಾಧ್ಯತೆಗಳು ಮತ್ತು ಸಮಾಜದಲ್ಲಿ ಇದರ ಅಭ್ಯಾಸ ಮತ್ತು ಬದಲಾವಣೆಯನ್ನು ಗಮನಿಸುವ ಅವಕಾಶ ಮತ್ತು ನಿರೀಕ್ಷೆ ಎರಡೂ ಹೊಂದಿರುತ್ತದೆ. ಮಕ್ಕಳಿಗೆ ಸ್ವಚ್ಛ ನೀರು ಮತ್ತು ನೈರ್ಮಲ್ಯದ ಅಳವಡಿಕೆ ಅವರು ಜೀವನದುದ್ದಕ್ಕೂ ಅಭ್ಯಸಿಸಲು ಇದೊಂದು ತಳಪಾಯವಾಗಿರುತ್ತದೆ. ಕ್ರಮೇಣ ಅವರು ಸಮಾಜದಲ್ಲಿ ಅವಶ್ಯಕ ಬದಲಾವಣೆಗೆ ಪ್ರಭಾವಿಸುತ್ತದೆ. ಆದ್ದರಿಂದ ಪಂಚಾಯತ್ ವ್ಯವಸ್ಥೆ ಮತ್ತು ಶಾಲಾ ಅನುದಾನ ಸದ್ಬಳಕೆ ಮಾಡುವ ಮೂಲಕ ಈ ಗುರಿಯನ್ನು ಶಾಲಾ ತಂಡ ಮತ್ತು ಸಮಿತಿಗಳ ಸಹಕಾರ, ಸಹಯೋಗದೊಂದಿಗೆ ಇದರ ಆಶಯ ಈಡೇರಿಸಬಹುದು. ಇದು ಆರೋಗ್ಯವನ್ನು ಉತ್ತೇಜಿಸುತ್ತದೆ ಮತ್ತು ರೋಗವನ್ನು ತಡೆಗಟ್ಟುತ್ತದೆ. ಶಾಲೆಗಳಲ್ಲಿ ಸ್ವಚ್ಛತೆ ಮತ್ತು ಸರಿಯಾದ ನೈರ್ಮಲ್ಯ ಅಭ್ಯಾಸಗಳು ವಿದ್ಯಾರ್ಥಿಗಳಲ್ಲಿ ಸಾಂಕ್ರಾಮಿಕ ರೋಗಗಳು ಹರಡುವುದನ್ನು ತಡೆಯಲು ಸಹಾಯ ಮಾಡುತ್ತದೆ. ಇದು ಆರೋಗ್ಯಕರ ಕಲಿಕೆಯ ವಾತಾವರಣವನ್ನು ಸೃಷ್ಟಿಸುತ್ತದೆ. ಅನಾರೋಗ್ಯದ ಕಾರಣದಿಂದಾಗಿ ಗೈರುಹಾಜರಿ ಕಡಿಮೆ ಮಾಡುತ್ತದೆ.

**ಅನುಷ್ಠಾನದ ಕಾರ್ಯತಂತ್ರಗಳು:**

1. **ಪಠ್ಯಕ್ರಮದಲ್ಲಿ ಶುಚಿತ್ವವನ್ನು ಅಳವಡಿಸಿ:** ಶಾಲೆಗಳು ಸ್ವಚ್ಛತೆ, ನೈರ್ಮಲ್ಯ ಮತ್ತು ನೈರ್ಮಲ್ಯದ ಪಾಠಗಳನ್ನು ಪಠ್ಯಕ್ರಮದಲ್ಲಿ ಸಂಯೋಜಿಸಬೇಕು. ವಿಜ್ಞಾನ, ಸಾಮಾಜಿಕ ಅಧ್ಯಯನಗಳು ಮತ್ತು ಆರೋಗ್ಯ ಶಿಕ್ಷಣದಂತಹ ವಿಷಯಗಳ ಮೂಲಕ ಇದನ್ನು ಮಾಡಬಹುದು.
2. **ನಿಯಮಿತ ನೈರ್ಮಲ್ಯದ ದಿನಚರಿಗಳು:** ದೈನಂದಿನ ನೈರ್ಮಲ್ಯ ದಿನಚರಿಗಳನ್ನು ಸ್ಥಾಪಿಸಿ, ಉದಾಹರಣೆಗೆ:–ಊಟಕ್ಕೆ ಮೊದಲು ಮತ್ತು ವಿಶ್ರಾಂತಿ ಕೊಠಡಿಯನ್ನು ಬಳಸಿದ ನಂತರ ಕೈ ತೊಳೆಯುವುದು, ತರಗತಿಗಳು ಮತ್ತು ಶಾಲಾ ಆವರಣಗಳನ್ನು ಸ್ವಚ್ಛಗೊಳಿಸುವಲ್ಲಿ ವಿದ್ಯಾರ್ಥಿಗಳು ಭಾಗವಹಿಸುವುದು.
3. **ಸಾಕಷ್ಟು ಸೌಲಭ್ಯಗಳನ್ನು ಒದಗಿಸಿ:** ಶಾಲೆಯ ಸ್ವಚ್ಛವಾದ ವಿಶ್ರಾಂತಿ ಕೊಠಡಿಗಳು, ಕೈ ತೊಳೆಯುವ ಕೇಂದ್ರಗಳು ಮತ್ತು ಸುರಕ್ಷಿತ ಕುಡಿಯುವ ನೀರು ಸೇರಿದಂತೆ ಸಾಕಷ್ಟು ನೈರ್ಮಲ್ಯ ಸೌಲಭ್ಯಗಳನ್ನು ಹೊಂದಿದೆಯೆ? ಎಂದು ಖಚಿತಪಡಿಸಿಕೊಳ್ಳಿ. ಈ ಸೌಲಭ್ಯಗಳ ನಿಯಮಿತ ನಿರ್ವಹಣೆ ಮುಖ್ಯವಾಗಿದೆ.

4. **ಶುಚಿತ್ವ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಿ :** "ಸ್ವಚ್ಛ ಶಾಲಾ ಅಭಿಯಾನಗಳು" ನಂತಹ ಚಟುವಟಿಕೆಗಳ ಮೂಲಕ ಸ್ವಚ್ಛತೆಯನ್ನು ಕಾಪಾಡಿಕೊಳ್ಳಲು ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳಿ. ಅಲ್ಲಿ ಅವರು ತಮ್ಮ ತರಗತಿ ಕೊಠಡಿಗಳು ಮತ್ತು ಶಾಲಾ ಮೈದಾನಗಳನ್ನು ಸ್ವಚ್ಛವಾಗಿಡುವ ಜವಾಬ್ದಾರಿಯನ್ನು ತೆಗೆದುಕೊಳ್ಳುತ್ತಾರೆ.

5. **ತ್ಯಾಜ್ಯ ನಿರ್ವಹಣೆಯನ್ನು ಕಲಿಸಿ:** ತ್ಯಾಜ್ಯವನ್ನು ಜೈವಿಕ ವಿಘಟನೀಯ ಮತ್ತು ಜೈವಿಕ ವಿಘಟನೀಯವಲ್ಲದ ವರ್ಗಗಳಾಗಿ ವಿಂಗಡಿಸುವುದು ಸೇರಿದಂತೆ ಸರಿಯಾದ ತ್ಯಾಜ್ಯ ವಿಲೇವಾರಿ ವಿಧಾನಗಳ ಬಗ್ಗೆ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಿ ಮತ್ತು ಶಾಲೆಯೊಳಗೆ ಮರುಬಳಕೆಯ ಉಪಕ್ರಮಗಳನ್ನು ಪ್ರೋತ್ಸಾಹಿಸಿ.
6. **ಸಮುದಾಯವನ್ನು ತೊಡಗಿಸಿಕೊಳ್ಳಿ:** ಶಾಲೆಗಳು ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಉತ್ತೇಜಿಸಲು ಪೋಷಕರು ಮತ್ತು ಸಮುದಾಯದೊಂದಿಗೆ ಸಹಕರಿಸಬಹುದು. ಪೋಷಕರಿಗೆ ಕಾರ್ಯಾಗಾರಗಳು ಮತ್ತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು. ಈ ಅಭ್ಯಾಸಗಳನ್ನು ಶಾಲೆಯ ಪರಿಸರವನ್ನು ಮೀರಿ ವಿಸ್ತರಿಸಬಹುದು.
7. **ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ :** ಶಾಲೆಯಲ್ಲಿನ ಶುಚಿತ್ವದ ಮಾನದಂಡಗಳನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಿ ಮತ್ತು ನೈರ್ಮಲ್ಯ ಕಾರ್ಯಕ್ರಮಗಳ ಪರಿಣಾಮಕಾರಿತ್ವವನ್ನು ಮೌಲ್ಯಮಾಪನ ಮಾಡಿ. ವಿದ್ಯಾರ್ಥಿಗಳು ಮತ್ತು ಸಿಬ್ಬಂದಿಯೊಂದಿಗೆ ತಪಾಸಣೆ ಮತ್ತು ಪ್ರತಿಕ್ರಿಯೆಯ ಮೂಲಕ ಇದನ್ನು ಮಾಡಬಹುದು.
8. **ಗುರುತಿಸುವಿಕೆ ಮತ್ತು ಪುರಸ್ಕಾರಗಳು:** ನಿರಂತರವಾಗಿ ಶುಚಿತ್ವವನ್ನು ನಿರ್ವಹಿಸುವ ವಿದ್ಯಾರ್ಥಿಗಳು ಮತ್ತು ತರಗತಿಗಳನ್ನು ಗುರುತಿಸಿ ಮತ್ತು ಬಹುಮಾನ ನೀಡಿ. ಇದು ಇತರರನ್ನು ಇದೇ ರೀತಿಯ ಅಭ್ಯಾಸಗಳನ್ನು ಅಳವಡಿಸಿಕೊಳ್ಳಲು ಪ್ರೇರೇಪಿಸುತ್ತದೆ ಮತ್ತು ಶಾಲೆಯಲ್ಲಿ ಸ್ವಚ್ಛತೆಯ ಸಂಸ್ಕೃತಿಯನ್ನು ಸೃಷ್ಟಿಸುತ್ತದೆ.

**ಸ್ವಚ್ಛ ನೀರು ಮತ್ತು ನೈರ್ಮಲ್ಯದಿಂದಾಗುವ ಉಪಯೋಗಗಳು:**

- ಕಲಿಕೆಯು ಪರಿಸರವನ್ನು ವರ್ಧಿಸುತ್ತದೆ. ಸ್ವಚ್ಛ ಮತ್ತು ಸುಸ್ಥಿತಿಯಲ್ಲಿರುವ ಶಾಲಾ ಪರಿಸರವು ಕಲಿಕೆಗೆ ಹೆಚ್ಚು ಅನುಕೂಲಕರವಾಗಿರುತ್ತದೆ. ಇದು ವಿದ್ಯಾರ್ಥಿಗಳು ಉತ್ತಮವಾಗಿ ಗಮನಹರಿಸಲು ಸಹಾಯ ಮಾಡುತ್ತದೆ. ಗೊಂದಲವನ್ನು ಕಡಿಮೆ ಮಾಡುತ್ತದೆ ಮತ್ತು ಅವರ ಸುತ್ತಮುತ್ತಲಿನ ಆರೈಕೆಯಲ್ಲಿ ಹೆಮ್ಮೆ ಮತ್ತು ಜವಾಬ್ದಾರಿಯ ಪ್ರಜ್ಞೆಯನ್ನು ಬೆಳೆಸುತ್ತದೆ.

- ಜವಾಬ್ದಾರಿ ಮತ್ತು ಶಿಸ್ತನ್ನು ಕಲಿಸುತ್ತದೆ. ಶಾಲಾ ಶಿಕ್ಷಣದಲ್ಲಿ ಸ್ವಚ್ಛತೆ ಮತ್ತು ನೈರ್ಮಲ್ಯವನ್ನು ಸಂಯೋಜಿಸುವುದು ವಿದ್ಯಾರ್ಥಿಗಳಿಗೆ ವೈಯಕ್ತಿಕ ಮತ್ತು ಪರಿಸರ ನೈರ್ಮಲ್ಯದ ಮಹತ್ವವನ್ನು ಕಲಿಸುತ್ತದೆ. ಇದು ಜವಾಬ್ದಾರಿ ಮತ್ತು ಶಿಸ್ತಿನ ಪ್ರಜ್ಞೆಯನ್ನು ಹುಟ್ಟುಹಾಕುತ್ತದೆ. ಅದನ್ನುಅವರು ಪ್ರೌಢಾವಸ್ಥೆಯಲ್ಲಿ ಸಾಗಿಸಬಹುದು.
- ತಮಗೆ ಹಂಚಿಕೆ ಮಾಡಿದ ಸ್ಥಳಗಳನ್ನು ಸ್ವಚ್ಛವಾಗಿಡಲು ಪ್ರೋತ್ಸಾಹ ಸಿಗುತ್ತದೆ. ವಿದ್ಯಾರ್ಥಿಗಳಿಗೆ ಸ್ವಚ್ಛತೆಯನ್ನು ಕಾಪಾಡಿಕೊಳ್ಳಲು ಕಲಿಸಿದಾಗ, ಅವರು ತಮಗೆ ವಹಿಸಿದ ಸ್ಥಳದ ಜೊತೆಗೆ ಇತರರಿಗೂ ಸಹಕರಿಸುತ್ತಾರೆ. ಇದರಿಂದ ಸಹಯೋಗದ ಬದುಕು ಕಟ್ಟಿಕೊಳ್ಳಲು ಸಹಾಯವಾಗುವುದು.
- ಸರಿಯಾದ ತ್ಯಾಜ್ಯ ನಿರ್ವಹಣೆ, ಮರುಬಳಕೆ ಮತ್ತು ತ್ಯಾಜ್ಯವನ್ನು ಕಡಿಮೆ ಮಾಡುವ ಬಗ್ಗೆ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವುದು ಪರಿಸರ ಸಮರ್ಥನೀಯ ಅಭ್ಯಾಸಗಳನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತದೆ.

**7. ಅಸಮಾನತೆಗಳ ಇಳಿಕೆ**

ಅಸಮಾನತೆಯನ್ನು ಕಡಿಮೆ ಮಾಡುವ ಸುಸ್ಥಿರ ಅಭಿವೃದ್ಧಿಗುರಿ ಶಾಲಾ ಶಿಕ್ಷಣದೊಂದಿಗೆ ನಿಕಟ ಸಂಪರ್ಕ ಹೊಂದಿದೆ. ಗುಣಮಟ್ಟದ ಶಿಕ್ಷಣವು ಎಲ್ಲಾ ವಿದ್ಯಾರ್ಥಿಗಳಿಗೆ ಅವರ ಹಿನ್ನೆಲೆಯನ್ನು ಲೆಕ್ಕಿಸದೆ, ಅವರು ಯಶಸ್ವಿಯಾಗಲು ಅಗತ್ಯವಿರುವ ಜ್ಞಾನ, ಕೌಶಲ ಮತ್ತು ಅವಕಾಶಗಳನ್ನು ಒದಗಿಸುವ ಮೂಲಕ ಅಸಮಾನತೆಯನ್ನು ಪರಿಹರಿಸುವ ಪ್ರಬಲ ಸಾಧನವಾಗಿದೆ. ಅಂತರ್ಗತ ಮತ್ತು ಸಮಾನ ಶಿಕ್ಷಣವನ್ನು ಉತ್ತೇಜಿಸುವ ಮೂಲಕ, ಶಾಲೆಗಳು ವಿವಿಧ ಸಾಮಾಜಿಕ – ಆರ್ಥಿಕ, ಲಿಂಗ ಮತ್ತು ಜನಾಂಗೀಯ ಗುಂಪುಗಳ ನಡುವಿನ ಅಂತರವನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಪ್ರತಿ ಮಗುವಿಗೆ ಅಭಿವೃದ್ಧಿ ಹೊಂದಲು ನ್ಯಾಯಯುತ ಅವಕಾಶವಿದೆ ಎಂದು ಖಚಿತಪಡಿಸುತ್ತದೆ.

ಶಾಲಾ ಶಿಕ್ಷಣದ ಸಂದರ್ಭದಲ್ಲಿ ಅಸಮಾನತೆಯನ್ನು ಕಡಿಮೆ ಮಾಡುವುದು ಎಂದರೆ ಪ್ರತಿಯೊಬ್ಬ ವಿದ್ಯಾರ್ಥಿಯು ಅವರ ಸಾಮಾಜಿಕ-ಆರ್ಥಿಕ ಸ್ಥಿತಿ, ಲಿಂಗ, ವಿಕಲಚೇತನ, ಅಥವಾ ಜನಾಂಗೀಯ ಹಿನ್ನೆಲೆಯನ್ನು ಲೆಕ್ಕಿಸದೆ ಗುಣಮಟ್ಟದ ಶಿಕ್ಷಣ, ಸಂಪನ್ಮೂಲಗಳು ಮತ್ತು ಅವಕಾಶಗಳಿಗೆ ಸಮಾನ ಪ್ರವೇಶವನ್ನು ಹೊಂದಿದೆ ಎಂದು ಖಚಿತಪಡಿಸಿಕೊಳ್ಳುವುದು. ಇದು ಎಲ್ಲಾ ವಿದ್ಯಾರ್ಥಿಗಳು ಸಂಪೂರ್ಣವಾಗಿ ಭಾಗವಹಿಸಲು ಮತ್ತು ಅವರ ಸಾಮರ್ಥ್ಯವನ್ನು ಸಾಧಿಸಲು ಅಂತರ್ಗತ ಶೈಕ್ಷಣಿಕ ವಾತಾವರಣವನ್ನು ರಚಿಸುವುದನ್ನು ಒಳಗೊಂಡಿರುತ್ತದೆ.

**ಶಾಲೆಗಳಲ್ಲಿ ಅಳವಡಿಸಲು ತಂತ್ರಗಳು:**

1. ಒಳಗೊಳ್ಳುವ ಪಠ್ಯಕ್ರಮ:ವಿದ್ಯಾರ್ಥಿಗಳಲ್ಲಿ ಗೌರವ ಮತ್ತು ತಿಳಿವಳಿಕೆಯನ್ನು ಉತ್ತೇಜಿಸುವ, ವೈವಿಧ್ಯಮಯ ದೃಷ್ಟಿಕೋನಗಳು ಮತ್ತು ಸಂಸ್ಕೃತಿಗಳನ್ನು ಪ್ರತಿಬಿಂಬಿಸುವ ಪಠ್ಯಕ್ರಮವನ್ನು ಅಭಿವೃದ್ಧಿಪಡಿಸಿ ಮತ್ತು ಕಾರ್ಯಗತಗೊಳಿಸಿ.

2. ಶೈಕ್ಷಣಿಕ ಸಾಮಗ್ರಿಗಳು: ಪಕ್ಷಪಾತ ಮತ್ತು ಪೂರ್ವಾಗ್ರಹಗಳಿಂದ ಮುಕ್ತವಾಗಿವೆ ಎಂದು ಖಚಿತಪಡಿಸಿಕೊಳ್ಳಿ. ಎಲ್ಲಾ ಗುಂಪುಗಳಿಗೆ ಸಮಾನ ಪ್ರಾತಿನಿಧ್ಯವನ್ನು ಒದಗಿಸಿ.
3. ಸಮಾನ ಸಂಪನ್ಮೂಲ ಹಂಚಿಕೆ: ಪಠ್ಯಪುಸ್ತಕಗಳು, ತಂತ್ರಜ್ಞಾನ ಮತ್ತು ಪಠ್ಯೇತರ ಚಟುವಟಿಕೆಗಳಂತಹ ಸಂಪನ್ಮೂಲಗಳನ್ನು ಎಲ್ಲಾ ವಿದ್ಯಾರ್ಥಿಗಳಿಗೆ, ವಿಶೇಷವಾಗಿ ಅನನುಕೂಲಕರ ಹಿನ್ನೆಲೆಯಿಂದ ಸಮಾನವಾಗಿ ವಿತರಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಿ.
4. ಬೋಧನೆ, ಮಾರ್ಗದರ್ಶನ ಅಥವಾ ಹಣಕಾಸಿನ ಸಹಾಯದಂತಹ ಅಗತ್ಯವಿರುವ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಬೆಂಬಲವನ್ನು ಒದಗಿಸಿ.
5. ಶಿಕ್ಷಕರ ತರಬೇತಿ: ವಿಕಲಚೇತನರು, ಭಾಷೆಯ ಅಡೆತಡೆಗಳು ಅಥವಾ ಅಂಚಿನಲ್ಲಿರುವ ಸಮುದಾಯಗಳು ಸೇರಿದಂತೆ ತಮ್ಮ ವಿದ್ಯಾರ್ಥಿಗಳ ವೈವಿಧ್ಯಮಯ ಅಗತ್ಯಗಳನ್ನು ಗುರುತಿಸಲು ಮತ್ತು ಪರಿಹರಿಸಲು ಶಿಕ್ಷಕರಿಗೆ ತರಬೇತಿ ನೀಡಿ.
6. ಎಲ್ಲಾ ವಿದ್ಯಾರ್ಥಿಗಳ ಹಿನ್ನೆಲೆ ಮತ್ತು ಅನುಭವಗಳಿಗೆ ಸಂವೇದನಾಶೀಲವಾಗಿರುವ, ಸಾಂಸ್ಕೃತಿಕವಾಗಿ ಸ್ಪಂದಿಸುವ ಬೋಧನಾ ಅಭ್ಯಾಸಗಳನ್ನು ಪ್ರೋತ್ಸಾಹಿಸಿ.
7. ಸುರಕ್ಷಿತ ಮತ್ತು ಅಂತರ್ಗತ ಪರಿಸರ: ಎಲ್ಲಾ ವಿದ್ಯಾರ್ಥಿಗಳಿಗೆ ಸುರಕ್ಷಿತ, ಎಲ್ಲರೂ ಒಪ್ಪುವ ಮತ್ತು ಎಲ್ಲರೂ ಒಳಗೊಳ್ಳುವ ಶಾಲಾ ವಾತಾವರಣವನ್ನು ರಚಿಸಿ. ಇದು ಬೆದರಿಸುವ ವಿರೋಧಿ ನೀತಿಗಳನ್ನು ಜಾರಿಗೊಳಿಸುವುದು ಮತ್ತು ಗೌರವ ಮತ್ತು ಒಳಗೊಳ್ಳುವಿಕೆಯ ಸಂಸ್ಕೃತಿಯನ್ನು ಉತ್ತೇಜಿಸುವುದನ್ನು ಒಳಗೊಂಡಿರುತ್ತದೆ.

8. ವಿಕಲಚೇತನರು ಸೇರಿದಂತೆ ಎಲ್ಲಾ ವಿದ್ಯಾರ್ಥಿಗಳಿಗೆ ಸೌಲಭ್ಯಗಳು ಲಭ್ಯವಾಗುವಂತೆ ನೋಡಿಕೊಳ್ಳಿ.

9. ಲಿಂಗ ಸಮಾನತೆ: ತರಗತಿಯ ಭಾಗವಹಿಸುವಿಕೆಯಿಂದ ನಾಯಕತ್ವದ ಅವಕಾಶಗಳವರೆಗೆ ಶಾಲಾ ಜೀವನದ ಎಲ್ಲಾ ಅಂಶಗಳಲ್ಲಿ ಲಿಂಗ ಸಮಾನತೆಯನ್ನು ಉತ್ತೇಜಿಸಿ.

10. ಲಿಂಗ ಅಸಮಾನತೆ ಹೋಗಲಾಡಿಸುವ ಕಾರ್ಯಕ್ರಮಗಳನ್ನು ಜಾರಿಗೊಳಿಸಿ ಮತ್ತು ಎಲ್ಲಾ ವಿಷಯಗಳು ಮತ್ತು ಚಟುವಟಿಕೆಗಳಲ್ಲಿ ಹುಡುಗಿಯರು ಮತ್ತು ಹುಡುಗರ ಸಮಾನ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಿ.

11. ಕಡಿಮೆ ಆದಾಯದ ಗುಂಪುಗಳಿಗೆ ಬೆಂಬಲ: ಕಡಿಮೆ ಆದಾಯದ ಕುಟುಂಬಗಳು, ಅಲ್ಪಸಂಖ್ಯಾತ ಜನಾಂಗೀಯ ಗುಂಪುಗಳು ಅಥವಾ ವಿಕಲಾಂಗ ವಿದ್ಯಾರ್ಥಿಗಳಂತಹ ಗುಂಪುಗಳ ವಿದ್ಯಾರ್ಥಿಗಳನ್ನು ಗುರುತಿಸಿ ಮತ್ತು ಬೆಂಬಲಿಸಿ.

12. ಈ ವಿದ್ಯಾರ್ಥಿಗಳಿಗೆ ಶಿಕ್ಷಣದ ಅಡೆತಡೆಗಳನ್ನು ನಿವಾರಿಸಲು ಸಹಾಯ ಮಾಡಲು ವಿದ್ಯಾರ್ಥಿವೇತನಗಳು, ಮಾರ್ಗದರ್ಶನ ಕಾರ್ಯಕ್ರಮಗಳು ಮತ್ತು ಸಲಹೆ ಸೇವೆಗಳಂತಹ ಉದ್ದೇಶಿತ ಮಧ್ಯಸ್ಥಿಕೆಗಳನ್ನು ಒದಗಿಸಿ.

13. ಪೋಷಕರ ಮತ್ತು ಸಮುದಾಯದ ಜೊತೆ ಸಭೆಗಳು ಮತ್ತು ತೊಡಗಿಕೊಳ್ಳುವಿಕೆ : ವಿದ್ಯಾರ್ಥಿಗಳಿಗೆ ಪೂರಕ ವಾತಾವರಣವನ್ನು ಸೃಷ್ಟಿಸಲು ಪೋಷಕರು ಮತ್ತು ವಿಶಾಲ ಸಮುದಾಯವನ್ನು ಶೈಕ್ಷಣಿಕ ಪ್ರಕ್ರಿಯೆಯಲ್ಲಿ ತೊಡಗಿಸಿಕೊಳ್ಳಿ.

14. ಎಲ್ಲಾ ಮಕ್ಕಳ ಹಿನ್ನೆಲೆಯನ್ನು ಲೆಕ್ಕಿಸದೆ ಶಿಕ್ಷಣದ ಮಹತ್ವವನ್ನು ಎತ್ತಿತೋರಿಸುವ ಜಾಗೃತಿ ಕಾರ್ಯಕ್ರಮಗಳನ್ನು ನಡೆಸಿ.

15. ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ: ಶಾಲೆಯೊಳಗಿನ ಅಸಮಾನತೆಯನ್ನು ಕಡಿಮೆ ಮಾಡುವಗುರಿಯನ್ನು ಹೊಂದಿರುವ ತಂತ್ರಗಳ ಪರಿಣಾಮಕಾರಿತ್ವವನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಿ ಮತ್ತು ಮೌಲ್ಯಮಾಪನ ಮಾಡಿ.

16. ಅಂತರವನ್ನು ಗುರುತಿಸಲು ಮತ್ತು ಪರಿಹರಿಸಲು ಸಾಮಾಜಿಕ–ಆರ್ಥಿಕ ಸ್ಥಿತಿ, ಲಿಂಗ ಮತ್ತು ಇತರ ಸಂಬಂಧಿತ ಅಂಶಗಳಿಂದ ವಿಂಗಡಣೆಯಾದ ವಿದ್ಯಾರ್ಥಿಗಳ ಫಲಿತಾಂಶಗಳ ಮೇಲೆ ದತ್ತಾಂಶವನ್ನು ಸಂಗ್ರಹಿಸಿ.

17. ಪ್ರೋತ್ಸಾಹದಾಯಕ ಭಾಗವಹಿಸುವಿಕೆ: ಶಾಲೆಯೊಳಗೆ ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಗಳಲ್ಲಿ ವಿದ್ಯಾರ್ಥಿಗಳ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸಿ, ವಿಶೇಷವಾಗಿ ಸೌಲಭ್ಯವಂಚಿತ ವಿದ್ಯಾರ್ಥಿಗಳ ಸಲಹೆಗಳನ್ನು ಪರಿಗಣಿಸಿ,ಪ್ರೋತ್ಸಾಹಿಸಿ.

18. ಪಾಲುದಾರಿಕೆಗಳು ಮತ್ತು ಸಹಯೋಗಗಳು: ಶಿಕ್ಷಣದಲ್ಲಿ ಸಮಾನತೆಯನ್ನು ಉತ್ತೇಜಿಸುವ ಉಪಕ್ರಮಗಳನ್ನು ಬೆಂಬಲಿಸಲು ಸ್ಥಳೀಯ ಸಂಸ್ಥೆಗಳು, ಎನ್.ಜಿ.ಒಗಳು ಮತ್ತು ಸರ್ಕಾರಿ ಸಂಸ್ಥೆಗಳೊಂದಿಗೆ ಪಾಲುದಾರರಾಗಿ.

19. ಅನನುಕೂಲಕರ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಸಂಪನ್ಮೂಲಗಳು ಮತ್ತು ಬೆಂಬಲವನ್ನು ಒದಗಿಸುವ ಸಹಯೋಗದ ಅವಕಾಶಗಳನ್ನು ಹುಡುಕುವುದು.

ಈ ತಂತ್ರಗಳನ್ನು ಕಾರ್ಯಗತಗೊಳಿಸುವ ಮೂಲಕ, ಶಾಲೆಗಳು ಅಸಮಾನತೆಯನ್ನು ಕಡಿಮೆ ಮಾಡುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತವೆ, ಎಲ್ಲಾ ವಿದ್ಯಾರ್ಥಿಗಳು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ತಲುಪಲು ಮತ್ತು ಹೆಚ್ಚು ಆರೋಗ್ಯಕರ ಪೀಳಿಗೆವುಳ್ಳ ಸಮಾಜಕ್ಕೆ ಕೊಡುಗೆ ನೀಡುತ್ತವೆ.

**ಇನ್ನುಳಿದ ಸುಸ್ಥಿರ ಅಭಿವೃದ್ಧಿ ಗುರಿಗಳೊಂದಿಗೆ ಸಂಬಂಧೀಕರಣ ಹೇಗೆ? ಶಾಲಾ ಶಿಕ್ಷಣದ ಜೊತೆ ಸಂಬಂಧಿಕರಿಸಬಹುದೇ?ಎಂದು ಪ್ರಶ್ನಿಸಿ, ಪ್ರತಿಯೊಬ್ಬರಿಗೂ ವಿಶ್ಲೇಷಣೆ ನಡೆಸಲು ಸೂಚಿಸುವುದು.**

**ಆಕರಗಳು:**

- ಮಾನವ ಅಭಿವೃದ್ಧಿ ಸೂಚ್ಯಾಂಕ ವರದಿ.
- ರಾಜ್ಯವಾರು ಸುಸ್ಥಿರ ಅಭಿವೃದ್ಧಿ ಗುರಿಗಳು –ಅಂತರ್ಜಾಲ ಮಾಹಿತಿ.
- ಸುಸ್ಥಿರ ಅಭಿವೃದ್ದಿಗಳ ವರದಿ, ಅಂತರ್ಜಾಲ ಮಾಹಿತಿ.
- ಸುಸ್ಥಿರ ಅಭಿವೃದ್ದಿಯ ಗುರಿಗಳು, ಅಂತರ್ಜಾಲ ಮಾಹಿತಿ.
- ಸಂಯುಕ್ತ ಕರ್ನಾಟಕ ದಿನಪತ್ರಿಕೆ ವರದಿ.
- ಗ್ಲೋಬಲ್ ಹಂಗರ್ ಇಂಡೆಕ್ಸ–2023.
- ಗ್ಲೋಬಲ್ ಮಲ್ಟಿ ಡೈಮೆನ್ಸಿನಲ್ ಪಾವರ್ಟಿ ಇಂಡೆಕ್ಸ–2023.

# ಅಧ್ಯಾಯ–5

## ಶಾಲಾ ಮತ್ತು ಶೈಕ್ಷಣಿಕ ನಾಯಕರ ಪಾತ್ರ ಮತ್ತು ಜವಾಬ್ದಾರಿಗಳು

ಚಟುವಟಿಕೆ– ಸುಸ್ಥಿರ ಅಭಿವೃದ್ಧಿಯ ಕಾರ್ಯ ತಂತ್ರಗಳು ಶಾಲಾ ಹಂತದಿಂದಲೇ ಪ್ರಾರಂಭವಾಗಬೇಕೇ ? ಗುಂಪಿನಲ್ಲಿ ಚರ್ಚಿಸಿ, ಪಟ್ಟಿ ಮಾಡೋಣ.

1.1.ಸುಸ್ಥಿರ ಅಭಿವೃದ್ಧಿಯಲ್ಲಿ ಮೊದಲು ಭಾಗೀದಾರರೆಲ್ಲರ ಮನದಲ್ಲಿ ನಾನು ಬದಲಾಗಬೇಕು, ಬದಲಾವಣೆಯ ಅಂಶಗಳನ್ನು ಒಪ್ಪಿಕೊಳ್ಳಬೇಕು. ಈ ಅಂಶಗಳು ಯಾತಕ್ಕಾಗಿ? ಯಾರಿಗಾಗಿ? ಎಂಬುದನ್ನು ಅರಿತುಕೊಂಡಾಗ ಶಾಲಾ ಹಂತದಲ್ಲಿ ಭಾಗೀದಾರರು ಸುಸ್ಥಿರ ಅಭಿವೃದ್ಧಿಗೆ ಕೊಡುಗೆಯನ್ನು ನೀಡಬಲ್ಲರು. ಈ ದಿಶೆಯಲ್ಲಿ ಅಭಿವೃದ್ಧಿಯ ಪ್ರತಿ ಹಂತದಲ್ಲಿಯೂ ಕಾರ್ಯಯೋಜನೆಯ ಅಗತ್ಯ. ಯೋಜನೆಯನ್ನು ಹಾಕಿಕೊಳ್ಳುವಾಗ ಸವಾಲುಗಳು ಏನೇನು ಬರಬಹುದು ಎಂದು ಆಲೋಚಿಸಿಯೇ ಸಿದ್ಧವಾಗಬೇಕಿದೆ. ಗುಣಮಟ್ಟದ ಶಿಕ್ಷಣವನ್ನು ನೀಡುವಲ್ಲಿ ಹಲವಾರು ಅಂಶಗಳು ನೇರವಾಗಿ ಅಥವಾ ಪರೋಕ್ಷವಾಗಿಯೂ ಮಗುವಿನ ಮೇಲೆ ಪ್ರಭಾವ ಬೀರುವವು. ಹೀಗಾಗಿ ಭಾಗೀದಾರರೆಂದು ಕರೆಯಿಸಿಕೊಳ್ಳುವ ನಾವೆಲ್ಲರೂ ಈ ನಿಟ್ಟಿನಲ್ಲಿ ಮಗುವನ್ನು ಪ್ರಧಾನವಾಗಿ ಇಟ್ಟುಕೊಂಡು ಅಭಿವೃದ್ಧಿಯ ಕಾರ್ಯ ತಂತ್ರಗಳನ್ನು ಗುರುತಿಸಿಕೊಳ್ಳಬೇಕು.

### 1.2 **ಶಾಲಾ ಮುಖ್ಯ ಶಿಕ್ಷಕರು ಕೈಗೊಳ್ಳಬಹುದಾದ ಕ್ರಮಗಳು**

- ಶಾಲಾ ಗ್ರಂಥಾಲಯದಲ್ಲಿ ವಿಷಯವಾರು ಗ್ರಂಥಾಲಯಕ್ಕೆ ಅವಕಾಶ ಮಾಡುವುದು.
- ವಿಷಯ ಶಿಕ್ಷಕರ ಜೊತೆ ಸಮಾಲೋಚಿಸಿ ಪ್ರಯೋಗಾಲಯದಲ್ಲಿ ಆಯಾ ವಿಷಯ/ಘಟಕಕ್ಕೆ ಸಂಬಂಧಿಸಿದಂತೆ ಪರಿಕರಗಳು/ರಾಸಾಯನಿಕಗಳನ್ನು ಒದಗಿಸಿ, ಬಳಕೆಯಾಗುವಂತೆ ಕ್ರಮ ವಹಿಸಬೇಕು.
- ಶಿಕ್ಷಕರ ಜೊತೆ ಸಮಾಲೋಚಿಸಿ ಯಾವ ಯಾವ ಹಂತದಲ್ಲಿ/ ವಿಷಯದಲ್ಲಿ/ ಘಟಕ/ ಉಪಘಟಕಗಳಲ್ಲಿ ಮಕ್ಕಳಿಗೆ ಪ್ರಾಯೋಗಿಕ ಅನುಭವದ ಅವಶ್ಯಕ ಎಂದು ಗುರುತಿಸಿ ಹೊರ ಸಂಚಾರಕ್ಕೆ ಯೋಜನೆಯನ್ನು ಶಾಲಾ ಎಸ್.ಡಿ.ಎಮ್.ಸಿ ಸಹಕಾರ ಅಥವಾ ಇನ್ನಿತರರ ಸಹಾಯ ಪಡೆದು ಸಿದ್ಧಪಡಿಸಿ ಅನುಷ್ಠಾನ ಮಾಡುವುದು.
- ವಿವಿಧ ಕ್ಲಬ್‌ಗಳನ್ನು ರಚಿಸಿ ಜವಾಬ್ದಾರಿಗಳನ್ನು ನಿಗದಿಪಡಿಸಿ ಆಯಾ ಸಂದರ್ಭಕ್ಕೆ ತಕ್ಕಂತೆ ನಿರ್ವಹಣೆ ಮಾಡುವಿಕೆಯನ್ನು ಗಮನಿಸಬೇಕು ಹಾಗೂ ಮಾರ್ಗದರ್ಶನ ಮಾಡಬೇಕು.
- ಶಾಲೆಗೆ ದಾಖಲಾದ ಎಲ್ಲ ವಿದ್ಯಾರ್ಥಿಗಳು ಶಾಲೆಯಲ್ಲಿ ಕಡೆಯ ತರಗತಿಯವರೆಗೆ ಉಳಿಯುವಂತೆ ಮಾಡುವಿಕೆ.
- ಶಾಲೆಯಲ್ಲಿ ವಿದ್ಯಾರ್ಥಿ ಸ್ನೇಹಿ ವಾತಾವರಣವನ್ನು ಸೃಷ್ಟಿಸಿ, ಚಟುವಟಿಕೆ ಆಧಾರಿತ/ ಡಿಜಿಟಲ್ ಸ್ನೇಹಿ ಕಲಿಕಾ ವಿಧಾನಗಳನ್ನು ಅಳವಡಿಸಿಕೊಳ್ಳುವುದು.
- ಶಾಲೆಗೆ ನಿತ್ಯಲೂ ಬರುವಂತೆ ಪ್ರೋತ್ಸಾಹದಾಯಕ ಯೋಜನೆ ರೂಪಿಸಿ ಅನುಷ್ಠಾನ ಮಾಡುವುದು.
- ಶಾಲೆಯ ವ್ಯಾಪ್ತಿಯಲ್ಲಿ ಬರುವ ಕರಕುಶಲ ಕರ್ಮಿಗಳಿಂದ ಮಕ್ಕಳಿಗೆ ಗುಡಿ ಕೈಗಾರಕೆಗಳನ್ನು ಪರಿಚಯಿಸುವದರೊಂದಿಗೆ ಈಗ ಅವುಗಳ ಪ್ರಸ್ತುತಿ ಬಗ್ಗೆ ತಿಳಿಸುವದು.
- ಶಾಲೆಯಲ್ಲಿ ಉತ್ತಮ ಅಭ್ಯಾಸಗಳನ್ನು ಅಳವಡಿಸಿಕೊಂಡು ಅವುಗಳನ್ನು ಅನುಷ್ಠಾನ ಮಾಡುವಿಕೆಯಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುವುದು.
- ಶಾಲೆಯಲ್ಲಿ ವಿಚಾರ ಸಂಕಿರಣಗಳನ್ನು, ಸಂವಾದಗಳನ್ನು ಆಯೋಜಿಸಿ, ಶಿಕ್ಷಕರು ಮತ್ತು ಮಕ್ಕಳು ಪೂರ್ಣಪ್ರಮಾಣದಲ್ಲಿ ಭಾಗೀಯಾಗುವಂತೆ ಅನುಪಾಲನೆ ಮಾಡುವುದು.
- ಶಾಲೆಯಲ್ಲಿ ಅಪ್ತ ಸಮಾಲೋಚನಾ ಘಟಕವನ್ನು ಸ್ಥಾಪಿಸಿ, ಮಕ್ಕಳ ಅವಶ್ಯಕತೆಗೆ ಅನುಸಾರವಾಗಿ ಮಾರ್ಗದರ್ಶನ ಮಾಡುವುದು.

- ಬಡತನದ ರೇಖೆಗಿಂತ ಕೆಳಗಿರುವ, ಏಕಪಾಲಕ ವಿದ್ಯಾರ್ಥಿಗಳು, ಪಾಲಕರಿಲ್ಲದ ಮಕ್ಕಳನ್ನು ಗುರುತಿಸಿ ಅಂತಹ ಮಕ್ಕಳಿಗೆ ಶಾಲೆಯಲ್ಲಿ ಲಭ್ಯವಿರುವ ಸಂಪನ್ಮೂಲಗಳನ್ನು ಬಳಸಿ ಅಥವಾ ದಾನಿಗಳ ನೆರವನ್ನು ಪಡೆದು, ಇಲ್ಲವೇ ದತ್ತು ಪಡೆದು ವಿದ್ಯಾಭ್ಯಾಸಕ್ಕೆ ಅನುಕೂಲ ಕಲ್ಪಿಸಬೇಕು.

- ಶಾಲೆಯ ಅಕ್ಷರ ದಾಸೋಹದಲ್ಲಿ ಇಲಾಖಾ ನಿಯಮಗಳನ್ನು ಪಾಲಿಸುತ್ತಾ ಮಕ್ಕಳ ಹಸಿವನ್ನು ನೀಗಿಸಿ ಕಲಿಕೆಯಲ್ಲಿ ಸಕ್ರೀಯವಾಗಿ ಭಾಗವಹಿಸುವಂತೆ ಮಾಡುವಿಕೆಯಲ್ಲಿ ಪ್ರಯತ್ನಿಸುವುದು.

- ಶಾಲಾ ಶಿಕ್ಷಕರಿಗೆ ಕಲಿಕಾ ಪ್ರಕ್ರಿಯೆಗೆ ಅಗತ್ಯವಿರುವ ಬೆಂಬಲ ನೀಡುವದರ ಜೊತೆಗೆ ಬಳಸಬಹುದಾದ ಸಾಮಗ್ರಿಗಳ ಪರಿಚಯವನ್ನು ಮಾಡುವುದು.
- ಸದೃಡ ದೇಹದಲ್ಲಿ ಸದೃಡ ಮನಸ್ಸು ಇರುವ ಹೇಳಿಕೆಗೆ ಪುಷ್ಠೀಕರಿಸುವಂತಹ ಚಟುವಟಿಕೆಗಳನ್ನು ರೂಪಿಸಿಅನುಷ್ಠಾನವಾಗುವಂತೆ ನಿಗಾವಹಿಸಿ ಸಂಬಂಧಿಸಿದವರಿಗೆ ಮಾರ್ಗದರ್ಶನ ಮಾಡುವುದು.
- ದೈಹಿಕ ಚಟುವಟಿಕೆಗಳಿಗೆ ಸಂಬಂಧಿಸಿದ ಶಾಲೆಯಲ್ಲಿ ಲಭ್ಯವಿರುವ ಪರಿಕರಗಳನ್ನು ಬಳಸುವಂತೆ ಶಿಕ್ಷಕರಿಗೆ ಪ್ರೇರೆಪಿಸಿ, ಅಗತ್ಯ ಸಹಕಾರ ನೀಡುವುದು.
- ತರಗತಿ ಪ್ರಕ್ರಿಯೆಯಲ್ಲಿ ಶಿಕ್ಷಕರು ತೊಡಗಿಸಿಕೊಂಡು ಮಕ್ಕಳ ಓದು, ಬರವಣಿಗೆಯನ್ನು ಗಮನಿಸಿ ಶುದ್ಧ ಬರಹ ಮತ್ತು ಸ್ವರಭಾರಯುಕ್ತ ಓದುವಿಕೆಗೆ ಯೋಜನೆಯನ್ನು ಸಿದ್ದಪಡಿಸಿ ಅನುಷ್ಠಾನ ಮಾಡುವುದನ್ನು ಮೇಲ್ವೀಚಾರಣೆ ನಡೆಸುವುದು.
- ಉತ್ತಮ ಸಂವಹನಕ್ಕಾಗಿ ಶಾಲೆಯಲ್ಲಿ ಕಥೆ ಹೇಳುವಿಕೆ, ಸಂಭಷಣೆಗಳು, ನಾಟಕ, ರೂಪಕಗಳು ಹಾಗು ಇನ್ನಿತರ ಪೂರಕ ಸನ್ನಿವೇಶಗಳನ್ನು ಸೃಷ್ಠಿಸಿ, ಯೋಜಿಸಿ ಅನುಷ್ಠಾನ ಮಾಡುವುದು.
- ಮಗುವಿನ ಕಲಿಕೆಯನ್ನು ಆಗಾಗ ಗಮನಿಸಿ ಪ್ರೋತ್ಸಾಹವನ್ನು ನೀಡಲು ಶಾಲಾ ಪ್ರಾರ್ಥನಾ ವೇಳೆಯನ್ನು ಸದುಪಯೋಗಪಡಿಸಿಕೊಳ್ಳಲು ಯೋಜನೆ ಮಾಡಿಕೊಳ್ಳುವುದು.
- ಶಾಲಾ ಚಟುವಟಿಕೆಗಳನ್ನು ರೂಪಿಸುವಾಗ

**ಸರಕಾರಿ ಪ್ರೌಢಶಾಲೆ ತಳೇವಾಡದ ಯಶೋಗಾಥೆ** https://youtu.be/BSKd6YoC44I

**ನನ್ನ ಕಲಿಕೆ–ನನ್ನ ಯೋಜನೆ**

(ಕಾರ್ಯಾಗಾರದಲ್ಲಿ ಪಡೆದ ಅನುಭವಗಳನ್ನು ನನ್ನ ಕಾರ್ಯಕ್ಷೇತ್ರದಲ್ಲಿ ಅನುಷ್ಠಾನಗೊಳಿಸಲು ನಾನು ರೂಪಿಸಿಕೊಂಡ ಯೋಜನೆ)

ಶಿಬಿರಾರ್ಥಿಯ ಹೆಸರು ಮತ್ತು ವಿಳಾಸ:

______________________________________________

ಕಾರ್ಯಾಗಾರದ ಹೆಸರು:

______________________________________________

ಕಾರ್ಯಾಗಾರದ ದಿನಾಂಕ:____________________ ಸ್ಥಳ:______________________________

ಈ ಕಾರ್ಯಾಗಾರದಲ್ಲಿ ನನ್ನ ಕಲಿಕೆ ಮತ್ತು ಒಳನೋಟಗಳು ಹಾಗೂ ಮುಂದಿನ ಕ್ರಿಯಾಯೋಜನೆ

ನನ್ನ ಕಲಿಕೆ, ಒಳನೋಟಗಳು & ಈ ಕಾರ್ಯಾಗಾರದಿಂದ ನನ್ನಲ್ಲಾದ ಬದಲಾವಣೆಗಳು, ಈ ಕಲಿಕೆ/ ಒಳನೋಟಗಳು, ಅನುಷ್ಠಾನಕ್ಕೆ ನಾನು ರೂಪಿಸಿಕೊಂಡ ಯೋಜನಾ ಕ್ರಮಗಳು, ಒಳನೋಟಗಳನ್ನು ಬಳಸಬಹುದಾದ ಸಂದರ್ಭಗಳು/ ಅವಧಿ/ತಿಂಗಳು, ಅನುಷ್ಠಾನಗೊಳಿಸಿದ ಬಗೆ

(ಸಂಕ್ಷಿಪ್ತವಾಗಿ ನಂತರ ದಾಖಲಿಸಿ)

1. **ಕಾರ್ಯಾಗಾರದಿಂದ ನನಗಾದ ಕಲಿಕೆ ಮತ್ತು ಒಳನೋಟ**

2. **ಕಾರ್ಯಾಗಾರದಿಂದ ನನ್ನಲ್ಲಾದ ಬದಲಾವಣೆಗಳು**

3. **ಶಾಲಾ/ಕ್ಲಸ್ಟರ್/ವಲಯ ಹಂತದಲ್ಲಿ ಅನುಷ್ಠಾನಗೊಳಿಸುವ ಕ್ರಿಯಾಯೋಜನೆ**
4.

| ಕ್ರ.ಸಂ. | ನಿರ್ದಿಷ್ಟಕಾರ್ಯ | ಉದ್ದೇಶ ಮತ್ತು ನಿರೀಕ್ಷಿತ ಫಲಿತಾಂಶಗಳು | ಅನುಷ್ಠಾನದ ಕಾರ್ಯತಂತ್ರಗಳು | ಕಾಲಮಿತಿ | ಪರಿಶೀಲನೆ | ಜವಾಬ್ದಾರರು | ಷರಾ |
|---|---|---|---|---|---|---|---|
| | | | | | | | |

**ದಿನಾಂಕ:** **ಶಿಬಿರಾರ್ಥಿಯ ಸಹಿ ಮತ್ತು ದೂರವಾಣಿ ಸಂಖ್ಯೆ**

# ಅಧ್ಯಾಯ–6

## ಕಾರ್ಯಾಗಾರದ ವಿನ್ಯಾಸ

**ಉದ್ದೇಶಗಳು:**

- ಸುಸ್ಥಿರ ಅಭಿವೃದ್ಧಿ ಎಂಬುದನ್ನು ಪರಿಚಯಿಸುವುದರ ಮೂಲಕ ಅದರ ಪ್ರಾಮುಖ್ಯತೆಯನ್ನು ವಿಶ್ಲೇಷಿಸುವರು.
- ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ಪರಿಚಯಿಸುವ ಮೂಲಕ ಭವಿಷ್ಯದ ಹೊಣೆಗಾರಿಕೆಯ ಅರಿವು ಮೂಡಿಸುವುದು.
- ಶಿಕ್ಷಣಕ್ಕೆ ಸಂಬಂಧಿಸಿದ ಸುಸ್ಥಿರ ಅಭಿವೃದ್ಧಿಯ ಗುರಿಗಳ ಅನುಷ್ಠಾನದಲ್ಲಿ ಶಾಲಾ/ಶೈಕ್ಷಣಿಕ ನಾಯಕರ ಪಾತ್ರ ಮತ್ತು ಜವಾಬ್ದಾರಿಗಳನ್ನು ಪರಿಶೀಲಿಸುವರು.
- ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ಈಡೇರಿಕೆಯಲ್ಲಿ ಕ್ರಿಯಾಯೋಜನೆ ಸಿದ್ಧಪಡಿಸಿ, ಅದರ ಅನುಷ್ಠಾನದ ಕಾರ್ಯತಂತ್ರಗಳನ್ನು ಕಂಡುಕೊಳ್ಳುವರು.

**ಪ್ರಕ್ರಿಯೆ**

**ದಿನ –1**

**ಅಧಿವೇಶನ–1: ಸ್ವಾಗತ, ಪ್ರಾಸ್ತಾವಿಕ, ಪರಿಚಯ ಮತ್ತು ನಿರೀಕ್ಷೆಗಳು, ಗುಂಪು ರಚನೆ, ಜವಾಬ್ದಾರಿ ಹಂಚಿಕೆ**

**ಸಮಯ–90 ನಿಮಿಷ**

**ಉದ್ದೇಶ/ನಿರೀಕ್ಷಿತ ಕಲಿಕಾ ಫಲ:**

- ಕಾರ್ಯಾಗಾರದ ಸಾಂದರ್ಭಿಕತೆಯನ್ನು ಅರ್ಥೈಸಿಕೊಳ್ಳುವುದು.

**ಪ್ರಕ್ರಿಯೆ:**

ಎಲ್ಲಾ ಶಿಬಿರಾರ್ಥಿಗಳನ್ನು ಸ್ವಾಗತಿಸುವುದು. ನಂತರ ಈ ಕಾರ್ಯಗಾಂದ ಆಯೋಜನೆ, ಇದರ ಉದ್ದೇಶ, ಪ್ರಸ್ತುತ ಸಂದರ್ಭದಲ್ಲಿ ಸುಸ್ಥಿರ ಅಭಿವೃದ್ಧಿಯ ಗುರಿಗಳ ಈಡೇರಿಕೆಯ ಅವಶ್ಯಕತೆ ಮತ್ತು ಹೊಣೆಗಾರಿಕೆಯ ಬಗ್ಗೆ ಸಂವಾದದ ಮೂಲಕ ಪರಸ್ಪರ ಹಂಚಿಕೊಳ್ಳಲು ಅವಕಾಶ ಮಾಡುವುದು. ನಂತರ ವೈಯಕ್ತಿಕ ಪರಿಚಯ ಮಾಡಿಕೊಳ್ಳಲು ಸೂಚಿಸುವುದು. ಪರಿಚಯಿಸುವಾಗ ಒಂದು ಸುಸ್ಥಿರ ಅಭಿವೃದ್ಧಿಯ ಗುರಿಯೊಂದನ್ನು ಹೇಳಿ ಪರಿಚಯಿಸಿಕೊಳ್ಳಲು ಸೂಚಿಸುವುದು. ನಂತರ ಶಿಬಿರಾರ್ಥಿಗಳು ಕಾರ್ಯಾಗಾರದ ಬಗ್ಗೆ ಅವರಿಗಿರುವ ನಿರೀಕ್ಷೆಯನ್ನು ಹಂಚಿಕೊಳ್ಳುವುದು, ಸುಗಮಕಾರರು ಅವುಗಳನ್ನು ಪಟ್ಟಿ ಮಾಡುವುದು, ನಂತರ ಸುಗಮಕಾರರು ಗುಂಪುಗಳಾಗಿ ಶಿಬಿರಾರ್ಥಿಗಳನ್ನು ವಿಂಗಡಿಸಿ, ಜವಾಬ್ದಾರಿಗಳನ್ನು ಹಂಚಿಕೊಳ್ಳುವುದು. ಕೊನೆಯಲ್ಲಿ ಎಲ್ಲರಿಗೂ ಅಭಿನಂಧಿಸುವುದರ ಮೂಲಕ ಮುಂದಿನ ಅಧಿವೇಶನಕ್ಕೆ ಸಾಗುವುದು.

**ಅವಶ್ಯಕ ಸಾಹಿತ್ಯ ಮತ್ತು ಕಲಿಕಾ ಸಾಮಗ್ರಿ:** ಮಾರ್ಕರ್, ಸುಸ್ಥಿರ ಅಭಿವೃದ್ಧಿ ಗುರಿಗಳ ಅವಶ್ಯಕತೆ ಕುರಿತು ಸುಗಮಕಾರರಿಗೆ ಒಂದು ಟಿಪ್ಪಣಿ.

**ಸುಗಮಕಾರರಿಗೆ ಸೂಚನೆ:** ಪ್ರತಿ ಅವಧಿಯ ಕೊನೆಯಲ್ಲಿ, ಶಿಬಿರಾಥಿಗಳಿಂದ ಹಿಮ್ಮಾಹಿತಿ ಪಡೆಯುವುದು ಮತ್ತು ಚಿಂತನೆಗೆ ಕೆಲವು ಪ್ರಶ್ನೆಗಳನ್ನು ಕೇಳುವುದು.

**ಅಧಿವೇಶನ–2: ಸುಸ್ಥಿರ ಅಭಿವೃದ್ಧಿಯ ಗುರಿಗಳು, ಗುರಿಗಳ ಪರಿಚಯ ಮತ್ತು ಅವುಗಳ ಮಹತ್ವ**

**ಸಮಯ: 90 ನಿಮಿಷಗಳು**

**ಉದ್ದೇಶ/ನಿರೀಕ್ಷಿತ ಕಲಿಕಾ ಫಲ:**

- ಸುಸ್ಥಿರ ಅಭಿವೃದ್ಧಿಯ ಗುರಿಗಳ ಪರಿಚಯ ಮಾಡಿಕೊಳ್ಳುವುದು.

- ಸುಸ್ಥಿರ ಅಭಿವೃದ್ಧಿಯ ಗುರಿಗಳು ಮತ್ತು ಅವುಗಳ ಹಿಂದಿರುವ ತಾರ್ಕಿಕತೆ ಮತ್ತು ಆಶಯವನ್ನು ಅರ್ಥೈಸಿಕೊಳ್ಳುವುದು.
- ಸುಸ್ಥಿರ ಅಭಿವೃದ್ಧಿಯ ಗುರಿಗಳ ಈಡೇರಿಕೆಯಲ್ಲಿ ತನ್ನ ಹೊಣೆಗಾರಿಕೆಯನ್ನು ಅರ್ಥೈಸಿಕೊಳ್ಳುವುದು.

**ಪ್ರಕ್ರಿಯೆ :**

(ಹಂತ –1: 45 ನಿಮಿಷ) ಎಲ್ಲರಿಗೂ ಅಧಿವೇಶನಕ್ಕೆ ಸ್ವಾಗತಿಸುತ್ತಾ, ಶಿಬಿರಾರ್ಥಿಗಳನ್ನು ಚಿಕ್ಕ ಚಿಕ್ಕ ಗುಂಪುಗಳಲ್ಲಿ ವಿಂಗಡನೆ ಮಾಡುವುದು. ನಂತರ ಪ್ರತಿ ಗುಂಪಿಗೆ ಸುಸ್ಥಿರ ಅಭಿವೃದ್ಧಿಯ ಪರಿಚಯ ಮತ್ತು ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ಪಟ್ಟಿ ಮಾಡಲು ತಿಳಿಸುವುದು. ಇದಕ್ಕೆ ಅವರು ಯಾವುದೇ ಸಾಹಿತ್ಯವನ್ನು ಬಳಸದೆ, ಸ್ವತ: ತಂಡದಲ್ಲಿ ಚರ್ಚಿಸಿ, ಅವರ ಗ್ರಹಿಕೆಯಂತೆ ಪ್ರಮುಖ ಅಂಶಗಳನ್ನು ಚಾರ್ಟ್‌ನಲ್ಲಿ ಬರೆಯಲು ಸೂಚಿಸುವುದು.

(ಹಂತ–2: 45 ನಿಮಿಷ) ನಂತರ ಈಗಾಗಲೇ ನಿರ್ಧರಿಸಿದ ಸುಸ್ಥಿರ ಅಭಿವೃದ್ಧಿಯ ಗುರಿಗಳ ಟಿಪ್ಪಣಿಯನ್ನು ಕೊಟ್ಟು ಓದಲು ಅವಕಾಶ ಮಾಡುವುದು. ಪ್ರತಿ ಗುಂಪಿಗೆ ಆಯ್ದ ಗುರಿಗಳನ್ನು ಕೊಟ್ಟು, ವಿವರವಾಗಿ ಓದಿ, ಅರ್ಥೈಸಿಕೊಂಡು, ದೊಡ್ಡ ಗುಂಪಿನಲ್ಲಿ ಮಂಡಿಸಲು ತಿಳಿಸುವುದು. ಪ್ರತಿ ಗುಂಪು ನಿರ್ದಿಷ್ಟ/ಸೂಚಿಸಿದ ಗುರಿಗಳನ್ನು ಚರ್ಚಿಸಿ ದೊಡ್ಡ ಗುಂಪಿನಲ್ಲಿ ಮಂಡನೆ ಮಾಡುವುದರಿಂದ ಎಲ್ಲರಿಗೂ ಎಲ್ಲಾ ಗುರಿಗಳ ಬಗ್ಗೆ ತಿಳಿದುಕೊಳ್ಳಲು ಅವಕಾಶವಾಗುವುದು.

ಅಧಿವೇಶನದ ಕೊನೆಯಲ್ಲಿ ಈ ಗುರಿಗಳನ್ನು ನಿರ್ಧರಿಸಲು ಕಾರಣವಾದ ಹಿನ್ನೆಲೆ, ತಾರ್ಕಿಕತೆಗಳನ್ನು ಚರ್ಚಿಸಿ, ಶಿಬಿರಾರ್ಥಿಗಳಿಂದ ಉತ್ತರ ಪಡೆಯುವುದು, ಅವಶ್ಯಕ ಮಾಹಿತಿಯನ್ನು ಹಂಚಿಕೊಳ್ಳುವುದು. ನಂತರ ಅಧಿವೇಶನದ ಬಗ್ಗೆ ಅಭಿಪ್ರಾಯ ಹಂಚಿಕೊಳ್ಳಲು ಅವಕಾಶ ಮಾಡುವುದು.

**ಅವಶ್ಯಕ ಸಾಹಿತ್ಯ ಮತ್ತು ಕಲಿಕಾ ಸಾಮಗ್ರಿ :** ಚಾರ್ಟ್ಸ್, ಮಾರ್ಕರ್ ಪೆನ್ನುಗಳು, ಸುಸ್ಥಿರ ಅಭಿವೃದ್ಧಿ ಅಂದರೇನು ಮತ್ತು ಗುರಿಗಳ ಬಗೆಗಿನ ಟಿಪ್ಪಣಿ, ಸುಸ್ಥಿರ ಅಭಿವೃದ್ದಿಯ ಗುರಿಗಳನ್ನು ಅರ್ಥೈಸಿಕೊಳ್ಳಲು ಪೂರಕ ಸಾಹಿತ್ಯ, ಕೆಲವು ವರದಿ, ಸಶೋಧನೆಗಳ ಟಿಪ್ಪಣಿ ಮತ್ತು ವಿಡಿಯೊ ಲಿಂಕ್‌ಗಳು ಇತ್ಯಾದಿ.

**ಅಧಿವೇಶನ–3: ಶಿಕ್ಷಣಕ್ಕೆ ಸಂಬಂಧಿಸಿದ ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಶಾಲಾ ಶಿಕ್ಷಣದಲ್ಲಿ ಅನುಷ್ಠಾನಗೊಳಿಸುವ ಕಾರ್ಯತಂತ್ರಗಳು**
**ಸಮಯ: 90 ನಿಮಿಷ**
**ಉದ್ದೇಶ/ನಿರೀಕ್ಷಿತ ಕಲಿಕಾ ಫಲ:**

- ಶಿಕ್ಷಣಕ್ಕೆ ಸಂಬಂಧಿಸಿದ ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ಗುರುತಿಸಿ, ಪಟ್ಟಿ ಮಾಡುವುದು.
- ಶಾಲಾ ಮತ್ತು ತರಗತಿ ಹಂತದಲ್ಲಿ ಅವುಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಇರುವ ಸಾಧ್ಯತೆ ಮತ್ತು ಕಾರ್ಯತಂತ್ರಗಳನ್ನು ವಿಶ್ಲೇಷಿಸುವರು.

**ಪ್ರಕ್ರಿಯೆ :**

ಮೊದಲಿಗೆ ಸುಗಮಕಾರರು ಮಂಥನದ ಮೂಲಕ ಶಿಕ್ಷಣಕ್ಕೆ ಸಂಬಂಧಿಸಿದ ಸುಸ್ಥಿರ ಅಭಿವೃದ್ಧಿಯ ಗುರಿಗಳನ್ನು ಗುರುತಿಸಲು ಸೂಚಿಸಿ, ದೊಡ್ಡ ಗುಂಪಿನಲ್ಲಿ ಸಂವಾದಿಸುತ್ತಾ, ಬೋರ್ಡ/ಚಾರ್ಟ ನ ಮೇಲೆ ಪಟ್ಟಿ ಮಾಡುವುದು. ನಂತರ ಶಿಬಿರಾರ್ಥಿಗಳನ್ನು ಚಿಕ್ಕ ಚಿಕ್ಕ 7 ಗುಂಪುಗಳಲ್ಲಿ ವಿಂಗಡಿಸಿ, ಪ್ರತಿ ಗುಂಪಿಗೆ ಒಂದು ಗುರಿಯನ್ನು ಕೊಟ್ಟು, ಅದನ್ನು ಶಾಲೆಯಲ್ಲಿ ಅನುಷ್ಟಾನ ಮಾಡಲು ಇರುವ ಸಾಧ್ಯತೆ ಮತ್ತು ಅದಕ್ಕೆ ಬೇಕಾದ ಕಾರ್ಯತಂತ್ರಗಳನ್ನು ಚರ್ಚಿಸಿ ಪಟ್ಟಿ ಮಾಡಲು ಸೂಚಿಸುವುದು. ನಂತರ ದೊಡ್ಡ ಗುಂಪಿನಲ್ಲಿ ಮಂಡನೆಗೆ ಅವಕಾಶ ಮಾಡುವ ಮೂಲಕ ಪ್ರತಿಯೊಬ್ಬರು ಸುಸ್ಥಿರ ಅಭಿವೃದ್ಧಿ ಗುರಿಗಳ ಅನುಷ್ಠಾನದ ಬಗ್ಗೆ ಸ್ಪಷ್ಟತೆ ಪಡೆದುಕೊಳ್ಳಲು ಅವಕಾಶ ಮಾಡುವುದು. ಕೊನೆಯಲ್ಲಿ ಎಲ್ಲಾ ಅಂಶಗಳನ್ನು ಕ್ರೋಢೀಕರಿಸುವುದು, ಶಿಬಿರಾರ್ಥಿಗಳಿಂದ ಅವರ ಅನಿಸಿಕೆ ಹಂಚಿಕೊಳ್ಳಲು ಅವಕಾಶ ಮಾಡುವುದು.

**ಅವಶ್ಯಕ ಸಾಹಿತ್ಯ ಮತ್ತು ಕಲಿಕಾ ಸಾಮಗ್ರಿ:** ಶಿಕ್ಷಣದ ಗುರಿಗಳಿಗೆ ಸಂಬಂಧಿಸಿದ ಟಿಪ್ಪಣಿ ಮತ್ತು ಪ್ರಕರಣ ಅಧ್ಯಯನಗಳು, ಸಾಧ್ಯತೆ ಮತ್ತು ಕಾರ್ಯತಂತ್ರಗಳ ಪಟ್ಟಿ, ಮಾರ್ಕರ ಪೆನ್ನುಗಳು, ಚಾರ್ಟ್ಸ ಇತ್ಯಾದಿ.

**ಅಧಿವೇಶನ–4: ಸುಸ್ಥಿರ ಅಭಿವೃದ್ಧಿ ಗುರಿಗಳ ಈಡೇರಿಕೆಯಲ್ಲಿ ಶಾಲಾ/ಶೈಕ್ಷಣಿಕ ನಾಯಕರ ಪಾತ್ರ ಮತ್ತು ಜವಾಬ್ದಾರಿಗಳು**
**ಸಮಯ: 90 ನಿಮಿಷ**
**ಉದ್ದೇಶ/ನಿರೀಕ್ಷಿತ ಕಲಿಕಾ ಫಲ:**

- ಶಿಕ್ಷಣಕ್ಕೆ ಸಂಬಂಧಿಸಿದ ಸುಸ್ಥಿರ ಅಭಿವೃದ್ಧಿಯ ಗುರಿಗಳ ಈಡೇರಿಕೆಯಲ್ಲಿ ಶಾಲಾ/ಶೈಕ್ಷಣಿಕ ನಾಯಕರ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ಚರ್ಚಿಸಿ, ಅನುಷ್ಠಾನ ಮಾಡಲು ಸಿದ್ಧಗೊಳ್ಳುವರು.
- ಇತರೆ ಭಾಗೀದಾರರ ಪಾತ್ರ ಮತ್ತು ಜವಾಬ್ದಾರಿಗಳನ್ನು ಅರ್ಥೈಸಿಕೊಂಡು ಅವರು ಪಾಲ್ಗೊಳ್ಳಲು ಸಿದ್ಧಗೊಳ್ಳುವರು.

**ಪ್ರಕ್ರಿಯೆ :**

ಸುಗಮಕಾರರು ದೊಡ್ಡ ಗುಂಪಿನಲ್ಲಿ ಸುಸ್ಥಿರ ಅಭಿವೃದ್ಧಿ ಗುರಿಗಳ ಈಡೇರಿಕೆಯಲ್ಲಿ ಶಾಲಾ/ಶೈಕ್ಷಣಿಕ ನಾಯಕರ ಪಾತ್ರ ಮತ್ತು ಜವಾಬ್ದಾರಿಗಳೇನು ಎಂದು ಕೇಳುತ್ತಾ, ಹಂಚಿಕೊಂಡಿರುವ ಕೆಲವು ಅಂಶಗಳನ್ನು ಪಟ್ಟಿ ಮಾಡುವುದು. ನಂತರ ಚಿಕ್ಕ ಗುಂಪಿನಲ್ಲಿ ಶಿಬಿರಾರ್ಥಿಗಳನ್ನು ವಿಂಗಡಿಸಿ, ಪ್ರತಿ ಗುಂಪಿಗೆ ಒಂದು ನಿರ್ದಿಷ್ಟ ಭಾಗೀದಾರರನ್ನು ಸೂಚಿಸಿ ಅವರ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ಚರ್ಚಿಸಿ, ಪಟ್ಟಿ ಮಾಡಲು ತಿಳಿಸುವುದು. ಉದಾಹರಣೆಗೆ ಶಿಕ್ಷಕರು, ಮುಖ್ಯಶಿಕ್ಷಕರು, ಎಸ್.ಡಿ.ಎಂ.ಸಿ, ಸಿ.ಆರ್.ಪಿ, ಬಿ.ಆರ್.ಪಿ ಮತ್ತು ತಾಲ್ಲೂಕು ಹಂತದ ಅಧಿಕಾರಿಗಳು (ಬಿ.ಇ.ಓ/ಬಿ.ಆರ್.ಸಿ.). ಮತ್ತು ಉನ್ನತ ಹಂತದ ಅಧಿಕಾರಿ ವರ್ಗ. ಗುಂಪು ಚರ್ಚೆಯ ನಂತರ ದೊಡ್ಡ ಗುಂಪಿನಲ್ಲಿ ಮಂಡನೆಗೆ ಅವಕಾಶ ಮಾಡುವುದು. ಪ್ರತಿಯೊಬ್ಬರೂ ಎಲ್ಲಾ ಭಾಗೀದಾರರ ಪಾತ್ರ ಮತ್ತು ಜವಾಬ್ದಾರಿಗಳ ಬಗ್ಗೆ ತಿಳಿದುಕೊಳ್ಳಲು ಮತ್ತು ತಮ್ಮ ಜವಾಬ್ದಾರಿಗಳ ಬಗ್ಗೆ ಹೆಚ್ಚು ಮುತುವರ್ಜಿಯನ್ನು ವಹಿಸಿಕೊಳ್ಳುವಂತೆ ಪ್ರೇರೇಪಿಸುವುದು. ಕೊನೆಯಲ್ಲಿ ಪ್ರಮುಖ ಅಂಶಗಳನ್ನು ಕ್ರೋಢೀಕರಿಸಿ ಮುಂದಿನ ಅಧಿವೇಶನಕ್ಕೆ ಸಾಗುವುದು.

**ಅವಶ್ಯಕ ಸಾಹಿತ್ಯ ಮತ್ತು ಕಲಿಕಾ ಸಾಮಗ್ರಿ:** ಚಾರ್ಟ್ಸ, ಮಾರ್ಕರ್ ಪೆನ್ನುಗಳು, ಶಾಲಾ/ಶೈಕ್ಷಣಿಕ ನಾಯಕರ ಪಾತ್ರ ಮತ್ತು ಜವಾಬ್ದಾರಿಗಳ ಬಗೆಗಿನ ಟಿಪ್ಪಣಿ, ಸಾಧಕರ ವಿಡಿಯೊ ಲಿಂಕ್‌ಗಳು.

**ಅಧಿವೇಶನ–5: ಕ್ರಿಯಾಯೋಜನೆಯ ಸಿದ್ಧತೆ**
**ಸಮಯ: 90 ನಿಮಿಷ**
**ಉದ್ದೇಶ/ನಿರೀಕ್ಷಿತ ಕಲಿಕಾ ಫಲ:**

- ಒಟ್ಟು ಕಾರ್ಯಗಾರದ ಆಶಯ ಆಧರಿಸಿ, ಪ್ರತಿಯೊಬ್ಬ ಶಿಬಿರಾರ್ಥಿಯ ಕ್ರಿಯಾ ಯೋಜನೆಯನ್ನು ಸಿದ್ಧಪಡಿಸಿ, ದೊಡ್ಡಗುಂಪಿನಲ್ಲಿ ಹಂಚಿಕೊಳ್ಳುವರು.
- ಕ್ರಿಯಾ ಯೋಜನೆಯ ಅನುಷ್ಠಾನಕ್ಕೆ ಶಿಬಿರಾರ್ಥಿಗಳು ಸಿದ್ಧಗೊಳ್ಳುವರು.

**ಪ್ರಕ್ರಿಯೆ :**

ಒಟ್ಟು ಕಾರ್ಯಾಗಾರವನ್ನು ಸಾರಾಂಶೀಕರಿಸಿ, ಪ್ರಸ್ತುತ ನಾವು ಯಾವ ಘಟ್ಟದಲ್ಲಿದ್ದೇವೆ ಹಾಗೂ ಕಾರ್ಯಾಗಾರದ ಆಶಯ ಈಡೇರಿಕೆಯಲ್ಲಿ ಕ್ರಿಯಾ ಯೋಜನೆಯ ಮಹತ್ವದ ಬಗ್ಗೆ ಉಲ್ಲೇಖಿಸುತ್ತಾ ಕ್ರಿಯಾ ಯೋಜನೆಯ ನಮೂನೆಯನ್ನು ಪರಿಚಯ ಮಾಡಿಕೊಡುವುದು. ಪ್ರತಿಯೊಬ್ಬರು ಚಿಕ್ಕ ಗುಂಪಿನಲ್ಲಿ ಕುಳಿತು, ವೈಯಕ್ತಿಕವಾಗಿ ಕ್ರಿಯಾಯೋಜನೆಯನ್ನು ಸಿದ್ಧಪಡಿಸಲು ಅವಕಾಶ ಮಾಡುವುದು. ನಂತರ ಪ್ರತಿಯೊಬ್ಬರೂ ತಾವು ಸಿದ್ಧಪಡಿಸಿದ ಕ್ರಿಯಾಯೋಜನೆ ಎಲ್ಲರೊಟ್ಟಿಗೆ ಹಂಚಿಕೊಳ್ಳಲು ಅವಕಾಶ ಮಾಡುತ್ತಾ ಪರಸ್ಪರರ ಕಲಿಕೆಗೆ ಉತ್ತೇಜಿಸುವುದು. ಕೊನೆಯಲ್ಲಿ

ಅವರೆಲ್ಲರ ಭಾಗವಹಿಸುವಿಕೆಗೆ ಅಭಿನಂದಿಸುತ್ತಾ, ಕ್ರಿಯಾಯೋಜನೆಯ ಪರಿಣಾಮಕಾರಿ ಅನುಷ್ಠಾನಕ್ಕೆ ಕೆಲವು ಪ್ರಮುಖ ಅಂಶಗಳನ್ನು ಪ್ರಸ್ತಾಪಿಸಿ ಶುಭಕೋರುವುದು.

**ಅವಶ್ಯಕ ಸಾಹಿತ್ಯ ಮತ್ತು ಕಲಿಕಾ ಸಾಮಗ್ರಿ:** ಕ್ರಿಯಾಯೋಜನೆಯ ನಮೂನೆ, ಸುಗಮಕಾರರಿಗೆ ಪೂರಕ ಟಿಪ್ಪಣಿ.

**ಕಾರ್ಯಾಗಾರಕ್ಕೆ ಬರುವ ಮುಂಚೆ ಸಂಗ್ರಹಿಸಿರಬೇಕಾದ ಮಾಹಿತಿ.**

- ಹೆಚ್ಚು ಜನ ಸೇರುವಂತಹ ವಿವಿಧ ಕಾರ್ಯಕ್ರಮಗಳಲ್ಲಿ ನಡೆಯುವ ದುಂದು ವೆಚ್ಚದ ಮಾಹಿತಿ.
- ಮಕ್ಕಳ ಹಕ್ಕುಗಳ ಉಲ್ಲಂಘನೆ ಆದಂತಹ ಕೆಲವು ಘಟನೆಗಳ ಉಲ್ಲೇಖ/ಟಿಪ್ಪಣಿಗಳು
- ಶೌಚಾಲಯದ ಬಳಕೆ ಮತ್ತು ಸವಾಲುಗಳು
- ಶಾಲೆಗೆ ಬರುವ ಮಕ್ಕಳ ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ, ಶೈಕ್ಷಣಿಕ ಪೋಷಕರ ಉದ್ಯೋಗದ ಹಿನ್ನೆಲೆಯ ವಿಶ್ಲೇಷಣೆಯ ಪಟ್ಟಿ
- ಬೆಳಗಿನ ಉಪಹಾರ ಮಾಡದೇ ಬರುವ ಮಕ್ಕಳ ಸಂಖ್ಯೆ ಮತ್ತು ಸಂಕ್ಷಿಪ್ತ ವಿವರಣೆ (ನೀವು ಗಮನಿಸಿದ ಅಂಶಗಳು)
- ಸುಸ್ಥಿರ ಅಭಿವೃದ್ಧಿ ಗುರಿಗಳು ಮಕ್ಕಳ ಹಕ್ಕುಗಳ ಈಡೇರಿಕೆಗೆ ಹೆಚ್ಚು ಪ್ರಭಾವ ಬೀರುತ್ತವೆ. ಮಕ್ಕಳ ಹಕ್ಕುಗಳನ್ನು ಸುಸ್ಥಿರ ಅಭಿವೃದ್ಧಿಯ ಗುರಿಗಳೊಂದಿಗೆ ಸಂಬಂಧೀಕರಿಸುವುದು.
- ಶಾಲಾ ಪ್ರಾರಂಭೋತ್ಸವಕ್ಕೆ ಮಾಡಿರುವ ಸಿದ್ಧತೆಯ ವಿವರ.

**ಕಾರ್ಯಾಗಾರದ ವೇಳಾಪಟ್ಟಿ :**

| ಕ್ರ.ಸಂ | ಅಧಿವೇಶನದ ಶೀರ್ಷಿಕೆ | ಸಮಯ/ಕಾಲಾವಧಿ | ಸುಗಮಕಾರರು | ಷರಾ |
|---|---|---|---|---|
| | | ದಿನ–01 | | |
| 1. | ಅಧಿವೇಶನ–1: ಕಾರ್ಯಾಗಾರದ ಸಾಂದರ್ಭಿಕತೆಯನ್ನು ಅರ್ಥೈಸಿಕೊಳ್ಳುವುದು | 10.00 – 11.30 | | ಸ್ವಾಗತ, ಪ್ರಸ್ತಾವನೆ, ಪರಿಚಯ (ಭಾಗಾರ್ಥಿಗಳ ಮತ್ತು ಕಾರ್ಯಾಗಾರದ), ನಿರೀಕ್ಷೆಗಳು, ಗುಂಪು ರಚನೆ ಮತ್ತು ಜವಾಬ್ದಾರಿ ಹಂಚಿಕೆ ಈ ಅಧಿವೇಶನದಲ್ಲಿ ಒಳಗೊಂಡಿದೆ. |
| 2. | ಚಹಾ ವಿರಾಮ | 11.30 – 11.45 | | |
| 3. | ಅಧಿವೇಶನ–2: ಸುಸ್ಥಿರ ಅಭಿವೃದ್ಧಿಯ ಗುರಿಗಳು ಪರಿಕಲ್ಪನೆ, ಗುರಿಗಳ ಪರಿಚಯ ಮತ್ತು ಮಹತ್ವ | 11.45 – 01.15 | | |
| 4. | ಊಟದ ವಿರಾಮ | 01.15 – 02.15 | | |
| 5. | ಅಧಿವೇಶನ–3: ಸುಸ್ಥಿರ ಅಭಿವೃದ್ಧಿಯ ಗುರಿಗಳು ಪರಿಕಲ್ಪನೆ, ಗುರಿಗಳ ಪರಿಚಯ ಮತ್ತು ಮಹತ್ವ ಅಧಿವೇಶನ ಮುಂದುವರೆಯುವುದು. | 02.15 – 03.45 | | 04.00 – 04.15 ಚಹಾ ವಿರಾಮ, ಚಹಾ ವಿರಾಮದ ನಂತರವೂ ಅಧಿವೇಶ–2 ಮುಂದುವರೆಯುವುದು. |
| 6. | ಚಹಾ ವಿರಾಮ | 03.45–04.00 | | |

| | | | | |
|---|---|---|---|---|
| 7. | ದಿನ –1 ರ ಬಗ್ಗೆ ಅನಿಸಿಕೆ, ಕಲಿಕೆಯನ್ನು ಹಂಚಿಕೊಳ್ಳಲು ಅವಕಾಶ ಮಾಡುವುದು. | 04.00 – 05.30 | | ಸುಸ್ಥಿರ ಅಭಿವೃದ್ಧಿಯ ಗುರಿಗಳ ಸಾಹಿತ್ಯವನ್ನು ನೀಡಿ, ಸಾಯಂಕಾಲದ ಸಮಯವನ್ನು ವೈಯಕ್ತಿಕ ಓದು ಮತ್ತು ಚಿಂತನೆಗೆ ಬಳಸಲು ಸೂಚಿಸುವುದು. |
| | | ದಿನ –2 | | |
| 8. | ವರದಿ ಮಂಡನೆ ಮತ್ತು ಚಿಂತನೆ | 10.00 – 10.30 | | ಜವಾಬ್ದಾರಿ ಪಡೆದ ಶಿಭಿರಾರ್ಥಿಗಳಿಂದ |
| 9. | ಅಧಿವೇಶನ– 1: ಶಿಕ್ಷಣಕ್ಕೆ ಸಂಬಂಧಿಸಿದ ಸುಸ್ಥಿರ ಅಭಿವೃದ್ಧಿ ಗುರಿಗಳು ಮತ್ತು ಶಾಲಾ ಶಿಕ್ಷಣದಲ್ಲಿ ಅನುಷ್ಠಾನಗೊಳಿಸುವ ಕಾರ್ಯತಂತ್ರಗಳು | 10.30 – 12.00 | | |
| 10. | ಚಹಾ ವಿರಾಮ | 12.00 – 12.15 | | |
| 11. | ಅಧಿವೇಶನ–2: ಸುಸ್ಥಿರ ಅಭಿವೃದ್ಧಿ ಗುರಿಗಳ ಈಡೇರಿಕೆಯಲ್ಲಿ ಶಾಲಾ/ಶೈಕ್ಷಣಿಕ ನಾಯಕರ ಪಾತ್ರ ಮತ್ತು ಜವಾಬ್ದಾರಿಗಳು | 12.15 – 01.45 | | |
| 12. | ಊಟದ ವಿರಾಮ | 01.45 – 02.45 | | |
| 13. | ಕ್ರಿಯಾಯೋಜನೆಯ ಸಿದ್ಧತೆ ಮತ್ತು ಮಂಡನೆ | 02.45 – 04.15 | | ಪ್ರತಿಯೊಬ್ಬರೂ ತಮ್ಮ ಕ್ರಿಯಾ ಯೋಜನೆಯನ್ನು ದೊಡ್ಡ ಗುಂಪಿನಲ್ಲಿ ಮಂಡಿಸುವುದು. |
| 14. | ಚಹಾ ವಿರಾಮ | 04.15–04.30 | | |
| 15. | ಹಿಮ್ಮಾಹಿತಿ, ಮುಂದಿನ ನಡೆ ಮತ್ತು ವಂದನಾರ್ಪಣೆ | 04.30 – 05.30 | | |

**––––00000––––**

ಸಂವಿಧಾನದ ಆಶಯ ಮತ್ತು ಜಾಗತಿಕ ಚಿಂತನೆಗಳಿಗೆ ಅನುಗುಣವಾಗಿ ಶಾಲಾ ಮಟ್ಟದಲ್ಲಿ ಸ್ವಾಯತ್ತತೆ ಹಾಗೂ ಸ್ವಯಂ ಆಡಳಿತವನ್ನು ತರಲು ಶಿಕ್ಷಣಾಧಿಕಾರಿಗಳ ಮನೋಭಾವ, ದೃಷ್ಟಿಕೋನ ಹಾಗೂ ಆಚರಣೆಗಳಲ್ಲಿ ಬದಲಾವಣೆಗಳನ್ನು ತರಬೇಕು. ಈ ಬದಲಾವಣೆ ತರಲು ಅಗತ್ಯವಾದ ಸಾಮರ್ಥ್ಯಾಭಿವೃದ್ಧಿ ಮಾಡುವ ಸಂಸ್ಥೆ ‘ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ’.





ಉತ್ತಮ ನಾಯಕರು ಮತ್ತಷ್ಟು ನಾಯಕರನ್ನು ರೂಪಿಸುತ್ತಾರೆ, ಹಿಂಬಾಲಕರನ್ನಲ್ಲ. – ರಾಲ್ಫ್ ನಾಡರ್.

ರಾಜ್ಯ ಶಾಲಾ ನಾಯಕತ್ವ, ಶೈಕ್ಷಣಿಕ ಯೋಜನೆ ಮತ್ತು ನಿರ್ವಹಣಾ ಸಂಸ್ಥೆ, ಕರ್ನಾಟಕ (SISLEP)
ಡಯಟ್ ಆವರಣ, ಕಾಲೇಜು ರಸ್ತೆ, ಧಾರವಾಡ – 580008

ದೂರವಾಣಿ ಸಂಖ್ಯೆ : 0836-2441129
ಇ-ಮೇಲ್ : sislepdirector.dwd@gmail.com